

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜೂನ್ 21 ಬುಧವಾರ 2023

ಸಂಪುಟ: 44 | ಸಂಚಿಕೆ: 66 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಅನ್ನಭಾಗ್ಯದ ಅಕ್ಕಿ ವಿಚಾರದಲ್ಲಿ ಕಾಂಗ್ರೆಸ್–ಬಿಜೆಪಿ ಕಚ್ಚಾಟ




ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ವಿನೂತನ ಪ್ರತಿಭಟನೆ.

ರಾಜ್ಯಾದ್ಯಂತ ಏಕಕಾಲಕ್ಕೆ ಪ್ರತಿಭಟನೆ

ಬೆಂಗಳೂರು, ಜೂ.20(ಕೆಎಂಶಿ)–ಅನ್ನಭಾಗ್ಯ ಯೋಜನೆಯಡಿ ನೀಡುವ ಅಕ್ಕಿ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ರಾಜಕೀಯವಾಗಿ ಬೇಳೆ ಬೇಯಿಸಿಕೊಳ್ಳಲು ಹೊರಟಿವೆ.

ಒಂದೆಡೆ ಕೇಂದ್ರ ಸರ್ಕಾರ ಈ ಯೋಜನೆಗೆ ಅಕ್ಕಿ ನೀಡಿಲ್ಲವೆಂದು ಮಳೆಯಲ್ಲೂ ರಾಜ್ಯಾದ್ಯಂತ ಪ್ರದೇಶ ಕಾಂಗ್ರೆಸ್ ಪ್ರತಿಭಟನೆ ನಡೆಸಿದರೆ, ವಿಧಾನಸಭಾ ಚುನಾವಣೆಗೂ ಮುನ್ನ ಜನತೆಗೆ ನೀಡಿದ ಭರವಸೆಯಂತೆ ನೀವು ಅಕ್ಕಿ ವಿತರಿಸಿ ಎಂದು ಬಿಜೆಪಿ, ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಬೀದಿಗಿಳಿದು ಅದೇ ಸಮಯಕ್ಕೆ ಪ್ರತಿಭಟಿಸಿತು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮಳೆಯಲ್ಲೂ ಕಾರ್ಯಕರ್ತರ ಜೊತೆಗೂಡಿ ಕೇಂದ್ರದ ನೀತಿ ವಿರುದ್ಧ ಪ್ರತಿಭಟನೆ ನಡೆಸಿದರು. ಇದೇ ಕಾಲಕ್ಕೆ ಆಯಾ ಜಿಲ್ಲೆಗಳಲ್ಲಿ ಉಸ್ತುವಾರಿ ಸಚಿವರು ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ರಾಜ್ಯಕ್ಕೆ ಅಗತ್ಯವಿರುವ ಅಕ್ಕಿ ಪೂರೈಸುತ್ತಿಲ್ಲ. ▶ 8ನೇ ಪುಟಕ್ಕೆ





ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಮಾಜಿ ಸಚಿವ ಆರ್.ಅಶೋಕ್ ನೇತೃತ್ವದಲ್ಲಿ ಬಿಜೆಪಿ ಪ್ರತಿಭಟನೆ

ಕೆಬಿಜಿಯವರ
ಭೂಮಂತ್ರ.. ಭೂಮಂತ್ರ..



ಸಿಎಂ ಸಿದ್ದರಾಮಯ್ಯನವರಿಗೆ ಇದು ನುಂಗಲಾರದ ತುತ್ತು
ಭಾಗ್ಯಜ್ಯೋತಿ ಆರದಿರಲು ಒಂದು ಸಲಹೆ ■ ಪುಟ–4

ಫೇಕ್ ಸುದ್ದಿಗಳ ಹರಡುವವರ ಜೈಲಿಗೆ ಹಾಕಿ...

ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

- ಗೃಹ ಸಚಿವ ಡಾ.ಜಿ.ಪರಮೇಶ್ವರ್ ಜೊತೆ ಸಮಾಲೋಚನೆ, ನಂತರ ಕಟ್ಟಾದೇಶ
- ಇಂತಹ ಫೇಕ್ ನ್ಯೂಸ್ ಮೂಲ ಪತ್ತೆ ಹಚ್ಚಿ ಶೀಘ್ರ ಕ್ರಮ ಕೈಗೊಳ್ಳಲು ತಾಕೀತು

ಬೆಂಗಳೂರು, ಜೂ.20(ಕೆಎಂಶಿ)– ಫೇಕ್ ಸುದ್ದಿಗಳನ್ನು ಇನ್ನು ಮುಂದೆ ಹರಡಿದರೆ, ಅಂಥವರನ್ನು ಜೈಲಿಗೆ ಕಳುಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಖಡಕ್ ಸೂಚನೆ ನೀಡಿದ್ದಾರೆ.



ಈ ಸಂಬಂಧ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರೊಂದಿಗೆ ಸಮಾಲೋಚನೆ ನಡೆಸಿದ ನಂತರ ಇಂಥ ತೀರ್ಮಾನ ಕೈಗೊಂಡಿರುವ ಮುಖ್ಯಮಂತ್ರಿಗಳು, ಸಾಮಾಜಿಕ ಜಾಲ ತಾಣಗಳಲ್ಲಿ ಫೇಕ್ ನ್ಯೂಸ್ ಹಾವಳಿ ಮಿತಿ ಮೀರಿದೆ. ಇವುಗಳ ಮೂಲವನ್ನು ಪತ್ತೆ ಹಚ್ಚಿ ಅವುಗಳನ್ನು ಸಾಮಾಜಿಕ ಜಾಲ ತಾಣಗಳಲ್ಲಿ ಹರಡುತ್ತಿರುವವರನ್ನು ಗುರುತಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕಳೆದ 2013ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆ ಫೇಕ್ ನ್ಯೂಸ್‌ಗಳ ಹಾವಳಿ ಹೆಚ್ಚಾಗಿತ್ತು. ಈ ಬಾರಿ ಕೂಡ ಅದೇ ತಂತ್ರವನ್ನು ರಾಜಕೀಯ ವಿರೋಧಿಗಳು ಅನುಸರಿಸುತ್ತಿದ್ದಾರೆ. ಲೋಕಸಭಾ ಚುನಾವಣೆ ಹತ್ತಿರ ಬರುತ್ತಿರುವುದರಿಂದ ಮಾಮೂಲಿಯಂತೆ ಫೇಕ್ ನ್ಯೂಸ್‌ಗಳನ್ನು ಹೆಚ್ಚೆಚ್ಚು ಸೃಷ್ಟಿಸಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಪ್ರಯತ್ನಿಸುವ ಸಾಧ್ಯತೆಗಳು ಹೆಚ್ಚಾಗಿವೆ ಎಂದಿದ್ದಾರೆ. ಆರಂಭದಲ್ಲೇ ಸುಳ್ಳು ಸುದ್ದಿಗಳ ಮೂಲಗಳನ್ನು ಪತ್ತೆ ಹಚ್ಚಿ ಅವುಗಳನ್ನು ಹತ್ತಿಕ್ಕುವ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದು ಸೂಚಿಸಿದ್ದಾರೆ. ▶ 6ನೇ ಪುಟಕ್ಕೆ

ಇಂದು ಅಂತಾರಾಷ್ಟ್ರೀಯ ಯೋಗ ದಿನ ಮೈಸೂರು ಅರಮನೆ ಆವರಣದಲ್ಲಿ ಸಾಮೂಹಿಕ ಯೋಗ ಪ್ರದರ್ಶನ

- 10 ರಿಂದ 12 ಸಾವಿರ ಯೋಗಪಟುಗಳು ಪಾಲ್ಗೊಳ್ಳುವ ನಿರೀಕ್ಷೆ
- ಉಪಾಹಾರ, ಕುಡಿಯುವ ನೀರು ಪೂರೈಕೆ, ಸ್ವಚ್ಛತೆ, ಆಂಬುಲೆನ್ಸ್ ವ್ಯವಸ್ಥೆಗೆ ಸೂಚನೆ
- ಆಯುಷ್ ಇಲಾಖೆ ಹಾಗೂ ಯೋಗ ಸಂಸ್ಥೆಗಳ ಸ್ವಯಂಸೇವಕರಿಂದ ನೆರವು

ಮೈಸೂರು, ಜೂ.20(ಎಂಟಿವೈ)– ಅಂತಾರಾಷ್ಟ್ರೀಯ ಯೋಗ ದಿನಕ್ಕೆ ಮೈಸೂರು ಜಿಲ್ಲಾಡಳಿತ ಸಜ್ಜಾಗಿದ್ದು, ಬುಧವಾರ ಬೆಳಗ್ಗೆ ಮೈಸೂರು ಅರಮನೆ ಆವರಣದಲ್ಲಿ 10 ಸಾವಿರಕ್ಕೂ ಹೆಚ್ಚು ಯೋಗಪಟುಗಳು ಯೋಗಾಸನ ಪ್ರದರ್ಶಿಸಲಿದ್ದಾರೆ.

ಮೈಸೂರು ಜಿಲ್ಲಾಡಳಿತ ಹಾಗೂ ಆಯುಷ್ ಇಲಾಖೆ ಮತ್ತು ಕೆಲ ಯೋಗ ಸಂಸ್ಥೆಗಳ ನೆರವಿನೊಂದಿಗೆ ಅರಮನೆ ಆವರಣದಲ್ಲಿ ಸಾಮೂಹಿಕ ಯೋಗ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ವಿವಿಧ ಯೋಗ ಸಂಸ್ಥೆಗಳು ಹಾಗೂ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳಿಗೆ ಆಹ್ವಾನ ನೀಡಲಾಗಿದೆ. ಯೋಗ ಪ್ರದರ್ಶನಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಅರಮನೆ ಮುಂಭಾಗ ಸಭಾ ಕಾರ್ಯಕ್ರಮ ಹಾಗೂ ಪ್ರಾತ್ಯಕ್ಷಿಕೆಗಾಗಿ ಎರಡು ವೇದಿಕೆ ನಿರ್ಮಿಸಲಾಗಿದೆ. ಇದರೊಂದಿಗೆ ಯೋಗಪಟುಗಳಿಗೆ ಪ್ರೋಟೋಕಾಲ್‌ನಂತೆ ಯೋಗ ಪ್ರದರ್ಶನ ಮಾಡಲು ಮಾರ್ಗದರ್ಶನಕ್ಕೆ ▶ 8ನೇ ಪುಟಕ್ಕೆ



ಸತತ 3ನೇ ದಿನವೂ ಸರ್ವರ್ ಡೌನ್ ಸಮಸ್ಯೆ
ಗೃಹಜ್ಯೋತಿ ನೋಂದಣಿಗೆ ಜನರ ಹೆಣಗಾಟ ■ ಪುಟ–5

ವಿಶ್ವಮಾನ್ಯ ನಮ್ಮ ಮೈಸೂರು ಯೋಗ ಪರಂಪರೆ ■ ಪುಟ–6

ಹಿಂದಿನ ಸರ್ಕಾರದ ಅವಧಿಯ ಎಲ್ಲಾ ಕಾಮಗಾರಿಗಳಿಗೆ ತಡೆ ■ ಪುಟ–3

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಮುಂದುವರೆದ ಅಪಘಾತ ಸರಣಿ

ಚಾಲಕನ ನಿಯಂತ್ರಣ ಕಳೆದುಕೊಂಡ ಕಾರೊಂದು ಮತ್ತೊಂದು ಕಾರಿಗೆ ಅಪ್ಪಳಿಸಿದ ಪರಿಣಾಮ

ದಂಪತಿ ಸೇರಿ ಮೂವರು ದುರ್ಮರಣ



ಯುವಕನಿಗೆ ಗಂಭೀರ ಗಾಯ

ಮಂಡ್ಯ, ಜೂ.20– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸಂಭವಿಸಿದ ಭೀಕರ ಅಪಘಾತದಲ್ಲಿ ಮೂವರು ಸಾವನ್ನಪ್ಪಿ, ಓರ್ವ ತೀವ್ರವಾಗಿ ಗಾಯಗೊಂಡಿದ್ದಾರೆ. ಈ ದುರಂತ ಮದ್ದೂರು ತಾಲೂಕಿನ ಗೆಜ್ಜಲಗೆರೆ ಬಳಿ ಮಂಗಳವಾರ ಬೆಳಗ್ಗೆ ಸಂಭವಿಸಿದೆ. ಉತ್ತರ ಪ್ರದೇಶ ಮೂಲದ ನೀರಜ್ ಕುಮಾರ್(55), ಅವರ ಪತ್ನಿ ಸೆಲ್ವಿ(50) ಹಾಗೂ ಮದ್ದೂರು ತಾಲೂಕು ಕೊಪ್ಪ ಮೂಲದ ಕಾರು ಚಾಲಕ ಕುಮಾರ್ (30) ದುರ್ಮರಣಕ್ಕೀಡಾದವರು. ನೀರಜ್ ಕುಮಾರ್ ಪುತ್ರ ಶ್ರೀವಾತ್ಸವ್ ತೀವ್ರವಾಗಿ ಗಾಯಗೊಂಡು ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನೀರಜ್‌ಕುಮಾರ್ ಉತ್ತರ ಪ್ರದೇಶದ ತರಬೇತಿ ಹಾಗೂ ನೇಮಕಾತಿ ▶ 8ನೇ ಪುಟಕ್ಕೆ

ವಿದ್ಯುತ್ ದರ ಏರಿಕೆ ವಿರೋಧಿಸಿ ನಾಳೆ ಕರ್ನಾಟಕ ಬಂದ್

ಬಂದ್ ಬೆಂಬಲಿಸಲು ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಕರೆ



ಮೈಸೂರು,ಜೂ.20(ಪಿಎಂ)–ವಿದ್ಯುತ್ ದರ ಏರಿಕೆ ವಿರೋಧಿಸಿ ಜೂ.22ರಂದು ಕರ್ನಾಟಕ ಬಂದ್‌ಗೆ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ/ಕೆಸಿಸಿಐ) ಕರೆ ನೀಡಿದೆ. ಅಂತೆಯೇ ಮೈಸೂರು ಜಿಲ್ಲೆಯಲ್ಲಿಯೂ ಬಂದ್ ನಡೆಸಲು ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ (ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ–ಎಂಸಿಸಿಐ) ನಿರ್ಧರಿಸಿದೆ.

ಹೆಚ್ಚಿಸಿರುವ ನಿಗದಿತ ಶುಲ್ಕ ಇಳಿಸಬೇಕು. ಇಂಧನ ಹೊಂದಾಣಿಕೆ ಶುಲ್ಕವನ್ನು ಸಂಪೂರ್ಣವಾಗಿ ಕೈಬಿಡಬೇಕು ಮತ್ತು ಶೇ.40ರಿಂದ 80ರವರೆಗೆ ಹೆಚ್ಚಿಸಿರುವ ವಿದ್ಯುತ್ ಶುಲ್ಕ ಕಡಿಮೆ ಮಾಡಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಬಂದ್ ನಡೆಸಲಾಗುತ್ತಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಎಂಸಿಸಿಐ) ಅಧ್ಯಕ್ಷ ಕೆ.ಬಿ.ಲಿಂಗರಾಜು, ರಾಜ್ಯದ ಎಲ್ಲಾ ಎಸ್ಕಾಂಗಳು ಅತಿಯಾದ ವಿದ್ಯುತ್ ದರ ನಿಗದಿ ಮಾಡಿವೆ. ಇದರಿಂದ ರಾಜ್ಯದ ಬಳಕೆದಾರರು ಹಾಗೂ ▶ 8ನೇ ಪುಟಕ್ಕೆ

> “ ವಿದ್ಯುತ್ ದರ ಏರಿಕೆ ಪ್ರಶ್ನಿಸಿ ಜೂ.27ರೊಳಗೆ ದೆಹಲಿಯ ಅಪಿಲೇಟ್ ಟ್ರಿಬ್ಯೂನಲ್ ಫಾರ್ ಎಲೆಕ್ಟ್ರಿಸಿಟಿಗೆ (ವಿದ್ಯುಚ್ಛಕ್ತಿ ಮೇಲ್ಮನವಿ ನ್ಯಾಯಮಂಡಳಿ) ಮೇಲ್ಮನವಿ ಸಲ್ಲಿಸಲಿದ್ದೇವೆ. ಎಂಸಿಸಿಐ ವತಿಯಿಂದಲೂ ಸೆಸ್ಕ್‌ನ ದರ ಏರಿಕೆ ಕ್ರಮ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದು. ಅಂತೆಯೇ ಎಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಎಸ್ಕಾಂಗಳ ದರ ಏರಿಕೆ ಕ್ರಮ ಪ್ರಶ್ನಿಸಿ ಸದರಿ ನ್ಯಾಯಮಂಡಳಿಗೆ ಮೇಲ್ಮನವಿ ಸಲ್ಲಿಸಲಿವೆ.
> –ಕೆ.ಬಿ.ಲಿಂಗರಾಜು

ಕೈಗಾರಿಕೋದ್ಯಮಿಗಳು ಕರೆ ನೀಡಿರುವ ‘ಕರ್ನಾಟಕ ಬಂದ್’ಗೆ ನಮ್ಮ ಬೆಂಬಲವಿಲ್ಲ

ಎಂಎಸ್‌ಎಂಇ ಕೌನ್ಸಿಲ್ ಸ್ಪಷ್ಟನೆ

ಮೈಸೂರು, ಜೂ.20(ಬಿಎಲ್‌ಯು)– ವಿದ್ಯುತ್ ದರ ಹೆಚ್ಚಳ ವಿರೋಧಿಸಿ ಕೈಗಾರಿಕೋದ್ಯಮಿಗಳು ಕರೆ ನೀಡಿರುವ ಕರ್ನಾಟಕ ಬಂದ್ ಅನ್ನು ನಾವು ಬೆಂಬಲಿಸುವುದಿಲ್ಲ ಎಂದು ಎಂಎಸ್‌ಎಂಇ ಕೌನ್ಸಿಲ್ ತಿಳಿಸಿದೆ. ಈ ಬಗ್ಗೆ ಮಾಹಿತಿ ನೀಡಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಪರಿಷತ್ (ಎಂಎಸ್‌ಎಂಇ) ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್, ವಿದ್ಯುತ್ ದರ ಹೆಚ್ಚಳ ವಿರೋಧಿಸಿ ರಾಜ್ಯ ಸರ್ಕಾರದ ವಿರುದ್ಧ ನಾವು ಪ್ರತಿಭಟನೆ ಮಾಡುವುದಿಲ್ಲ ಹಾಗೂ ಕೈಗಾರಿಕೆಗಳು ಕರೆ ನೀಡಿರುವ ಬಂದ್‌ಗೂ ಬೆಂಬಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ವಿದ್ಯುತ್ ದರ ಪರಿಷ್ಕರಣೆಯು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ವ್ಯಾಪ್ತಿಗೆ ಬರುತ್ತದೆ. ವಿದ್ಯುತ್ ದರ ಹೆಚ್ಚಳ ಕುರಿತಂತೆ ತಕರಾರು ಅರ್ಜಿ ಸಲ್ಲಿಸುವಂತೆ ಕೆಇಆರ್‌ಸಿ ಅರ್ಜಿ ಆಹ್ವಾನಿಸಿತ್ತು. ಜೊತೆಗೆ ಸಾರ್ವಜನಿಕರ ವಿಚಾರಣೆಯಲ್ಲಿ ಎಲ್ಲಾ ವರ್ಗದ ಗ್ರಾಹಕರ ವಾದ ಕೇಳಿ ಅಂತಿಮವಾಗಿ ▶ 6ನೇ ಪುಟಕ್ಕೆ



ಬಾಡಿಗೆಗೆ ಆಟೋ ಕರೆದೊಯ್ದು ಚಾಲಕನ ಮೇಲೆ ಹಲ್ಲೆ ನಡೆಸಿ ಹಣ, ಮೊಬೈಲ್ ಸುಲಿಗೆ

ಮೈಸೂರು,ಜೂ.20–ಬಾಡಿಗೆಗೆ ಆಟೋ ತೆಗೆದುಕೊಂಡು ಹೋಗಿ, ಚಾಲಕನ ಮೇಲೆ ಹಲ್ಲೆ ನಡೆಸಿ ಆಟೋ, ಮೊಬೈಲ್ ಮತ್ತು ನಗದು ದೋಚಿರುವ ಘಟನೆ ಮೈಸೂರು ತಾಲೂಕು ಮಾಕನಹುಂಡಿ ಗ್ರಾಮದಿಂದ ವರದಿಯಾಗಿದೆ.

ಮೈಸೂರಿನ ಗಣೇಶನಗರದ ಆಟೋ ಚಾಲಕ ನಾಗೇಶ್‌ನಾಯಕ್(63) ಆಟೋ ಕಳೆದುಕೊಂಡವರಾಗಿದ್ದು, ಇವರು ಜೂನ್ 16ರಂದು ಸಂಜೆ 6.20ರ ಸಮಯದಲ್ಲಿ ಗನ್‌ಹೌಸ್ ಬಳಿ ಬರುತ್ತಿದ್ದಾಗ ಇಬ್ಬರು ಖದೀಮರು ಬಂಡಿಪಾಳ್ಯಕ್ಕೆ ಹೋಗಬೇಕೆಂದು 150 ರೂ. ಬಾಡಿಗೆ ಮಾತನಾಡಿ ಕರೆದೊಯ್ದಿದ್ದಾರೆ.

ಆಟೋ ಬಂಡಿಪಾಳ್ಯದ ಕಡೆ ಹೋಗುತ್ತಿದ್ದಂತೆಯೇ ಈ ವ್ಯಕ್ತಿಗಳು ಹೊಸಹುಂಡಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಹೋಗುವಂತೆ ಚಾಲಕನಿಗೆ ತಿಳಿಸಿದ್ದಾರೆ. ಆಟೋ ಹೊಸಹುಂಡಿ ಗ್ರಾಮಕ್ಕೆ ಹೋದಾಗ ಈ ವ್ಯಕ್ತಿಗಳಲ್ಲಿ ಓರ್ವ ಸ್ವಲ್ಪ ಮುಂದೆ ತೋಟದ ಮನೆ ಇದೆ, ಅಲ್ಲಿ ನನ್ನ ಹೆಂಡತಿ ಇದ್ದಾಳೆ. ಆಕೆಯನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಬೇಕು. ನಿಮ್ಮ ಆಟೋದಲ್ಲೇ ಬಸ್ ನಿಲ್ದಾಣಕ್ಕೆ ಕರೆದುಕೊಂಡು ಹೋಗಿ ಎಂದು ಹೇಳುತ್ತಾ, ಅದೇ ರಸ್ತೆಯಲ್ಲಿ ಮಾಕನಹುಂಡಿ ಬಳಿಗೆ ಸಂಜೆ 7.20ರ ಸುಮಾರಿನಲ್ಲಿ ಕರೆದೊಯ್ದು, ಆಟೋ ನಿಲ್ಲಿಸುವಂತೆ ಹೇಳಿದ್ದಾನೆ. ನಂತರ ಇವರಿಬ್ಬರು ಚಾಲಕ ನಾಗೇಶ್ ನಾಯಕನ ಮೇಲೆ ತಲೆ ಮತ್ತು ಕಿವಿ ಬಳಿ ಖಾರದಪುಡಿ ಎರಚಿದ್ದಲ್ಲದೇ ಹಲ್ಲೆ ನಡೆಸಿ ಅವರ ಬಳಿ ಇದ್ದ 6 ಸಾವಿರ ರೂ. ನಗದು ಹಾಗೂ ಮೊಬೈಲ್ ದೋಚಿದ ನಂತರವೂ ಹಲ್ಲೆಗೆ ಮುಂದಾದಾಗ ನಾಗೇಶ್‌ನಾಯಕ ಅದರಿಂದ ತಪ್ಪಿಸಿಕೊಂಡು ಪಕ್ಕದಲ್ಲಿದ್ದ ಬಾಳೆತೋಟಕ್ಕೆ ಓಡಿ ಹೋಗಿದ್ದಾನೆ. ಈ ವೇಳೆ ಖದೀಮರು ಅವರ ಆಟೋವನ್ನು ಕೊಂಡೊಯ್ದಿದ್ದಾರೆ. ಈ ಸಂಬಂಧ ಮೈಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಡಿಗೆಗೆ ಆಟೋ ಕರೆದೊಯ್ದು ಚಾಲಕನ ಮೇಲೆ ಹಲ್ಲೆ ನಡೆಸಿ ಆಟೋ ಮತ್ತು ಹಣ ದೋಚುವ ಪ್ರಕರಣಗಳು ಈ ಭಾಗದಲ್ಲಿ ದಿನೇ ದಿನೆ ಹೆಚ್ಚುತ್ತಿದೆ. ಈಗ ನಡೆದಿರುವ ಕೆಲ ಪ್ರಕರಣಗಳಲ್ಲಿ ಖದೀಮರು ಗನ್‌ಹೌಸ್ ಬಳಿಯಿಂದಲೇ ಆಟೋ ಬಾಡಿಗೆಗೆ ಕರೆದೊಯ್ದು ಹೊಸಹುಂಡಿ ಗ್ರಾಮದ ಬಳಿ ಚಾಲಕನ ಮೇಲೆ ಹಲ್ಲೆ ನಡೆಸಿ ಆಟೋ ದೋಚಿದ್ದಾರೆ. ಇತ್ತೀಚೆಗೆ ಇಂತಹ ಖದೀಮರನ್ನು ವರುಣ ಠಾಣೆ ಪೊಲೀಸರು ಬಂಧಿಸಿದ್ದರು ಎಂಬುದನ್ನು ಸ್ಮರಿಸಬಹುದಾಗಿದೆ. ಸಂಜೆ ವೇಳೆ ಬಂಡಿಪಾಳ್ಯ ಕಡೆಗೆ ಎಂದು ಪ್ರಯಾಣಿಕರು ಆಟೋ ಕರೆದರೆ ಚಾಲಕರು ಅಲ್ಲಿಗೆ ಹೋಗಲು ಭಯಪಡುವಂತಹ ವಾತಾವರಣ ನಿರ್ಮಾಣವಾಗಿದೆ.

ಜೆ.ಕೆ.ಟೈರ್ ಅಂಡ್ ಇಂಡಸ್ಟ್ರೀಸ್‌ನಿಂದ ಬೃಹತ್ ಸ್ವಯಂಪ್ರೇರಿತ ರಕ್ತದಾನ ಶಿಬಿರ



ಮೈಸೂರು, ಜೂ.20 –ಜೆ.ಕೆ.ಟೈರ್ ಅಂಡ್ ಇಂಡಸ್ಟ್ರೀಸ್‌ನ ಸಂಸ್ಥಾಪಕರಾದ ದಿವಂಗತ ಹರಿಶಂಕರ್ ಸಿಂಘಾನಿಯ ಅವರ 90ನೇ ಜನ್ಮೋತ್ಸವದ ಅಂಗವಾಗಿ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ರಕ್ತದಾನ ಶಿಬಿರ ನಡೆಯಿತು.

ಜೆ.ಕೆ.ಟೈರ್‌ನ 3 ಘಟಕಗಳು ಹಾಗೂ ಜೆ.ಕೆ.ಟೈರ್ ಗೆಸ್ಟ್‌ಹೌಸ್‌ನಲ್ಲಿ ನಡೆದ ಬೃಹತ್ ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ 1000ಕ್ಕೂ ಹೆಚ್ಚಿನ ಸಿಬ್ಬಂದಿ ರಕ್ತದಾನ ಮಾಡಿದರು. ಮೈಸೂರಿನಲ್ಲಿ ಪ್ರತಿವರ್ಷ 1000 ಕ್ಕೂ ಹೆಚ್ಚು ಯೂನಿಟ್ ರಕ್ತದಾನ ಮಾಡುವ ಏಕೈಕ ಕೈಗಾರಿಕೆ ಜೆ.ಕೆ.ಟೈರ್ ಆಗಿದ್ದು, ಕಳೆದ 10 ವರ್ಷಗಳಿಂದ ಈ ರೀತಿಯ ರಕ್ತದಾನ ಕಾರ್ಯಕ್ರಮವನ್ನು ಯಶಸ್ವಿ ಯಾಗಿ ನಡೆಸುತ್ತಾ ಬಂದಿದೆ. ಮೈಸೂರಿಗೆ ಪ್ರತಿದಿನ ಸುಮಾರು 100 ಯೂನಿಟ್ ರಕ್ತದ ಅವಶ್ಯಕತೆ ಇದ್ದು, ಇದನ್ನು ನಿವಾರಿಸುವಲ್ಲಿ ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚಾಗಿ ನಡೆಯಬೇಕಾಗಿದ್ದು, ಈ ಹಿನ್ನೆಲೆಯಲ್ಲಿ ಕ್ರೆಡಿಟ್–ಐ ಸಂಸ್ಥೆಯು ಕಳೆದ 6 ವರ್ಷಗಳಿಂದ ಜೆ.ಕೆ.ಟೈರ್ ಹಮ್ಮಿಕೊಳ್ಳುವ ಈ ರಕ್ತದಾನ ಕಾರ್ಯಕ್ರಮದಲ್ಲಿ ಕೈಜೋಡಿಸುತ್ತಾ ಬಂದಿದೆ ಎಂದು ಡಾ.ಎಂ.ಪಿ.ವರ್ಷ ತಿಳಿಸಿದರು.

ಜೆಎಸ್‌ಎಸ್ ವಿಜ್ಞಾನ–ತಂತ್ರಜ್ಞಾನ ಕಾಲೇಜಲ್ಲಿ ಕೇರಂ, ಚೆಸ್ ಪಂದ್ಯಾವಳಿ



ಮೈಸೂರು, ಜೂ.20 (ಜಿಎ)–ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ಕಾಲೇಜಿನ 'ಜೆಸಿಯಾನ್' ಹಿನ್ನೆಲೆಯಲ್ಲಿ ಕೇರಮ್ ಬೋರ್ಡ್ ಮತ್ತು ಚೆಸ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಸಂಘಟಕ ಶಶಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಸಿಯಾನ ಹಿನ್ನೆಲೆಯಲ್ಲಿ ಜೂ.22ರಂದು ಕಾಲೇಜಿನ ಟಿಟಿ ಹಾಲ್‌ನಲ್ಲಿ ಕೇರಮ್ ಪಂದ್ಯಾವಳಿಯನ್ನು ಆಯೋಜಿಸಿದ್ದು, ಪ್ರವೇಶ ಶುಲ್ಕ ಡಬಲ್ಸ್‌ಗೆ 350 ರೂ., ಸಿಂಗಲ್ಸ್‌ಗೆ 200 ರೂ. ನಿಗದಿಪಡಿಸಲಾಗಿದೆ. ಡಬಲ್ಸ್‌ನಲ್ಲಿ ವಿಜೇತರಾದವರಿಗೆ 3 ಸಾವಿರ ರೂ., ದ್ವಿತೀಯ ಸ್ಥಾನ ಪಡೆದವರಿಗೆ 2 ಸಾವಿರೂ ಹಾಗೂ ತೃತೀಯ ಸ್ಥಾನಕ್ಕೆ 1 ಸಾವಿರ ರೂ. ಬಹುಮಾನ ನೀಡಲಾಗುವುದು. ಹಾಗೇ ಸಿಂಗಲ್ಸ್‌ನಲ್ಲಿ ವಿಜೇತರಾಗುವವರಿಗೆ 2 ಸಾವಿರ ರೂ. ಹಾಗೂ ದ್ವಿತೀಯ ಸ್ಥಾನಕ್ಕೆ 1 ಸಾವಿರ ರೂ. ನೀಡಲಾಗುತ್ತದೆ ಎಂದರು.

ಜೂ.25ರಂದು ಚೆಸ್ ಪಂದ್ಯಾವಳಿಯನ್ನು ಏರ್ಪಡಿಸಿದ್ದು, ಅದರಲ್ಲಿ 9, 11, 13 ಹಾಗೂ 15 ವರ್ಷದವರು ಹಾಗೂ 15 ವರ್ಷ ಮೇಲ್ಪಟ್ಟವರು ಭಾಗವಹಿಸಬಹುದು. ಈ ಪಂದ್ಯಾವಳಿಗೆ ಮಕ್ಕಳಿಗೆ 300 ರೂ. ಹಾಗೂ 15 ವರ್ಷ ಮೇಲ್ಪಟ್ಟವರಿಗೆ 500 ರೂ. ಪ್ರವೇಶ ಶುಲ್ಕ ನಿಗದಿಪಡಿಸಲಾಗಿದ್ದು, ಮೊದಲ ಸ್ಥಾನ ಪಡೆಯುವವರಿಗೆ 3 ಸಾವಿರ ರೂ. ದ್ವಿತೀಯ ಸ್ಥಾನಕ್ಕೆ 2 ಸಾವಿರೂ ಹಾಗೂ ತೃತೀಯ ಸ್ಥಾನಕ್ಕೆ 1,500 ರೂ., 4ನೇ ಸ್ಥಾನಕ್ಕೆ 1,200 ರೂ., 5ನೇ ಸ್ಥಾನಕ್ಕೆ 1000 ರೂ., ಮತ್ತು 6ನೇ ಸ್ಥಾನಕ್ಕೆ 800 ರೂ. ಬಹುಮಾನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕೃಪಾಕರ್ 8088522346, ಶಶಿ 9353945486 ಸಂಪರ್ಕಿಸಿ ಎಂದು ತಿಳಿಸಿದರು.

ಇಂದು ಸಂಗೀತ ಕಲಾ ಸಾರಥಿ ಪ್ರಶಸ್ತಿ ಪ್ರದಾನ

ಮೈಸೂರು, ಜೂ.20–ವಿಶ್ವ ಸಂಗೀತ ದಿನಾಚರಣೆ ಅಂಗವಾಗಿ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಸಂಗೀತ ಕ್ಷೇತ್ರದ ಸಾಧಕರಿಗೆ ಸಂಗೀತ ಕಲಾ ಸಾರಥಿ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಗುವುದು.

ಜೂ.21ರಂದು ಬೆಳಗ್ಗೆ 11 ಗಂಟೆಗೆ ಜೀವಧಾರ ರಕ್ತ ನಿಧಿ ಕೇಂದ್ರದ ಆವರಣದಲ್ಲಿ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ವಿದ್ವಾನ್ ಗಣೇಶ ಭಟ್ (ಕೀಬೋರ್ಡ್ ವಾದಕರು), ವಿದ್ವಾನ್ ರಾಘವೇಂದ್ರ ರತ್ನಾಕರ್ (ಗಾಯಕರು), ವಿದ್ವಾನ್ ಡಿ.ರಾಜಕುಮಾರ್ (ತಾಳವಾದ್ಯ), ವಿದುಷಿ ದಿವ್ಯಾ ಸಾಚಿ (ಗಾಯಕಿ), ವಿದ್ವಾನ್ ಎಮ್.ಸಿ. ಜಗದೀಶ್ (ತಬಲಾ ವಾದಕರು) ವಿದ್ವಾನ್ ಗುರುದತ್ (ರಿದಂಪ್ಯಾಡ್ ವಾದಕರು) ಅವರಿಗೆ 'ಕಲಾ ಸಾರಥಿ' ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ವೇಳೆ ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಬಿಜೆಪಿ ಮುಖಂಡ ಬಿ.ಪಿ. ಮಂಜುನಾಥ್, ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಪ್ರಸಾದ್ ಸ್ಕೂಲ್ ಆಫ್ ರಿದಮ್ ಸಂಸ್ಥೆ ಮುಖ್ಯಸ್ಥ ರಾಘವೇಂದ್ರ ಪ್ರಸಾದ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಮನೋರೋಗ ತಜ್ಞ ಡಾ.ರೇಖಾ, ಅಜಯ್ ಶಾಸ್ತ್ರಿ ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.

ನಿಧನ



ಗೌರಮ್ಮ

ಮೈಸೂರು, ಜೂ.20–ಮೈಸೂರಿನ ಹಿನಕಲ್‌ನ ತಮ್ಮಡಗೇರಿ ನಿವಾಸಿ ಆರ್.ಕೆ.ಕೆಂಪೇಗೌಡರ ಪತ್ನಿ ಗೌರಮ್ಮ (70) ಮಂಗಳವಾರ ಮಧ್ಯಾಹ್ನ ಹೃದಯಾಘಾತದಿಂದ ನಿಧನರಾದರು.

ಮೃತರು ಪತಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ (ಜೂ.21) 12 ಗಂಟೆಗೆ ಹೂಟಗಳ್ಳಿಯ ಎಸ್.ಆರ್.ಎಸ್ ಹೈಟೆಕ್ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಸಿರು ಮೈಸೂರು–ಲಕ್ಷ ವೃಕ್ಷ ಅಭಿಯಾನಕ್ಕೆ ಚಾಲನೆ

ನಮಗೆ ಆಧಾರವಾಗಿರುವ ಪರಿಸರ ರಕ್ಷಿಸಬೇಕು: ಸುತ್ತೂರು ಶ್ರೀಗಳು

ಮೈಸೂರು, ಜೂ.20(ಆರ್‌ಕೆ)–ನಮಗೆ ಆಧಾರವಾಗಿರುವ ಪರಿಸರ ನಾಶ ಮಾಡದೇ ಗಿಡ–ಮರ ಬೆಳೆಸುವ ಮೂಲಕ ಸಂರಕ್ಷಿಸಬೇಕೆಂದು ಸುತ್ತೂರು ಮಠಾಧೀಶರಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸಲಹೆ ನೀಡಿದ್ದಾರೆ.

ಹೆಚ್.ವಿ.ರಾಜೀವ್ ಸ್ನೇಹ ಬಳಗದ ವತಿಯಿಂದ ಹಸಿರು ಮೈಸೂರು–ಲಕ್ಷ ವೃಕ್ಷ ಅಭಿಯಾನದ ಅಂಗವಾಗಿ ಮೈಸೂರು–ನಂಜನಗೂಡು ಮುಖ್ಯ ರಸ್ತೆಯ ನರ್ಸರಿಯಲ್ಲಿ ಸೋಮವಾರ ಆಯೋಜಿಸಿದ್ದ 15,000 ಸಸಿ ವಿತರಣಾ ಕಾರ್ಯಕ್ರಮದಲ್ಲಿ ಸಾನ್ನಿಧ್ಯ ವಹಿಸಿ, ಮಾತನಾಡುತ್ತಿದ್ದರು.

ಮನುಷ್ಯ ಕೃತಕವಾಗಿ ಏನನ್ನೂ ಸೃಷ್ಟಿಸಲಾರ. ಪ್ರಕೃತಿ ನೀಡಿರುವ ಗಾಳಿ, ಬೆಳಕು, ನೀರು ಎಲ್ಲವನ್ನೂ ಶುದ್ಧವಾಗಿಟ್ಟುಕೊಳ್ಳಬೇಕು. ಮರ ಕಡಿಯದೇ ರಸ್ತೆ ಅಥವಾ ಬಡಾವಣೆ ನಿರ್ಮಿಸಲು ಸಾಧ್ಯವಿಲ್ಲ. ಆದರೆ ನಮಗೆ ಆಧಾರವಾಗಿರುವ ಪರಿಸರ ನಾಶ ಮಾಡಬಾರದು. ತೀರಾ ಅನಿವಾರ್ಯವಾದಾಗ ಮರ ಕಡಿಯಬೇಕಾಗಬಹುದು. ಅದಕ್ಕೆ ಪರ್ಯಾಯವಾಗಿ ಗಿಡ ನೆಟ್ಟು ಬೆಳೆಸಬೇಕು ಎಂದು ಶ್ರೀಗಳು ನುಡಿದರು.

ಎಲ್ಲರೂ ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಬೇಕು. ತಮ್ಮ ಮನೆ ಸುತ್ತ ಒಂದೆರಡು ಗಿಡ ನೆಟ್ಟು ಬೆಳೆಸಿದರೂ ಸಾಕು. ಆಗ ಮಾತ್ರ ಪರಿಸರ ಸಂರಕ್ಷಿಸಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ವಿಸ್ತಾರ ನ್ಯೂಸ್ ಪ್ರಧಾನ ಸಂಪಾದಕ ಹಾಗೂ ಸಿಇಓ ಹರಿಪ್ರಕಾಶ್ ಕೋಣೆಮನೆ, ಮಾತನಾಡಿ, ಪರಿಸರ ದಿನಾಚರಣೆ ವೇಳೆ ಮಾತ್ರ ಪರಿಸರ ಸಂರಕ್ಷಣೆ ಬಗ್ಗೆ ಮಾತನಾಡುತ್ತೇವೆ. ಆದರೆ ಪರಿಸರ ಕಾಳಜಿ ನಿತ್ಯೋತ್ಸವವಾಗಬೇಕು. ಪರಿಸರ ನಮ್ಮನ್ನು ಪೋಷಿಸುತ್ತದೆ. ನದಿ, ಜಲಮೂಲ ಇಲ್ಲದಿದ್ದರೆ ಕುಡಿಯಲು ನೀರು ಸಿಗುವುದಿಲ್ಲ ಎಂದರು.

ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಂಡಿರುವ ಮಾಜಿ ಮೇಯರ್ ಬಿ.ಎಲ್. ಭೈರಪ್ಪ, ಗೋಕುಲ್ ಗೋವರ್ಧನ್ ಹಾಗೂ ಕುಮಾರ್ ಅವರನ್ನು ಇದೇ ಸಂದರ್ಭ ಸನ್ಮಾನಿಸಲಾಯಿತು. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯಾ, 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕ ವಿಕ್ರಂ ಮುತ್ತಣ್ಣ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಜನಜಾಗೃತಿ ವೇದಿಕೆ ಪ್ರಾದೇಶಿಕ ನಿರ್ದೇಶಕ ವಿವೇಕ್ ಪಿ.ಪೈಸ್ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಮೈಸೂರು–ನಂಜನಗೂಡು ರಸ್ತೆಯ ನರ್ಸರಿಯಲ್ಲಿ ಸೋಮವಾರ 'ಹಸಿರು ಮೈಸೂರು–ಲಕ್ಷ ವೃಕ್ಷ ಅಭಿಯಾನಕ್ಕೆ ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಗಳು ಚಾಲನೆ ನೀಡಿದರು. ಹಿರಿಯ ಪತ್ರಕರ್ತ ಹರಿಪ್ರಕಾಶ್ ಕೋಣೆಮನೆ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಜನ ಜಾಗೃತಿ ವೇದಿಕೆ ಪ್ರಾದೇಶಿಕ ನಿರ್ದೇಶಕ ವಿವೇಕ ವಿ.ಪೈಸ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ಎಂ.ಮಾಲತಿ ಪ್ರಿಯಾ, ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕರಾದ ವಿಕ್ರಂ ಮುತ್ತಣ್ಣ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಯೋಗ ಶಿಕ್ಷಕರಿಗೆ ವಿಶ್ವಮಾನ್ಯ ಯೋಗ ರತ್ನ ಪ್ರಶಸ್ತಿ ಪ್ರದಾನ



ಮೈಸೂರು, ಜೂ.20(ಜಿಎ)–ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ಯೋಗ ಶಿಕ್ಷಕರಿಗೆ 'ವಿಶ್ವಮಾನ್ಯ ಯೋಗರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರಿನ ಅಂತಾರಾಷ್ಟ್ರೀಯ ಯೋಗ ಶಿಕ್ಷರಿಗೆ ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ ಪ್ರಶಸ್ತಿ ಪ್ರದಾನ ಮಾಡಿದರು.

ನಂತರ ಮಾತನಾಡಿದ ಅವರು, ಬುಧವಾರ ನಡೆಯಲಿರುವ ವಿಶ್ವ ಯೋಗ ದಿನಾಚರಣೆಗೆ ಮೈಸೂರೇ ಮೂಲವಾಗಿದ್ದು, ಯೋಗವು ಕಾಯಿಲೆಗಳಿಂದ ಮುಕ್ತಗೊಳಿಸುವ ಜೊತೆಗೆ ಸ್ವಾಸ್ಥ್ಯ ಸಮಾಜವನ್ನು ನಿರ್ಮಾಣ ಮಾಡುತ್ತದೆ. ನಾಲ್ವಡಿ ಕೃಷ್ಣರಾಜ ಒಡೆಯರ್, ಕೃಷ್ಣಮಾಚಾರ್ಯರು ಮತ್ತು ಚಾಮರಾಜ ಒಡೆಯರ್ ಯೋಗಕ್ಕೆ ಹೆಚ್ಚು ಆದ್ಯತೆ ನೀಡಿದ್ದರು ಎಂದರು.

ಮೈಸೂರಿಗೆ ವಿವೇಕಾನಂದರು ಭೇಟಿ ನೀಡಿದ ಸಂದರ್ಭದಲ್ಲಿ ಎನ್‌ಟಿಎಂಎಸ್ ಶಾಲೆಯಲ್ಲಿ ಉಳಿದುಕೊಂಡಿದ್ದಾಗ ಪ್ರವಚನದ ಜೊತೆಗೆ 21 ದಿನಗಳ ಕಾಲ ಯೋಗಾಭ್ಯಾಸ ಮಾಡಿದ್ದರು ಎಂಬ ಉಲ್ಲೇಖವಿದೆ. ಯೋಗವು ಅಷ್ಟು ಪ್ರಸಿದ್ಧಿ ಹೊಂದಿದೆ. ಯೋಗದಿಂದ ಶ್ವಾಸಕೋಶ ಸೇರಿದಂತೆ ದೇಹದ ಆರೋಗ್ಯವನ್ನು ಸಮತೋಲನದಲ್ಲಿಡುತ್ತದೆ. ಡಸ್ಟ್ ಅಲರ್ಜಿ ಮುಕ್ತವಾಗಿಸುತ್ತದೆ. ಇಂತಹ ಯೋಗವನ್ನು ಬಿ.ಕೆ.ಎಸ್ ಐಯ್ಯಂಗಾರ್ ಅವರು ವಿಶ್ವಮಟ್ಟಕ್ಕೆ ತಲುಪಿಸಿದರು ಎಂದು ಸ್ಮರಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಬುಧವಾರ ವಿಶ್ವಾದ್ಯಂತ ಯೋಗ ಪ್ರದರ್ಶನ ಮಾಡುತ್ತಾರೆ. ಈ ವೇಳೆ ಯೋಗ ಸಾಧಕರನ್ನು ಸನ್ಮಾನಿಸುವುದು ಅರ್ಥಪೂರ್ಣ ಕಾರ್ಯವಾಗಿದೆ. ನಮ್ಮ ಕಲುಷಿತವಾದ ವಾತಾವರಣದ ನಡುವೇ ಆರೋಗ್ಯ ಕಾಪಾಡಿಕೊಳ್ಳುವುದು ಒಂದು ಸವಾಲಾಗಿದ್ದು, ಅದಕ್ಕೆ ಯೋಗ ಸಹಕಾರಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಎಂ.ಮೋಹನ್, ಸಂತೋಷ್‌ಕುಮಾರ್, ಸಿ.ರಮೇಶ್ ಶೆಟ್ಟಿ ಮತ್ತು ನಂದೀಶ್‌ಕುಮಾರ್‌ಗೆ 'ವಿಶ್ವಮಾನ್ಯ ಯೋಗರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಭೂಮಿಮಿತ್ರ ರೈತಮಿತ್ರ ಸಂಘದ ಅಧ್ಯಕ್ಷ ಚಂದನ್‌ಗೌಡ, ಹಿಮಾಲಯ ಫೌಂಡೇಷನ್ ಅಧ್ಯಕ್ಷ ಎನ್.ಅನಂತ್ ಮತ್ತು ಬ್ರಹ್ಮೀಭೂತ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ಸಂಸ್ಥಾಪಕ ಅಧ್ಯಕ್ಷ ಎಂ.ವಿ.ನಾಗೇಂದ್ರಬಾಬು ಉಪಸ್ಥಿತರಿದ್ದರು.



ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರನ್ನು ಉದ್ಯಮಿ ಸ್ವೀಟ್ ಮಹೇಶ್, ಪ್ರದೀಪ್ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.

ಜೂ.25ರಂದು ಕನ್ನಡ–ತೆಲುಗು ಕವಿಗೋಷ್ಠಿ

ಮೈಸೂರು, ಜೂ.20(ಜಿಎ)–ಮೈಸೂರಿನಲ್ಲಿ ಅಂತಾರಾಷ್ಟ್ರೀಯ ತೆಲುಗು–ಕನ್ನಡ ಕವಿಗೋಷ್ಠಿಯನ್ನು ಜೂ.25ರಂದು ಶ್ರೀ ಶ್ರೀ ಕಳಾ ವೇದಿಕೆ ವತಿಯಿಂದ ಆಯೋಜಿಸಲಾಗಿದೆ ಎಂದು ವೇದಿಕೆ ಅಧ್ಯಕ್ಷೆ ಪ್ರಭಾ ಶಾಸ್ತ್ರೀ ಜ್ಯೋಸ್ಯುಲ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಕಳಾ ವೇದಿಕೆ ಮೈಸೂರು ಶಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಹೊಯ್ಸಳ ಕನ್ನಡ ಸಂಘದ ಸಹಯೋಗದೊಂದಿಗೆ ಗೋಷ್ಠಿ ಆಯೋಜಿಸಿದ್ದು, ಬೆಳಗ್ಗೆ 10.30ಕ್ಕೆ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ ಸಭಾಂಗಣದಲ್ಲಿ ಕವಿಗೋಷ್ಠಿ ಏರ್ಪಡಿಸಲಾಗಿದೆ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ದತ್ತಪೀಠ ಆಸ್ಥಾನ ವಿದ್ವಾನ್ ಡಾ.ಸಿ.ಪಿ.ಕೃಷ್ಣಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ತೆಲುಗು–ಕನ್ನಡ ಭಾಷಾ ವಿದ್ವಾನ್ ಪ್ರೊ.ಆರ್.ವಿ. ಎಸ್.ಸುಂದರಂ ಆಗಮಿಸಲಿದ್ದು, ಕನ್ನಡ ಮತ್ತು ತೆಲುಗು ಭಾಷೆಯ 100ಕ್ಕೂ ಅಧಿಕ ಕವಿಗಳು ಗೋಷ್ಠಿಯಲ್ಲಿ ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ವೇದಿಕೆ ಗೌರವಾಧ್ಯಕ್ಷ ಟಿ.ಜಿ.ಎಸ್.ಅವಿನಾಶ್ ಉಪಸ್ಥಿತರಿದ್ದರು.

ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು,ಜೂ.20–2023ನೇ ಸಾಲಿನ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಫಲಿತಾಂಶ ಇಂದು ಪ್ರಕಟವಾಗಿದೆ. ಪೂರಕ ಪರೀಕ್ಷೆಯಲ್ಲೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ.


ಪರೀಕ್ಷೆಗೆ ಹಾಜರಾದ ಒಟ್ಟು 1,57,756 ವಿದ್ಯಾರ್ಥಿಗಳ ಪೈಕಿ 50,478 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮಧ್ಯಾಹ್ನ 3 ಗಂಟೆ ನಂತರ ಕಾಲೇಜುಗಳಲ್ಲಿ ಫಲಿತಾಂಶ ಲಗತ್ತಿಸಲಾಗಿದೆ ಎಂದು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಜಾಲತಾಣ http://karresults.nic.inನಲ್ಲಿ ಫಲಿತಾಂಶವನ್ನು ವಿದ್ಯಾರ್ಥಿಗಳು ಪಡೆಯಬಹುದಾಗಿದೆ. ಉತ್ತರ ಪತ್ರಿಕೆ ಸ್ಕ್ಯಾನಿಂಗ್ ಪಡೆಯಲು ಜೂನ್ 26 ಕೊನೆ ದಿನವಾಗಿದೆ. ಮರು ಮೌಲ್ಯಮಾಪನ, ಮರು ಎಣಿಕೆಗೆ ಅರ್ಜಿ ಸಲ್ಲಿಕೆಗೆ ಜೂನ್ 30 ಕೊನೆಯ ದಿನವಾಗಿದೆ ಎಂದು ಮಂಡಳಿಯ ಪ್ರಕಟಣೆ ತಿಳಿಸಿದೆ.

ನಾಳೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು,ಜೂ.19–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಜೂ.22ರಂದು ಬೆಳಗ್ಗೆ 10ರಿಂದ ಸಂಜೆ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.6.2023 ಬುಧವಾರ, ಮಳೆ ನಕ್ಷತ್ರ: ಮೃಗಶಿರ, 08.06.2023ರಿಂದ 21.06.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ,
ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಪುಷ್ಯ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಡಿ.ಶ್ರೀಹರಿ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಟಿ.ವಿ.ಸತ್ಯನಾರಾಯಣ, 9.00 ವೃತ್ತಿ ಮಾರ್ಗ ದರ್ಶನ–ಆರ್ಕಿಟೆಕ್ಚರ್, ಪ್ಲಾನಿಂಗ್ ಮತ್ತು ಡಿಸೈನ್ ವಿಷಯಗಳಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಸಪ್ನಾ ಶಿವಕುಮಾ ಅವರೊಂದಿಗೆ ಮಾತುಕತೆ, 9.30 ಚಿತ್ರಗೀತೆ, 10.00 ಹಿಂದೂಸ್ಥಾನಿ ಸಂಗೀತ–ರಾಜೀವ್ ತಾರಾನಾಥ್–ಸರೋಡ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಅಂಜನಾ ಡಿ.ಕುಂಬ್ಳೆ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಲಯ ಸಂಭ್ರಮ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ, ಪ್ರಸ್ತುತಿ–ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಡಾ.ಮಾಧವಿ ಭಂಡಾರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ, ಕಿಸಾನ್‌ವಾಣಿ– ಚಾಮರಾಜನಗರ ಜಿಲ್ಲೆಯ ಕೃಷಿಕರಿಗೆ ಕೃಷಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುವವರು ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಮಧುಸೂದನ. ನಡೆಸಿಕೊಡುತ್ತಾರೆ ಎನ್.ಕೇಶವಮೂರ್ತಿ, 9.30 ಹಿಂದೂಸ್ಥಾನಿ ಸಂಗೀತ– ಇರ್ಷದ್ ಖಾನ್–ಸಿತಾ, 10.00 ಜನಪದ ಸಂಗೀತ, 10.30 ಸವಿನೆನಪು

■ **ಆರ್ಟ್ ಆಫ್ ಲಿವಿಂಗ್:** ಯೋಗ ಶಿಬಿರ, ಸ್ಥಳ: ನಂ.2870, ವಜ್ರಮುಖಿ, 1ನೇ ಮೇನ್, 4ನೇ ಕ್ರಾಸ್, ಚಾಮುಂಡಿಪುರಂ ಮತ್ತು ಆರ್ಟ್ ಆಫ್ ಲಿವಿಂಗ್ ಆಶ್ರಮ, ಜೆಎಸ್‌ಎಸ್ ಕಾಲೇಜು ಹತ್ತಿರ, ಬೆಳಗ್ಗೆ 6ರಿಂದ 7ರವರೆಗೆ.

■ **ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ:** ರಾಜರ್ಷಿ ನಾಲ್ವಡಿ ಕೃಷ್ಣರಾಜ ಜಯಂತಿ ಮತ್ತು ಆಷಾಢ ಮಾಸದ ಪ್ರಯುಕ್ತ 7ನೇ ವರ್ಷದ ಚಾಮುಂಡಿಬೆಟ್ಟದ 1101 ಮೆಟ್ಟಿಲುಗಳ ಸ್ವಚ್ಛತಾ ಕಾರ್ಯಕ್ರಮ, ಚಾಲನೆ: ಶಾಸಕ ಟಿ.ಎಸ್.ಶ್ರೀವತ್ಸ, ಉಪಸ್ಥಿತರು: ಸಾಹಿತಿ ಬನ್ನೂರು ಕೆ.ರಾಜು, ಕೆಂಪೇಗೌಡ, ಸ್ಥಳ: ಚಾಮುಂಡಿಬೆಟ್ಟದ ಪಾದ, ಬೆಳಗ್ಗೆ 6.30ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಯೋಗ ದಿನಾಚರಣೆ, ಅಧ್ಯಕ್ಷತೆ: ಕರಾಮುವಿ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಮುಖ್ಯ ಅತಿಥಿಗಳು : ಯೋಗ ರತ್ನ ಗಂಗಾಧರ ಗುರೂಜಿ, ಪಾಂಡುರಂಗ ಅವರಿಂದ ವ್ಯಕ್ತಿ ವಿಕಾಸ–ಯೋಗ ಕುರಿತು ಉಪನ್ಯಾಸ, ವಿಶೇಷ ಆಹ್ವಾನಿತರು: ಕರಾಮುವಿ ಕುಲಸಚಿವ ಪ್ರೊ.ಮೂರ್ತಿ, ಸ್ಥಳ: ಘಟಿಕೋತ್ಸವ ಭವನದ ಮುಂಭಾಗ, ಕರಾಮುವಿ ಆವರಣ, ಬೆಳಗ್ಗೆ 8ರಿಂದ.

■ **ಜಿಲ್ಲಾಡಳಿತ, ಆಯುಷ್ ಇಲಾಖೆ, ಯೋಗ ಫೆಡರೇಷನ್ ಆಫ್ ಮೈಸೂರು ಟ್ರಸ್ಟ್, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಭಾರತ್ ಸ್ವಾಭಿಮಾನ್ ಟ್ರಸ್ಟ್, ಮೈಸೂರು ಯೋಗ ಒಕ್ಕೂಟ, ಮೈಸೂರು ಯೋಗ ಸ್ಪೋರ್ಟ್ಸ್ ಫೆಡರೇಷನ್, ಜೆಎಸ್‌ಎಸ್ ಯೋಗಿಕ್ ರಿಸರ್ಚ್ ಫೌಂಡೇಷನ್, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಆಯುರ್ವೇದ ಕಾಲೇಜು, ಯೋಗ ಮತ್ತು ನ್ಯಾಚುರೋಪತಿ ಕಾಲೇಜು:** 'ವಸುದೈವ ಕುಟುಂಬಕ್ಕಂ', 'ಹರ್ ಘರ್ ಆಂಘನ್ ಯೋಗ' ಎಂದು ವಾಕ್ಯದೊಂದಿಗೆ 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸಾನ್ನಿಧ್ಯ: ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮಿಗಳು, ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮಿಗಳು, ರೆವರೆಂಡ್ ಫಾದರ್ ಅರುಳ್ ಸೆಲ್ವಕುಮಾರ್, ಜನಾಬ್ ತಾಜಮುಲ್ ತನ್ವೀರ್ ಪಾಷಾ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಾಜ ಕಲ್ಯಾಣ ಇಲಾಖೆ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಉದ್ಘಾಟನೆ: ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಯೋಗ ಜ್ಯೋತಿ ಬೆಳಗುವರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್, ಸುಮಲತಾ ಅಂಬರೀಷ್, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಎಚ್.ವಿಶ್ವನಾಥ್, ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ, ಸಿ.ಎನ್.ಮಂಜೇಗೌಡ, ಶಾಸಕರಾದ ತನ್ವೀರ್‌ಸೇಠ್, ಜಿ.ಟಿ.ದೇವೇಗೌಡ, ಅನಿಲ್‌ಕುಮಾರ್, ಡಿ. ರವಿಶಂಕರ್, ಜಿ.ಡಿ.ಹರೀಶ್‌ಗೌಡ, ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಉಪ ಮಹಾಪೌರರಾದ ಡಾ. ಜಿ.ರೂಪ, ಆಯುಷ್ ಇಲಾಖೆ ಆಯುಕ್ತ ಜೆ.ಮಂಜುನಾಥ್, ಪೊಲೀಸ್ ಆಯುಕ್ತ ರಮೇಶ್ ಬಿ., ಜಿಲ್ಲಾಧಿಕಾರಿ ಕೆ.ವಿ. ರಾಜೇಂದ್ರ, ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಮಹಾನಗರ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ, ಜಿಪಂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಾದ ಕೆ.ಎಂ. ಗಾಯಿತ್ರಿ, ಜಿಲ್ಲಾ ಆಯುಷ್ ಇಲಾಖೆ ಅಧಿಕಾರಿಗಳಾದ ಡಾ.ಕೃಷ್ಣ, ಸ್ಥಳ: ಅರಮನೆ ಆವರಣ, ಬೆಳಗ್ಗೆ 6ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಬೆಳಗ್ಗೆ 8ರಿಂದ.

■ **ಶ್ರೀ ಚಂದ್ರಮೌಳೀಶ್ವರಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್:** 81ನೇ ಜಯಂತ್ಯುತ್ಸವ–2023, 19ನೇ ಬ್ರಹ್ಮರಥೋತ್ಸವ, ಬೆಳಗ್ಗೆ 9 ಗಂಟೆಗೆ ನವಗ್ರಹ, ಮೃತ್ಯುಂಜಯ ಹೋಮ, ಸ್ಥಳ: ದೇವಸ್ಥಾನದ ಆವರಣ

■ **ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ:** ಯೋಗ ದಿನಾಚರಣೆ ಹಾಗೂ ವಿಶ್ವ ಸಂಗೀತ ದಿನಾಚರಣೆ, ಅಧ್ಯಕ್ಷತೆ: ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ಮುಖ್ಯ ಅತಿಥಿಗಳು: ಯೋಗ ತಜ್ಞ ಯೋಗ ಪ್ರಕಾಶ್, ಸಂಗೀತ ಶಾಸ್ತ್ರಜ್ಞ ವಿದ್ವಾನ್ ನಂಜುಂಡಸ್ವಾಮಿ, ಸ್ಥಳ: ವಿವಿ ಆವರಣ, ಬೆಳಗ್ಗೆ 10ಕ್ಕೆ.

■ **ಮಹಾರಾಜ ಕಾಲೇಜು:** ವಿಶ್ವಜ್ಞಾನಿ ಭಾರತರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರ 132ನೇ ದಿನಾಚರಣೆ, ಉದ್ಘಾಟನೆ: ರಾಜ್ಯಸಭಾ ಸದಸ್ಯ ಡಾ.ಎಲ್.ಹನುಮಂತಯ್ಯ, ಮುಖ್ಯ ಅತಿಥಿಗಳು: ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಪ್ರೊ.ಸಿ.ಎ.ಶ್ರೀಧರ್, ಉಪಸ್ಥಿತರು: ಆಡಳಿತಾಧಿಕಾರಿ ಪ್ರೊ.ವಿ.ಷಣ್ಮುಗಂ, ಸಂಚಾಲಕ ಪ್ರೊ. ಲೋಕೇಶ್, ಸ್ಥಳ: ಶತಮಾನೋತ್ಸವ ಭವನ, ಮಹಾರಾಜ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್:** ವಿಶ್ವ ಸಂಗೀತ ದಿನಾಚರಣೆ ಅಂಗವಾಗಿ ಸಂಗೀತ ಕ್ಷೇತ್ರದ ಸಾಧಕರಿಗೆ ಸಂಗೀತ ಕಲಾನಿಧಿ ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಬಿಜೆಪಿ ಮುಖಂಡರಾದ ಬಿ.ಪಿ. ಮಂಜುನಾಥ್, ಪ್ರಾಧ್ಯಾಪಕಿ ಡಾ.ಪವಿತ್ರ, ನಗರ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾನಂದೀಶ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ವಿದ್ವಾನ್ ರಾಘವೇಂದ್ರ ಪ್ರಸಾದ್, ಮನೋರೋಗ ತಜ್ಞ ಡಾ. ರೇಖಾ ಮನಶಾಂತಿ, ಅಜಯ್ ಶಾಸ್ತ್ರಿ, ಸ್ಥಳ: ರಕ್ತನಿಧಿ ಕೇಂದ್ರದ ಆವರಣ, ಸಯ್ಯಾಜಿರಾವ್ ರಸ್ತೆ, ಬೆಳಗ್ಗೆ 11ಕ್ಕೆ.

■ **ಹಳೆಯ ಪಿಂಚಣಿ ಯೋಜನೆ ಮರುಸ್ಥಾಪನೆಗಾಗಿ ಜಂಟಿ ವೇದಿಕೆ :** ಹಳೆಯ ಪಿಂಚಣಿ ಯೋಜನೆ ಮರುಸ್ಥಾಪನೆಗಾಗಿ ಶಾಂತಿಯುತ ಮೆರವಣಿಗೆ, ಸ್ಥಳ: ಮೈಮುಲ್‌ನಿಂದ, ಮಧ್ಯಾಹ್ನ 12 ರಿಂದ.

■ **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಮಧ್ಯಾಹ್ನ 12ಕ್ಕೆ ಅನ್ನಸಂತರ್ಪಣೆ, ಸಂಜೆ 5ಕ್ಕೆ ಭದ್ರಾವತಿಯ ಆಕಾಶವಾಣಿ ಮತ್ತು ದೂರದರ್ಶನ ಜನಪದ ಕಲಾವಿದ ಮತ್ತು ರಾಷ್ಟ್ರಪ್ರಶಸ್ತಿ ಪುರಸ್ಕೃತರಾದ ಶ್ರೀ ಮಹಾರಾಜ ಲಕ್ಷ್ಮಣ್ ರಾವ್ ಪೋರಕ್ ಮತ್ತು ತಂಡದವರಿಂದ ಶ್ರೀ ಅಂಬಾ ಭವಾನಿ ದೇವಿಯ ಮಹಾಗೋಂದಳಿ ಪೂಜೆ, ಪ್ರಸಾದ ವಿನಿಯೋಗ, ಸ್ಥಳ:ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ, ಕುವೆಂಪುನಗರ, ಸಂಜೆ 7ಕ್ಕೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ :** ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಮಧ್ಯಾಹ್ನ 3 ರಿಂದ.

■ **ಯೂನಿಲೆಟ್ :** ಶೋ ರೂಂ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಚಲನಚಿತ್ರ ನಟ ಡಾಲಿ ಧನಂಜಯ, ಸ್ಥಳ: ನಳಪಾಕ್ ಹೋಟೆಲ್ ಎದುರು, ಕುವೆಂಪುನಗರ, ಸಂಜೆ 4.30ಕ್ಕೆ.

■ **ವ್ಯವಸ್ಥಾಪಕರು :** ಡಾಕ್ಟರ್ಸ್ ಡೈರೆಕ್ಟರಿಯ 5ನೇ ಆವೃತ್ತಿ ಬಿಡುಗಡೆ ಸಮಾರಂಭ, ಮುಖ್ಯ ಅತಿಥಿಗಳು : ಸಂಸದ ಪ್ರತಾಪ್ ಸಿಂಹ, ಗೌರವ ಅತಿಥಿಗಳು : ಪೊಲೀಸ್ ಕಮೀಷನರ್ ಬಿ. ರಮೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಹೆಚ್. ಪ್ರಸಾದ್, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಸ್ಥಳ: ಹೋಟೆಲ್ ದಾಸ್‌ಪ್ರಕಾಶ್ ಪ್ಯಾರಡೈಸ್, ಯಾದವಗಿರಿ, ಸಂಜೆ 6ಕ್ಕೆ.

ಮನೆ ಬಾಡಿಗೆಗಾಗಿ ಅಡ್ವಾನ್ಸ್ ನೀಡುವ ನೆಪದಲ್ಲಿ ಮಾಲೀಕರಿಗೆ ದೋಖಾ

ಮೈಸೂರು, ಜೂ.20–ಮನೆಗೆ ಬಾಡಿಗೆಗೆ ಬರುವುದಾಗಿಯೂ, ಅದಕ್ಕೆ ಅಡ್ವಾನ್ಸ್ ನೀಡುವುದಾಗಿ ನಂಬಿಸಿ ಮನೆ ಮಾಲೀಕನ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ 50 ಸಾವಿರ ರೂ. ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಜನತಾನಗರ ನಿವಾಸಿ ಕೆ.ಜೆ.ಚಿಕ್ಕೇಗೌಡ(66) ಹಣ ಕಳೆದುಕೊಂಡವರಾಗಿದ್ದು, ಇವರ ಮನೆ ಬಾಡಿಗೆಗೆ ಇರುವುದಾಗಿ ಇವರು ಓಎಲ್‌ಎಕ್ಸ್‌ನಲ್ಲಿ ಜಾಹೀರಾತು ನೀಡಿದ್ದರು. ಅದನ್ನು ನೋಡಿ ಚಿಕ್ಕೇಗೌಡರಿಗೆ ಕರೆ ಮಾಡಿದ ವಂಚಕ ವಾಟ್ಸಾಪ್‌ನಲ್ಲಿ ಮನೆ ತೋರಿಸುವಂತೆ ಹೇಳಿದ್ದಾನೆ. ನಂತರ ತನಗೆ ಮನೆ ಇಷ್ಟವಾಗಿರುವುದಾಗಿ, ಅಡ್ವಾನ್ಸ್ ಕೊಡುವುದಾಗಿಯೂ ತಿಳಿಸಿದ ಆತ ಅವರ ಖಾತೆಯಿಂದ 50 ಸಾವಿರ ರೂ. ವರ್ಗಾವಣೆ ಮಾಡಿಕೊಂಡಿದ್ದು, ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಜಾ ಮಾರಾಟ ಯತ್ನ; ಒಬ್ಬನ ಬಂಧನ

ಮೈಸೂರು, ಜೂ.20–ಮೈಸೂರು ನಗರ ಸೆನ್ ಠಾಣೆ ಪೊಲೀಸರು ಗಾಂಜಾ ಮಾರಾಟಗಾರನನ್ನು ಬಂಧಿಸಿ 2.50 ಲಕ್ಷ ರೂ. ಮೌಲ್ಯದ 7.428 ಕೆ.ಜಿ. ಗಾಂಜಾ ವಶಪಡಿಸಿಕೊಂಡಿದ್ದಾರೆ. ಗೌಸಿಯಾನಗರ ನಿವಾಸಿ ಮಹಮ್ಮದ್ ರಾಜಿಕ್ ಅಲಿಯಾಸ್ ರಾಜಿಕ್(37) ಬಂಧಿತನಾಗಿದ್ದು, ಈತ ಮೈಸೂರು–ಬೆಂಗಳೂರು ರಸ್ತೆಯ ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಬಳಿ ಸೆನ್ ಇನ್ಸ್‌ಪೆಕ್ಟರ್ ಎನ್.ಜಯಕುಮಾರ್ ನೇತೃತ್ವದ ಪೊಲೀಸರು ಗಸ್ತು ಬರುತ್ತಿರುವುದನ್ನು ನೋಡಿ ಓಡಿದ್ದಾನೆ. ಈತನನ್ನು ಬೆನ್ನತ್ತಿ ಹಿಡಿದ ಪೊಲೀಸರು, ಆತನ ಬಳಿ ಇದ್ದ ಕಾಲೇಜ್ ಬ್ಯಾಗ್ ಪರಿಶೀಲಿಸಿದಾಗ ಅದರಲ್ಲಿ 7.428 ಕೆ.ಜಿ. ಗಾಂಜಾ ಇರುವುದು ಪತ್ತೆಯಾಗಿದೆ. ರಾಜಿಕ್‌ನನ್ನು ಬಂಧಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈ ಕಾರ್ಯಾಚರಣೆಯಲ್ಲಿ ಸೆನ್ ಇನ್ಸ್‌ಪೆಕ್ಟರ್ ಎನ್.ಜಯಕುಮಾರ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಎನ್.ಅನಿಲ್‌ಕುಮಾರ್, ಎಂ.ಎನ್.ಸಿದ್ದೇಶ್, ಸಿಬ್ಬಂದಿಗಳಾದ ಕೆ.ಎಸ್.ಶ್ರೀನಿವಾಸ, ಮತ್ತು ವಿ.ಎ.ಮಧು ಭಾಗವಹಿಸಿದ್ದರು.

2.50 ಲಕ್ಷ ಮೌಲ್ಯದ ಮಾಲು ವಶ

ಟಿ.ಎಸ್.ಸುಬ್ಬಣ್ಣ ಟ್ರಸ್ಟ್‌ನಲ್ಲಿ ವಂಚನೆ: ನಾಲ್ವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಜೂ.20–ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಟಿ.ಎಸ್.ಸುಬ್ಬಣ್ಣ ಪಬ್ಲಿಕ್ ಎಜುಕೇಷನ್ ಇನ್‌ಸ್ಟಿಟ್ಯೂಟ್ ಟ್ರಸ್ಟಿಗಳು ಸಾರ್ವಜನಿಕರಿಂದ 20 ಲಕ್ಷಕ್ಕೂ ಹೆಚ್ಚಿನ ಹಣ ಸಂಗ್ರಹಿಸಿ ಟ್ರಸ್ಟ್ ಖಾತೆಗೆ ಜಮಾ ಮಾಡದೆ ವಂಚಿಸಿದ್ದಾರೆ ಎಂದು ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಟ್ರಸ್ಟಿಗಳಾದ ಜಿ.ಸಿ.ರಾಜಣ್ಣ(65), ಡಿ.ನಾಗೂನಾಯಕ್(66), ಡಾ.ಎ.ಎಸ್.ಚಂದ್ರಶೇಖರ್(66) ಮತ್ತು ಪಿ.ಎನ್.ಹರೀಶ್(66) ಆರೋಪಕ್ಕೆ ಗುರಿಯಾದವರಾಗಿದ್ದಾರೆ.

ಇವರುಗಳು 2020ರ ಜ.1ರಿಂದ 2023ರ ಮೇ 31ರವರೆಗೆ ಟ್ರಸ್ಟ್ ಹೆಸರಿನಲ್ಲಿ ಸಾರ್ವಜನಿಕರು, ವಿವಿಧ ಶಾಲೆಗಳ ಶಿಕ್ಷಕರು ಹಾಗೂ ಇತರರಿಂದ 20 ಲಕ್ಷಕ್ಕೂ ಹೆಚ್ಚು ಹಣವನ್ನು ದೇಣಿಗೆ ರೂಪದಲ್ಲಿ ಸಂಗ್ರಹಿಸಿ, ಅದನ್ನು ಟ್ರಸ್ಟ್ ಖಾತೆಗೆ ಜಮೆ ಮಾಡದೆ ಸರಿಯಾಗಿ ಲೆಕ್ಕ ಪತ್ರಗಳನ್ನೂ ಕೂಡ ನಿರ್ವಹಿಸದೆ ವಂಚನೆ ಎಸಗಿದ್ದಾರೆ ಎಂದು ಹಲವಾರು ಅನಾಮಧೇಯ ಪತ್ರಗಳು ಬಂದಿದ್ದು, ಈ ಬಗ್ಗೆ ಪ್ರಶ್ನಿಸಿದಾಗ ಜೈಲಿಗೆ ಹಾಕಿಸುವುದಾಗಿ ಹಾಗೂ ಟ್ರಸ್ಟ್‌ನಿಂದ ವಜಾ ಮಾಡುವುದಾಗಿ ಬೆದರಿಸಿದ್ದಾರೆ ಎಂದು ಟ್ರಸ್ಟ್‌ನ ಕಾರ್ಯದರ್ಶಿ ಡಿ.ಜಿ.ಸೋಮಶೇಖರ ಮೂರ್ತಿ ನೀಡಿದ ದೂರನ್ನು, ನ್ಯಾಯಾಲಯದ ಆದೇಶದ ಮೇರೆಗೆ ವಿದ್ಯಾರಣ್ಯ ಪುರಂ ಠಾಣೆ ಪೊಲೀಸರು ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಮನೆ ಹಿಂಬಾಗಿಲು ಮುರಿದು ಚಿನ್ನಾಭರಣ, ನಗದು ಕಳವು

ಪಿರಿಯಾಪಟ್ಟಣ,ಜೂ.20–ಪೊಲೀಸ್ ಹೆಡ್ ಕಾನ್‌ಸ್ಟೇಬಲ್ ಮನೆಯ ಹಿಂಬಾಗಿಲು ಮುರಿದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿರುವ ಬಗ್ಗೆ ಪಿರಿಯಾಪಟ್ಟಣದ ಸರ್ಕಾರಿ ನೌಕರರ ಬಡಾವಣೆಯಿಂದ ವರದಿಯಾಗಿದೆ.

ಪಿರಿಯಾಪಟ್ಟಣದಲ್ಲಿ ವಾಸವಿರುವ ಹುಣಸೂರು ಗ್ರಾಮಾಂತರ ಠಾಣೆಯ ಹೆಡ್ ಕಾನ್‌ಸ್ಟೇಬಲ್ ನಯೀಂ ಅಹಮ್ಮದ್(42) ಚಿನ್ನಾಭರಣ ಹಾಗೂ ಹಣ ಕಳೆದುಕೊಂಡವರಾಗಿದ್ದು, ಇವರ ಪತ್ನಿ ಇರ್ಷಾದಾ ಬಾನು ಬೈಲುಕುಪ್ಪೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿದ್ದು, ಇಬ್ಬರು ಮಕ್ಕಳು ಕೊಪ್ಪ ಗ್ರಾಮದ ನಳಂದ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಪ್ರತೀದಿನ ಈ ಕುಟುಂಬದವರು ಪಿರಿಯಾಪಟ್ಟಣದಿಂದ ಹುಣಸೂರು ಮತ್ತು ಬೈಲುಕುಪ್ಪೆಗೆ ತೆರಳುವುದು ವಾಡಿಕೆ.

ಜೂ.12ರಿಂದ 17ರವರೆಗೆ ಚಿಕ್ಕಮಗಳೂರು ಜಿಲ್ಲೆ ಕಡೂರು ಪೊಲೀಸ್ ತರಬೇತಿ ಶಾಲೆಯಲ್ಲಿ ನಡೆದ ತರಬೇತಿಗೆ ಹೆಡ್ ಕಾನ್‌ಸ್ಟೇಬಲ್ ನಯೀಂ ಅಹಮ್ಮದ್ ಹೋಗಿದ್ದರು. ಜೂ.16ರಂದು ವಾಡಿಕೆಯಂತೆ ಅವರ ಪತ್ನಿ ಬೈಲುಕುಪ್ಪೆಗೆ ಹಾಗೂ ಮಕ್ಕಳು ಕೊಪ್ಪ ಗ್ರಾಮದ ಶಾಲೆಗೆ ಹೋಗಿದ್ದು, ಸಂಜೆ ಹಿಂದಿರುಗಿದಾಗ ಅವರ ಮನೆಯ ಹಿಂಬಾಗಿಲು ಮುರಿದು 40 ಗ್ರಾಂ ತೂಕದ ಚಿನ್ನಾಭರಣ, 12 ಸಾವಿರ ರೂ. ನಗದು ಹಾಗೂ ಮೊಬೈಲ್ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಪಿರಿಯಾಪಟ್ಟಣದ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟೊಮೆಟೋ ಕಳ್ಳತನಕ್ಕೆ ಬಂದ ಖದೀಮರು ಬೈಕ್ ಬಿಟ್ಟು ಪರಾರಿ

ಸಾಲಿಗ್ರಾಮ,ಜೂ.20–ಟೊಮೆಟೋ ಕದಿಯಲು ಬಂದ ಖದೀಮರು, ರೈತರ ಕಂಡು ಬೈಕ್ ಬಿಟ್ಟು ಪರಾರಿಯಾದ ಘಟನೆ ಇಲ್ಲಿಗೆ ಸಮೀಪದ ಸಾಲೆ ಕೊಪ್ಪಲು ಗ್ರಾಮದಲ್ಲಿ ನಡೆದಿದೆ. ಈ ಗ್ರಾಮದ ರೈತ ಎಸ್.ಬಿ.ಸಂತೋಷ್ (28) ಅವರು ಎ.ಎನ್. ಭಾನುಮತಿ ಎಂಬುವರಿಗೆ ಸೇರಿದ 20 ಗುಂಟೆ ಜಮೀನನ್ನು ಗುತ್ತಿಗೆಗೆ ಪಡೆದು ಟೊಮೆಟೋ ಬೆಳೆಯುತ್ತಿದ್ದಾರೆ. ಇವರ ಜಮೀನಿನಲ್ಲಿ ಕಳೆದ 15 ದಿನದಿಂದಲೂ ಟೊಮೆಟೋ ಕಳವಾಗುತ್ತಿತ್ತು. ಜೂ.16ರಂದು ರಾತ್ರಿ 9.30ರ ಸುಮಾರಿನಲ್ಲಿ ಸಂತೋಷ್ ಮತ್ತು ಅವರ ತಂದೆ ಬಾಲಕೃಷ್ಣ ಅವರು ಜಮೀನಿನ ಬಳಿಗೆ ಹೋದಾಗ ಅಲ್ಲಿ ಟಿವಿಎಸ್ ಸ್ಟಾರ್ ಸಿಟಿ ಬೈಕ್ ನಿಂತಿತ್ತು. ಜಮೀನಿನ ಒಳಗೆ ಇಬ್ಬರು ಖದೀಮರು ಟೊಮೆಟೋ ಕುಯ್ಯುತ್ತಿರುವುದು ಕಂಡು ಬಂದಿದೆ. ಈ ವೇಳೆ ಸಂತೋಷ ಮತ್ತು ಅವರ ತಂದೆ ಕೂಗಿಕೊಂಡಾಗ ಖದೀಮರು ತಾವು ಕುಯ್ದು ಚೀಲಗಳಲ್ಲಿ ತುಂಬಿಟ್ಟಿದ್ದ ಟೊಮೆಟೋ ಮತ್ತು ಬೈಕ್ ಬಿಟ್ಟು ಪರಾರಿಯಾಗಿದ್ದಾರೆ. ಸಾಲಿಗ್ರಾಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಯುನಿಲೆಟ್ ನೂತನ ಶೋ ರೂಮ್ ಉದ್ಘಾಟನೆ

ಮೈಸೂರು,ಜೂ.20 (ಪಿಎಂ)– ಯುನಿಲೆಟ್ ಅಪ್ಲೈಯನ್ಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಅತಿ ದೊಡ್ಡ ಡಿಜಿಟಲ್ ಶೋ ರೂಮ್ ಮೈಸೂರಿನ ಕುವೆಂಪುನಗರದಲ್ಲಿ ಜೂ.21ರಿಂದ ಆರಂಭವಾಗಲಿದೆ ಎಂದು ಕಂಪನಿಯ ಬಿಸಿನೆಸ್ ಮುಖ್ಯಸ್ಥ ಕೆ.ಟಿ.ಮುರಳಿ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ಆರಂಭವಾಗುತ್ತಿರುವ 4ನೇ ಶಾಖೆ ಇದಾಗಿದ್ದು, ಸಂಜೆ 4.30ಕ್ಕೆ ನಟ, ನಿರ್ಮಾಪಕ ಡಾಲಿ ಧನಂಜಯ್ ಶೋ ರೂಮ್ ಉದ್ಘಾಟಿಸಲಿದ್ದಾರೆ. ಕಂಪನಿ ವ್ಯವಸ್ಥಾಪಕ ನಿರ್ದೇಶಕ ಹುಮಾಯೂನ್ ಫಿಯಾಜ್, ನಿರ್ದೇಶಕಿ ಸೈಮಾ ಹುಮಾಯೂನ್ ಉಪಸ್ಥಿತರಿರಲಿದ್ದಾರೆ ಎಂದರು.

ವೈವಿಧ್ಯಮಯ ಎಲೆಕ್ಟ್ರಾನಿಕ್ಸ್ ಉಪಕರಣಗಳು ಒಂದೇ ಸೂರಿನಡಿ ದೊರೆಯುವುದು ಈ ಶೋ ರೂಮ್‌ನ ವಿಶೇಷ. ಉತ್ಪನ್ನಗಳ ಖರೀದಿಗೆ ರಿಯಾಯಿತಿ, ಉಡುಗೊರೆ ಸೇರಿದಂತೆ ಅನೇಕ ಕೊಡುಗೆಗಳು ದೊರೆಯಲಿವೆ. ನಮ್ಮ ಕಂಪನಿಯು ಈಗಾಗಲೇ ಮೈಸೂರಿನಲ್ಲಿ ಮೂರು ಮಳಿಗೆಗಳನ್ನು ಹೊಂದಿದ್ದು, 25 ಸಾವಿರಕ್ಕೂ ಹೆಚ್ಚು ಗ್ರಾಹಕರು ಸೇವೆ ಪಡೆಯುತ್ತಿದ್ದಾರೆ ಎಂದು ತಿಳಿಸಿದರು.

ಕಂಪನಿಯ ಕುವೆಂಪುನಗರ ನೂತನ ಶಾಖೆ ವ್ಯವಸ್ಥಾಪಕ ಶಬ್ರಿಸ್, ಕ್ಷೇತ್ರ ವ್ಯವಸ್ಥಾಪಕ ಮುಸೈಬ್‌ಖಾನ್, ಕಾರ್ಯತಂತ್ರದ ಮುಖ್ಯಸ್ಥ ಅಯಾಜ್ ಮುಹಿಯುದ್ದೀನ್, ವಿಜಯನಗರ ಶಾಖೆ ವ್ಯವಸ್ಥಾಪಕ ಮಂಜುಸ್ವಾಮಿ ಗೋಷ್ಠಿಯಲ್ಲಿದ್ದರು.

ನಿಧನ

ನರಸಮ್ಮ (ಮನೆಯಮ್ಮ)



ಮೈಸೂರು,ಜೂ.20–ಹೆಚ್.ಡಿ.ಕೋಟೆ ತಾಲೂಕು ಜಿ.ಬಿ.ಸರಗೂರು ಗ್ರಾಮದ ದಿವಂಗತ ಯಜಮಾನ್ ಬೋರೇಗೌಡರ ಪತ್ನಿ ನರಸಮ್ಮ (ಮನೆಯಮ್ಮ) ಅವರು ಇಂದು ರಾತ್ರಿ ನಿಧನರಾದರು. ಇವರಿಗೆ 83 ವರ್ಷ ವಯಸ್ಸಾಗಿತ್ತು. ಮೃತರು ಪುತ್ರರಾದ ಕಂಟ್ರಾಕ್ಟರ್ ಬೋರೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಕೆಂಪೇಗೌಡ, ಚಿತ್ರ ನಿರ್ದೇಶಕ ಸಿದ್ದೇಗೌಡ, ಸಿಟಿ ಕೋ ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕ ಎಸ್.ಬಿ.ಶಿವು ಸೇರಿದಂತೆ 6 ಮಂದಿ ಪುತ್ರರು ಹಾಗೂ ಇಬ್ಬರು ಪುತ್ರಿಯರು, ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಬುಧವಾರ) ಮಧ್ಯಾಹ್ನ 2.30ಕ್ಕೆ ಜಿ.ಬಿ.ಸರಗೂರು ಭೈರವೇಶ್ವರ ಫಾರಂಹೌಸ್‌ನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಾಗೇಂದ್ರ



ಮೈಸೂರು ವಿಜಯನಗರ ಮೊದಲ ಹಂತದ ನಿವಾಸಿ ನಾಗೇಂದ್ರ (42) ಇವರು ಇಂದು ರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ ಬೆಳಗ್ಗೆ 11.30ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನಿರ್ದೇಶನದಂತೆ ಆರ್ಥಿಕ ಇಲಾಖೆ ಕಟ್ಟಾದೇಶ

ಹಿಂದಿನ ಸರ್ಕಾರದ ಅವಧಿಯ ಎಲ್ಲಾ ಕಾಮಗಾರಿಗಳಿಗೆ ತಡೆ

ಕೆಲಸ ಮಾಡಿರುವ ಗುತ್ತಿಗೆದಾರರಿಗೆ ಹಣ ಪಾವತಿಯೂ ಇಲ್ಲ; ನಗರಪಾಲಿಕೆ, ಮುಡಾ, ಪಿಡಬ್ಲ್ಯೂಡಿ ಸೇರಿದಂತೆ ಎಲ್ಲಾ ಇಲಾಖೆಗಳ ಹೊಸ ಯೋಜನೆಗಳಿಗೆ ಬ್ರೇಕ್

ಮೈಸೂರು, ಜೂ.20(ಆರ್‌ಕೆ)–ಹೊಸ ಸರ್ಕಾರ ಬರುತ್ತಿದ್ದಂತೆಯೇ ಈ ಹಿಂದಿನ ಬಿಜೆಪಿ ಸರ್ಕಾರದಲ್ಲಿ ಕೈಗೊಂಡಿದ್ದ ಎಲ್ಲಾ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳು ಹಾಗೂ ಹೊಸ ಯೋಜನೆಗಳನ್ನು ಸ್ಥಗಿತಗೊಳಿಸುವಂತೆ ಆರ್ಥಿಕ ಇಲಾಖೆ ಆದೇಶ ನೀಡಿದೆ.

ಮೇ 22ರಂದು ಆರ್ಥಿಕ ಇಲಾಖೆ ಕಾರ್ಯದರ್ಶಿ ಡಾ.ಏಕರೂಪ ಕೌರ್ ಈ ಕುರಿತು ರಾಜ್ಯದ ಎಲ್ಲಾ ಇಲಾಖೆಗಳು, ನಿಗಮ–ಮಂಡಳಿ, ಪ್ರಾಧಿಕಾರಗಳ ಮುಖ್ಯಸ್ಥರಿಗೆ ಸುತ್ತೋಲೆ ಹೊರಡಿಸಿದ್ದು, ಮುಖ್ಯಮಂತ್ರಿಗಳ ನಿರ್ದೇಶನದಂತೆ ಈ ಹಿಂದಿನ ಸರ್ಕಾರ ಕೈಗೊಂಡಿದ್ದ ಅಭಿವೃದ್ಧಿ ಯೋಜನೆಗಳನ್ನು ತಡೆ ಹಿಡಿಯುವಂತೆ ಕಟ್ಟಾಜ್ಞೆ ನೀಡಿದ್ದಾರೆ.

ಎಲ್ಲಾ ಇಲಾಖೆ, ಅದರ ಅಧೀನಕ್ಕೊಳಪಡುವ ನಿಗಮ–ಮಂಡಳಿ, ಪ್ರಾಧಿಕಾರಗಳ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮುಂದಿನ ಹಣ ಬಿಡುಗಡೆ, ಬಿಲ್ ಪಾವತಿಗಳನ್ನು ತಕ್ಷಣದಿಂದಲೇ ತಡೆ ಹಿಡಿಯಬೇಕು ಹಾಗೂ ಆರಂಭವಾಗದಿರುವ ಎಲ್ಲಾ ಹೊಸ ಕಾಮಗಾರಿಗಳನ್ನು ತಡೆ ಹಿಡಿಯುವಂತೆ ಸುತ್ತೋಲೆಯಲ್ಲಿ ತಿಳಿಸಲಾಗಿದೆ.



ಪರಿಣಾಮ ಮೈಸೂರಿನ ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ), ಲೋಕೋಪಯೋಗಿ ಇಲಾಖೆ, ನೀರಾವರಿ ಇಲಾಖೆ, ಕಾವೇರಿ ನೀರಾವರಿ ನಿಗಮ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಚೆಸ್ಕಾಂ ಸೇರಿದಂತೆ ಎಲ್ಲಾ ಇಲಾಖೆಗಳಲ್ಲಿ ಆರಂಭವಾಗಬೇಕಿದ್ದ ಹೊಸ ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಸ್ಥಗಿತಗೊಂಡಿವೆ. ಕಾರ್ಯಾದೇಶ ನೀಡದ ಹಾಗೂ ಒಪ್ಪಂದ (Agreement)ವಾಗದ ಕೆಲಸಗಳ ಪ್ರಕ್ರಿಯೆಯನ್ನು ತಡೆ ಹಿಡಿಯಲಾಗಿದೆ. ಈಗಾಗಲೇ ಎಸ್ಟಿಮೇಟ್ ಮತ್ತು ಡಿಪಿಆರ್ ಆಗಿ ಪ್ರಸ್ತಾವನೆ ಸಲ್ಲಿಸಿರುವ ಹಾಗೂ ಸರ್ಕಾರದಿಂದ ಅನುದಾನ ನೀಡುವ ಕಾಮಗಾರಿಗಳಿಗೂ ಬ್ರೇಕ್ ಬಿದ್ದಿದೆ.

ಆಂತರಿಕ ಸಂಪನ್ಮೂಲದಿಂದ ಕೈಗೆತ್ತಿಕೊಂಡಿರುವ ಹಾಗೂ ಅಂತಿಮ ಹಂತದಲ್ಲಿರುವ ಕೆಲಸಗಳಿಗೆ ಹೊಸ ಸರ್ಕಾರದ ಸುತ್ತೋಲೆ ಮಾರ್ಗಸೂಚಿ ಅನ್ವಯಿಸುವುದಿಲ್ಲವಾದರೂ, ಹೊಸ ಯೋಜನೆಗಳು ಮರೀಚಿಕೆಯಾದಂತಾಗಿದೆ. ಹಣ ಬಿಡುಗಡೆ, ಬಿಲ್ ಪಾವತಿಗಳಿಗೂ ತಡೆಯಾಜ್ಞೆ ಇರುವುದರಿಂದ ರಸ್ತೆ, ಚರಂಡಿಯಂತಹ ಕಾಮಗಾರಿ ಮಾಡುತ್ತಿರುವ ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದಂತಾಗಿದೆ.

ಮುಡಾ, ಪಾಲಿಕೆ, ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳಿಗಂತೂ ಕೆಲಸವೇ ಇಲ್ಲದಂತಾಗಿದೆ. ಹೊಸ ಕಾಮಗಾರಿಗಳಿಗೆ ತಡೆ ಇರುವ ಕಾರಣ ಪ್ರಕ್ರಿಯೆಗಳಿಲ್ಲದೇ ಕಚೇರಿಗಳಲ್ಲಿ ಕಾಲ ಕಳೆಯುತ್ತಿದ್ದಾರೆ. ಅಧಿಕಾರಿಗಳು, ಸಿಬ್ಬಂದಿಗಳು ಕೇವಲ ಹಳೇ ಕಡತಗಳನ್ನೇ ಪರಿಶೀಲಿಸುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಮುಡಾ ಕಡೇ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಮುಂದಿನ ಆದೇಶದವರೆಗೆ ತಡೆ ಹಿಡಿಯುವಂತೆ ಮೈಸೂರಿನ ಜಿಲ್ಲಾ ಪಂಚಾಯಿತಿ ಕಚೇರಿಯಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೌಖಿಕ ಆದೇಶ ನೀಡಿರುವುದರಿಂದ ನಾಗರಿಕ ಸೌಲಭ್ಯ ನಿವೇಶನ (ಸಿ.ಎ. ಸೈಟ್) ಹಾಗೂ ಸಾಧಕರಿಗೆ ನೀಡುವ 'ಜಿ' ವರ್ಗದ ನಿವೇಶನ ಹಂಚಿಕೆ ಪ್ರಕ್ರಿಯೆಯೂ ಸ್ಥಗಿತಗೊಂಡಿದೆ.

ಈ ಹಿಂದೆ ಪಾಲಿಕೆ ಮತ್ತು ಮುಡಾದಲ್ಲಿ ನಿರ್ಣಯವಾಗಿದ್ದ ಅಭಿವೃದ್ಧಿ ಯೋಜನೆಯ ಪ್ರಕ್ರಿಯೆಗೂ ಬ್ರೇಕ್ ಬಿದ್ದಿದ್ದು, ಮುಖ್ಯಮಂತ್ರಿಗಳ ಮುಂದಿನ ಆದೇಶಕ್ಕಾಗಿ ಅಧಿಕಾರಿಗಳು ಕಾಯುತ್ತಿದ್ದಾರೆ. ರಸ್ತೆ, ಚರಂಡಿ ಕಾಮಗಾರಿಗಳೂ ಅರ್ಧಕ್ಕೆ ನಿಂತಿವೆ.

ತಮ್ಮ ಸೋಲಿನಿಂದ ಹತಾಶರಾಗಿರುವ ಕಾಂಗ್ರೆಸ್ ಕಾರ್ಯಕರ್ತರಲ್ಲಿ ವಿಶ್ವಾಸ ತುಂಬಿದ ಎಂಕೆಎಸ್

ಕೆ.ಆರ್.ಕ್ಷೇತ್ರದ ಮತದಾರರಿಗೆ, ಕಾರ್ಯಕರ್ತರಿಗೆ ಕೃತಜ್ಞತೆ



ಮೈಸೂರು, ಜೂ.20(ಎಂಕೆ)– ರಾಜಕೀಯ ಜೀವನದಲ್ಲಿ ಸೋಲು–ಗೆಲುವು ಸಹಜ. ಆದರೆ ಎಂದಿಗೂ ಜೀವನದಲ್ಲಿ ಉತ್ಸಾಹ ಕಳೆದುಕೊಳ್ಳಬಾರದು ಎನ್ನುವ ಮೂಲಕ ಕೆ.ಆರ್.ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರಲ್ಲಿ ವಿಶ್ವಾಸ ತುಂಬಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕ್ಷೇತ್ರದ ಮತದಾರರು ಹಾಗೂ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದರು.

ಕುವೆಂಪುನಗರದಲ್ಲಿರುವ ಚಿಕ್ಕಮ್ಮಾನಿಕೇತನ ಸಮುದಾಯ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ಕೃತಜ್ಞತಾ ಸಭೆಯಲ್ಲಿ ಮಾತನಾಡಿದ ಅವರು, ನನ್ನ ನೆಚ್ಚಿನ ನಾಯಕರಾದ ಸಿದ್ದರಾಮಯ್ಯನವರ ಗೆಲುವು ನನ್ನ ಸೋಲಿನ ನೋವನ್ನು ಮರೆಸಿದೆ. ಅವರ ಗೆಲುವಿನ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದ್ದು, ರಾಜ್ಯದ ಬಡವರು, ಶೋಷಿತರು, ದಲಿತರು, ಅಲ್ಪಸಂಖ್ಯಾತರು, ದಮನಿತರು ನೆಮ್ಮದಿಯಿಂದ ಬದುಕುವಂತಾಗಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಹಕಾರದಿಂದ ಒಳ್ಳೆಯ ಅಭಿವೃದ್ಧಿ ಕೆಲಸಗಳಾಗುತ್ತವೆ. ಕಾಂಗ್ರೆಸ್ ಕಾರ್ಯಕರ್ತರು ಯಾರೇ ಬಡವರನ್ನು ಕರೆದುಕೊಂಡು ಬಂದರೂ ಅವರ ಸೇವೆ ಮಾಡಲು ಸದಾ ಸಿದ್ಧನಿದ್ದೇನೆ. ಅದಕ್ಕಾಗಿ ನನ್ನ ಮನೆ ಬಾಗಿಲು ಸದಾ ತೆರೆದಿರುತ್ತದೆ. ಕೆಲವರು ನನ್ನನ್ನು ಅನುಕಂಪ ಮತ್ತು ಕರುಣೆಯ ದೃಷ್ಟಿಯಲ್ಲಿ ನೋಡುತ್ತಿದ್ದಾರೆ. ಆದರೆ ಯಾರೂ ಧೃತಿಗೆಡಬೇಕಿಲ್ಲ ಎಂದು ಧೈರ್ಯ ತುಂಬಿದರು.

ಮಹಿಳೆಯರಿಗೆ ಶಕ್ತಿ: ಪುರುಷ ಪ್ರಧಾನ ಸಮಾಜದಲ್ಲಿ ಮನೆಯೊಳಗೆ ಸೀಮಿತವಾಗಿದ್ದ ಮಹಿಳೆಯರು 'ಶಕ್ತಿ' ಯೋಜನೆಯಿಂದ ರಾಜ್ಯದೆಲ್ಲೆಡೆ ಮುಕ್ತವಾಗಿ ಸಂಚರಿಸುತ್ತಿದ್ದಾರೆ. ವ್ಯಾಪಾರ ವಹಿವಾಟುಗಳು ಹೆಚ್ಚಾಗುವುದರ ಮೂಲಕ ಅದೆಷ್ಟೋ ಬಡ ಕುಟುಂಬಗಳ ಮುಖದಲ್ಲಿ ಮಂದಹಾಸ ಮೂಡಿದೆ. ಶಕ್ತಿ ಸ್ವರೂಪವಾದ ಮಹಿಳೆಯರಿಗೆ ಶಕ್ತಿ ನೀಡುವ ಮೂಲಕ ಮಹಿಳೆಯ ಸಬಲೀಕರಣಕ್ಕೆ ಕಾಂಗ್ರೆಸ್ ಸರ್ಕಾರ ಕೆಲಸ ಮಾಡುತ್ತಿದೆ. ಕೊರೊನಾ ಸಂದರ್ಭದಲ್ಲಿ ಜೀವನ ನಿರ್ವಹಿಸಲಾಗದೆ ಬಡವರು ತಮ್ಮ ಮನೆಯಲ್ಲಿದ್ದ ಸಣ್ಣ–ಪುಟ್ಟ ಚಿನ್ನಾಭರಣಗಳನ್ನು ಅಡವಿಟ್ಟು ಜೀವ ಉಳಿಸಿಕೊಂಡಿದ್ದಾರೆ. ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಮೂಲಕ ಬಡವರ ಕಷ್ಟ ಕಡಿಮೆಯಾಗಲಿದೆ ಎಂದು ಹೇಳಿದರು.

ಕೃತಜ್ಞತೆ: ಕೆ.ಆರ್.ಕ್ಷೇತ್ರದಲ್ಲಿರುವ ಒಂದು ವರ್ಗದ ಜನ ಅಭ್ಯರ್ಥಿ ಯಾರೇ ಆಗಲಿ, ಏನನ್ನೂ ನೋಡದೆ ಮತ ನೀಡುತ್ತಾರೆ. ಮತ್ತೊಂದು ವರ್ಗದ ಜನ ಅಭಿವೃದ್ಧಿ, ಜನಪರ ವ್ಯಕ್ತಿತ್ವವನ್ನು ನೋಡಿ ಬೆಂಬಲಿಸುತ್ತಾರೆ. ಹಾಗೆಯೇ ಕ್ಷೇತ್ರದಲ್ಲಿನ ಕಾಂಗ್ರೆಸ್‌ನ ಕಾರ್ಯಕರ್ತರು ಪ್ರಾಮಾಣಿಕವಾಗಿ ದುಡಿದಿದ್ದಾರೆ. 60 ಸಾವಿರಕ್ಕೂ ಹೆಚ್ಚು ಮತಗಳನ್ನು ನೀಡಿದ ಪ್ರತಿಯೊಬ್ಬರಿಗೂ ನನ್ನ ಮನಃಪೂರ್ವಕ ಕೃತಜ್ಞತೆಗಳನ್ನು ತಿಳಿಸುತ್ತೇನೆ. ಮುಂದೆಯೂ ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತೇನೆ ಎಂದರು.

ಉನ್ನತ ಸ್ಥಾನ ನೀಡಿ: ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಎಂ.ಕೆ.ಸೋಮಶೇಖರ್ ಅವರು ಯಾರನ್ನು ಹೆದರಿಸಿ–ಬೆದರಿಸಿ ರಾಜಕೀಯ ಮಾಡಿದವರಲ್ಲ. ಇಂತಹ ವ್ಯಕ್ತಿಗೆ ಉನ್ನತ ಸ್ಥಾನಮಾನ ನೀಡಿ ಅವರಿಗೆ ನೈತಿಕ ಶಕ್ತಿ ನೀಡಬೇಕು. ಅವರ ನಾಯಕತ್ವವನ್ನು ಮುಂದೆಯೂ ಉಳಿಸಬೇಕಿದೆ. 5 ವರ್ಷಗಳು ಸಕ್ರಿಯವಾಗಿ ಜನಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದರು.

ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಕೆಪಿಸಿಸಿ ಸದಸ್ಯ ಟಿ.ಎಸ್.ರವಿಶಂಕರ್, ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯ ಎಂ.ಸುನೀಲ್, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಮುಖಂಡರಾದ ಜಾಕೀರ್ ಪಾಷ, ಎಂ.ಸಿ. ಚಿಕ್ಕಣ್ಣ, ಎಂ.ಶಿವಣ್ಣ, ರವಿಶಂಕರ್, ವೀಣಾ, ಭವ್ಯ, ಡಾ.ಸುಜಾತರಾವ್, ಶೋಭಾ, ಮಂಜುಳಾ, ಯೋಗೇಶ್ ಉಪ್ಪಾರ, ನಾಗೇಶ್, ಅಪ್ಪುಗೌಡ, ಪ್ರತಿಧ್ವನಿ ಪ್ರಸಾದ್, ಆಲನಹಳ್ಳಿ ಶಿವಣ್ಣ, ಕುಮಾರ್‌ಗೌಡ, ಆಶ್ರಯ ಮೂರ್ತಿ, ಜೋಗಿ ಮಹೇಶ್, ಗುಣಶೇಖರ್, ಜೈರಾಜ್, ಉದ್ಯಮಿ ದೀಪಕ್ ಸತ್ಯ, ಆನಂದ್, ರಮೇಶ್, ಪುಟ್ಟಸ್ವಾಮಿ, ಶಾದಿಖ್ ಉಲ್ಲಾ ರೆಹಮಾನ್, ಫಾರೂಖ್, ನಾಸೀರ್, ಡೈರಿ ವೆಂಕಟೇಶ್, ಜೆ.ವಿನಯ್‌ಕುಮಾರ್, ವಸಂತ್, ಜಗನ್ನಾಥ್ ಭೋವಿ, ಚಿಕ್ಕಲಿಂಗು, ಪುಟ್ಟಸ್ವಾಮಿ ಮತ್ತಿತರರಿದ್ದರು.

ಬಿಜೆಪಿ ದುರಾಡಳಿತದಿಂದ ಕಾಂಗ್ರೆಸ್‌ಗೆ ಗೆಲುವು...

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಗ್ಯಾರಂಟಿ ಯೋಜನೆಗಳಿಗಿಂತ ಬಿಜೆಪಿಯ ದುರಾಡಳಿತ ಅತೀ ಮುಖ್ಯ ಕಾರಣವಾಗಿದೆ. ಅಧಿಕಾರದಲ್ಲಿ ಇದ್ದಷ್ಟು ದಿನವೂ ವಿವಿಧ ಸಮುದಾಯಗಳ ನಡುವೆ ಕೋಮು ದ್ವೇಷ ಉಂಟು ಮಾಡುವ ಕೆಲಸವನ್ನೇ ಮಾಡಿದ್ದರ ಪರಿಣಾಮದಿಂದಾಗಿ ಬಿಜೆಪಿಯವರು ಸೋಲು ಅನುಭವಿಸಿದ್ದಾರೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಹೇಳಿದರು.

ಅಧಿಕಾರ ಕಳೆದುಕೊಂಡಿರುವ ರಾಜ್ಯದ ಬಿಜೆಪಿ ನಾಯಕರು ಹುಚ್ಚುಚ್ಚಾಗಿ ಏನೇನೋ ಮಾತನಾಡುತ್ತಿದ್ದಾರೆ. ಬಡವರಿಗೆ 2000 ರೂ. ಕೊಡುತ್ತೇವೆ ಎಂಬುದನ್ನೂ ಸಹಿಸಲಾಗದೆ ಮೈಯೊಳಗೆ ಚೇಳು ಬಿಟ್ಟುಕೊಂಡವರಂತೆ ಎಗರಾಡುತ್ತಿದ್ದಾರೆ. ಬಡವರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದ ಕೇಂದ್ರದ ಬಿಜೆಪಿ ಸರ್ಕಾರ ಅಕ್ಕಿ ಕೊಡಲು ನಿರಾಕರಿಸಿದೆ. ಬಡತನದಲ್ಲೇ ಬೆಳೆದಿರುವ ಪ್ರಧಾನಿ ಮೋದಿ, ಈಗ ಶ್ರೀಮಂತರ ಪರವಾಗಿದ್ದಾರೆ. ಇದೆಲ್ಲವನ್ನೂ ಗಮನಿಸುತ್ತಿರುವ ರಾಜ್ಯದ ಪ್ರಬುದ್ಧ ಮತದಾರರು ಹಿಜಾಬ್, ಹಲಾಲ್ ಎಂಬ ಕೋಮು ದ್ವೇಷದ ವಿಚಾರಗಳಿಗೆ ಮಣೆಹಾಕದೆ ಕಾಂಗ್ರೆಸ್ ಗೆಲ್ಲಿಸಿದ್ದಾರೆ. ಹಾಗೆಯೇ ಕೇಂದ್ರದಲ್ಲೂ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರಷ್ಟೇ ದೇಶದಲ್ಲಿನ ಬಡವರು, ಮಹಿಳೆಯರು, ಹಿಂದುಳಿದವರು ಸ್ವಾಭಿಮಾನದಿಂದ ಬದುಕಲು ಸಾಧ್ಯ ಎಂದರು.

ಪರಿಷತ್‌ಗೆ ಶೆಟ್ಟರ್, ಬೋಸರಾಜ್, ತಿಪ್ಪಣ್ಣ ಆಯ್ಕೆ ಖಚಿತ




ಶೆಟ್ಟರ್ ಬೋಸರಾಜು ತಿಪ್ಪಣ್ಣ

ಬೆಂಗಳೂರು, ಜೂ.20(ಕೆಎಂಶಿ)– ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಸಚಿವ ಬೋಸರಾಜ್ ಹಾಗೂ ತಿಪ್ಪಣ್ಣ ಕಮಕನೂರು ಅವರು ವಿಧಾನಪರಿಷತ್ತಿಗೆ ಆಯ್ಕೆಯಾಗುವುದು ಖಚಿತವಾಗಿದೆ.

ಪರಿಷತ್ತಿನಲ್ಲಿ ತೆರವಾಗಿರುವ ಮೂರು ಸ್ಥಾನಗಳ ಉಪಚುನಾವಣೆಗೆ ನಾಮಪತ್ರ ಸಲ್ಲಿಸಲು ಕಡೆಯ ದಿನವಾದ ಮಂಗಳವಾರ ಕಾಂಗ್ರೆಸ್‌ನ ಮೂವರು ಅಭ್ಯರ್ಥಿಗಳು ಹೊರತುಪಡಿಸಿದರೆ, ಯಾವ ರಾಜಕೀಯ ಪಕ್ಷಗಳಿಂದ ಬೇರೆ ಯಾರೂ ನಾಮಪತ್ರ ಸಲ್ಲಿಸಿಲ್ಲ. ಅಗತ್ಯ ದಾಖಲೆ ಇಲ್ಲದೆ, ಪಕ್ಷೇತರರೊಬ್ಬರು ಕಾಟಾಚಾರಕ್ಕೆ ನಾಮಪತ್ರ ಸಲ್ಲಿಸಿದ್ದು, ಬುಧವಾರ ನಡೆಯುವ ಪರಿಶೀಲನೆ ಸಂದರ್ಭದಲ್ಲಿ ತಿರಸ್ಕೃತಗೊಳ್ಳುವುದು ನಿಶ್ಚಿತ. ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಮಾಜಿ ಸಚಿವರಾದ ಶಂಕರ್ ಹಾಗೂ ಬಾಬುರಾವ್ ಚಿಂಚನಸೂರು ಅವರ ರಾಜೀನಾಮೆಯಿಂದ ತೆರವಾದ ಸ್ಥಾನಗಳಿಗೆ ಭಾರತೀಯ ಚುನಾವಣಾ ಆಯೋಗ ಚುನಾವಣಾ ಅಧಿಸೂಚನೆ ಹೊರಡಿಸಿತ್ತು. ಪ್ರತ್ಯೇಕ ಅಧಿಸೂಚನೆ ಹೊರಡಿಸಿದ ಕಾರಣದಿಂದ ಆಡಳಿತಾರೂಢ ಕಾಂಗ್ರೆಸ್ ವಿಧಾನಸಭೆಯ ಬಲಾಬಲದ ಆಧಾರದ ಮೇಲೆ ಈ ಮೂರು ಸ್ಥಾನಗಳನ್ನು ಗಳಿಸಲಿದೆ. ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಅವರ ಸಂಪುಟದ ಸಹೋದ್ಯೋಗಿಗಳು ಉಪಸ್ಥಿತರಿದ್ದರು.

ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳ ಬಗ್ಗೆ ಬಿಜೆಪಿ ಅಪಪ್ರಚಾರ

- ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ವಾಗ್ದಾಳಿ
- ಕಾಂಗ್ರೆಸ್ ಭವನದಲ್ಲಿ ಕೃತಜ್ಞತೆ, ಅಭಿನಂದನಾ ಸಮಾರಂಭ



ಮೈಸೂರು,ಜೂ.20(ಎಂಕೆ)– ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬಿಜೆಪಿ ಅಪಪ್ರಚಾರ ಮಾಡಿ ಜನರನ್ನು ಎತ್ತಿ ಕಟ್ಟುವ ಮೂಲಕ ಅತ್ಯಂತ ಕೀಳು ಮಟ್ಟದ ರಾಜಕಾರಣ ಮಾಡುತ್ತಿದೆ ಎಂದು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಕೃತಜ್ಞತೆ ಹಾಗೂ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಅನ್ನ ಭಾಗ್ಯ ಯೋಜನೆಯನ್ನು ವಿಫಲಗೊಳಿಸಲು ಕೇಂದ್ರ ಸರ್ಕಾರ ಯತ್ನಿಸುತ್ತಿದೆ. ಅನ್ನಭಾಗ್ಯಕ್ಕೆ ಅಗತ್ಯವಿರುವ ಹೆಚ್ಚುವರಿ ಅಕ್ಕಿ ನೀಡಲು ಮೊದಲು ಒಪ್ಪಿಗೆ ಸೂಚಿಸಿ, ಯೋಜನೆ ಜಾರಿಗೊಳಿಸಲು ದಿನಾಂಕ ಘೋಷಣೆ ಮಾಡುತ್ತಿದ್ದಂತೆ ಅಕ್ಕಿ ಕೊಡುವುದಿಲ್ಲ ಎಂದು ಹೇಳಿದ್ದಾರೆ ಎಂದು ಕಿಡಿಕಾರಿದರು.

ವಿಶ್ವಾಸವಿದೆ: ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿರುವುದು ಅಷ್ಟು ಸುಲಭವಲ್ಲ. ಆದರೆ 13 ಬಾರಿ ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅವರ ಮೇಲೆ ರಾಜ್ಯದ ಜನತೆ ನಂಬಿಕೆ ಇಟ್ಟಿದ್ದಾರೆ. ಸವಾಲಿನ ಕೆಲಸವನ್ನು ನೆರವೇರಿಸುತ್ತಾರೆ ಎಂಬ ವಿಶ್ವಾಸವಿದೆ ಎಂದರು.

ಗೆಲುವಿನ ಶ್ರೇಯಸ್ಸು ಮತದಾರರಿಗೆ: ವರುಣ ಕ್ಷೇತ್ರದಲ್ಲಿ ಈ ಬಾರಿ ಸಿದ್ದರಾಮಯ್ಯ ಅವರು 46 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಇದಕ್ಕೆ ಪಕ್ಷದ ಕಾರ್ಯಕರ್ತರು ಮುಖಂಡರು ಹಗಲಿರುಳೆನ್ನದೇ, ಮಳೆ–ಬಿಸಿಲನ್ನು ಲೆಕ್ಕಿಸದೇ ದುಡಿದಿದ್ದು ಕಾರಣವಾಗಿದೆ. ಎಲ್ಲರ ಸಹಕಾರದಿಂದಾಗಿ ಅತ್ಯಂತ ವ್ಯವಸ್ಥಿತವಾಗಿ ಚುನಾವಣೆ ಎದುರಿಸಲು ಸಾಧ್ಯವಾಯಿತು. ನನ್ನ ತಂದೆಯ ಗೆಲುವಿನ ಶ್ರೇಯಸ್ಸು ಪಕ್ಷದ ನಾಯಕರಿಗೆ, ಕಾರ್ಯಕರ್ತರಿಗೆ ಹಾಗೂ ಮತದಾರರಿಗೆ ಸಲ್ಲಬೇಕು. ಹಾಗೆಯೇ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗೆಲುವಿಗೆ ಶ್ರಮಿಸಬೇಕು ಎಂದರು.

ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮಾತನಾಡಿ, ದೇಶದ ಯಾವ ರಾಜ್ಯದಲ್ಲೂ ಈ ರೀತಿಯ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯವಾಗಿಲ್ಲ. ಈ ಹಿಂದೆಯೂ ನುಡಿದಂತೆ ನಡೆದಿದ್ದ, ಮುಂದೆಯೂ ನಡೆಯುವ ಶಕ್ತಿ ಕಾಂಗ್ರೆಸ್ ಸರ್ಕಾರಕ್ಕಿದೆ. ಹಾಗೆಯೇ ನುಡಿದಂತೆ ನಡೆದ ಏಕೈಕ ಸರ್ಕಾರ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವಾಗಿದೆ ಎಂದು ಬಣ್ಣಿಸಿದರು.

ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ಕೇಂದ್ರ ಸರ್ಕಾರ 20 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಗೋಡೌನ್‌ನಲ್ಲಿ ಇಟ್ಟುಕೊಂಡು ಕೊಡುತ್ತಿಲ್ಲ. ಇಂತಹ ಸಂದರ್ಭದಲ್ಲಿ ನಾವುಗಳು ಸರ್ಕಾರದ ಸ್ಥಿತಿಯನ್ನು ಅರ್ಥಮಾಡಿಕೊಂಡು ಜನತೆಯಲ್ಲಿ ವಿಶ್ವಾಸ ತುಂಬುವ ಕೆಲಸ ಮಾಡಬೇಕು. ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಸರ್ಕಾರವನ್ನು ಮುನ್ನಡೆಸುವ ಶಕ್ತಿ ಎದೆಗಾರಿಕೆ ನಮ್ಮ ಸಿಎಂ ಮತ್ತು ಡಿಸಿಎಂ ಅವರಿಗೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಮಾಜಿ ಶಾಸಕ ಯತೀಂದ್ರ ಅವರನ್ನು ಅಭಿನಂದಿಸಲಾಯಿತು. ಶಾಸಕ ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಜಿಪಂ ಮಾಜಿ ಸದಸ್ಯ ಕೆ.ಮರಿಗೌಡ, ಕೂರ್ಗಳ್ಳಿ ಮಹದೇವ್, ವರುಣ ಮಹೇಶ್, ಲತಾ ಸಿದ್ದಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾಡಳಿತದಿಂದ ವಿಜೃಂಭಣೆಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆ

ಪೂರ್ವ ಸಿದ್ಧತೆ ಸಂಬಂಧ ಎಡಿಸಿ ಸಭೆ



ಮೈಸೂರು, ಜೂ.20– ನಾಡಪ್ರಭು ಕೆಂಪೇಗೌಡರ 514ನೇ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ಮೈಸೂರು ಜಿಲ್ಲಾಡಳಿತ ಸಜ್ಜಾಗಿದೆ.

ಈ ಹಿನ್ನೆಲೆಯಲ್ಲಿ ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್ ಅವರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಂಗಳವಾರ ಅಧಿಕಾರಿಗಳು ಹಾಗೂ ವಿವಿಧ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿ, ಚರ್ಚಿಸಿದರು.

ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜೂ.27ರಂದು ಕಲಾಮಂದಿರದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಆಚರಣೆ ಮಾಡಲಾಗುವುದು. ಅಂದು ಬೆಳಗ್ಗೆ 10ಕ್ಕೆ ನಗರದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಿಂದ ಆರಂಭವಾಗುವ ಮೆರವಣಿಗೆ ಕಲಾಮಂದಿರದ ಬಳಿ ಮುಕ್ತಾಯದ ಬಳಿಕ ಮಧ್ಯಾಹ್ನ 12ಕ್ಕೆ ವೇದಿಕೆ ಸಮಾರಂಭ ನಡೆಯಲಿದೆ. ಎಲ್ಲಾ ಕಾರ್ಯಕ್ರಮಗಳೂ ಶಿಷ್ಟಾಚಾರದನ್ವಯ ನಡೆಯಲಿದ್ದು, ಎಲ್ಲಾ ವರ್ಗದವರು ಜೊತೆಗೂಡಿ ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಕೆಂಪೇಗೌಡರ ಜಯಂತಿ ಆಚರಿಸಲಾಗುವುದು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮಾತನಾಡಿ, ಮೆರವಣಿಗೆ ಹಾಗೂ ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ಸ್ವಚ್ಛತೆ, ಕುಡಿಯುವ ನೀರು, ಶೌಚಾಲಯ ವ್ಯವಸ್ಥೆಯನ್ನು ಮೈಸೂರು ಪಾಲಿಕೆ ವತಿಯಿಂದ ಮಾಡಲಾಗುತ್ತಿದೆ. ಕಾರ್ಯಕ್ರಮ ಆಯೋಜನೆಗೆ ಸರ್ಕಾರ 50 ಸಾವಿರ ಅನುದಾನ ಲಭ್ಯವಿದ್ದು, ಸರ್ಕಾರದ ನಿಯಮಾವಳಿಗಳ ಅನ್ವಯ ಅರ್ಥಪೂರ್ಣ ಆಚರಣೆಗೆ ಕ್ರಮ ವಹಿಸಲಾಗಿದೆ ಎಂದು ಎಡಿಸಿ ಮಾಹಿತಿ ನೀಡಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ಸಂಘಟನೆಗಳ ಮುಖಂಡರು, ಕಲಾ ತಂಡಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಎಲ್ಲಾ ಸಮುದಾಯದವರು ಕೆಂಪೇಗೌಡರ ಜಯಂತಿಯಲ್ಲಿ ಶಿಷ್ಟಾಚಾರದ ಅನ್ವಯ ಪಾಲ್ಗೊಳ್ಳುವಂತೆ ಆಹ್ವಾನಿಸಬೇಕೆಂದು ಮನವಿ ಮಾಡಿಕೊಂಡರು. ಸಭೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗೋವಿಂದರಾಜು, ಕನ್ನಡ ಚಳುವಳಿ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ, ಜಿಲ್ಲಾ ಮಟ್ಟದ ಅಧಿಕಾರಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ಸಮುದಾಯದ ಮುಖಂಡರು ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಗಿರಾಕಿ : (ಎಲೆಕ್ಟ್ರಿಕ್ ಅಂಗಡಿಗೆ ಬಂದು) ಒಂದು ಕಪ್ಪು ಬಲ್ಬ್ ಕೊಡಿ

ಅಂಗಡಿಯಾತ : ಕಪ್ಪು ಬಲ್ಬಾ! ಅದ್ಯಾಕೆ ಸಾರ್?

ಗಿರಾಕಿ : ಮಧ್ಯಾಹ್ನದ ಹೊತ್ತಲ್ಲಿ ಕತ್ತಲು ಮಾಡಿಕೊಂಡು ಮಲಗೋ ಮಜಾನೆ ಬೇರೆ ಗುರು!

ಮೈಸೂರು ಮಿತ್ರ

ಬುಧವಾರ, 21 ಜೂನ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಜಗತ್ತು ಪೂರ್ತಿ ಮಾಯೆಯ ಆಟ ಮಾತ್ರ. ಧನ, ಜನ, ಯೌವ್ವನದ ಬಗ್ಗೆ ಗರ್ವಪಡಬೇಡ. ಇದೂ ಒಂದು ವಿಧದ ಮಾಯೆಯೇ. ಕಾಲ, ನಿಮಿಷ ಮಾತ್ರದಲ್ಲಿ ಇದೆಲ್ಲವನ್ನೂ ಸೆಳೆದುಕೊಳ್ಳಬಲ್ಲದು. –ಶ್ರೀಶಂಕರಾಚಾರ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒರಗಿತ್ತಿ ಒಡವೆ ಹಾಕೊಂಡು ನೀರೊಳಗೆ ನೆರಳು ನೋಡಿದಳಂತೆ

ನಿಮ್ಮ ಪತ್ರಗಳು

ಹೆಬ್ಬಾಳು ಕೆರೆಯ ರಸ್ತೆಯ ಮೇಲೆ ಹರಿಯುತ್ತಿರುವ ಯುಜಿಡಿ ನೀರು



ಮಾನ್ಯರೇ

ಮೈಸೂರಿನ ಪ್ರಸಿದ್ಧ ಪ್ರವಾಸಿ ಹಾಗೂ ವಾಯುವಿಹಾರಿಗಳ ತಾಣವಾಗಿರುವ ಹೆಬ್ಬಾಳು ಕೆರೆ ರಸ್ತೆಯ ಮೇಲೆ ಯುಜಿಡಿ ನೀರು ಕಳೆದ ಒಂದು ವಾರದಿಂದ ಹರಿಯುತ್ತಿದ್ದು, ದುರ್ವಾಸನೆ ಬೀರುತ್ತಿದೆ. ಇದರ ಪರಿಣಾಮ ನಿವಾಸಿಗಳು, ವಾಯುವಿಹಾರಿಗಳು, ಪ್ರವಾಸಿಗರು, ಉದ್ಯೋಗಿಗಳು ದುರ್ವಾಸನೆ ತಾಳಲಾರದೆ ಮೂಗು ಮುಚ್ಚಿಕೊಂಡು ಓಡಾಡುವಂತಾಗಿದೆ. ಇದರ ಬಗ್ಗೆ ನಿವಾಸಿಗಳು ಹಾಗೂ ಸಾರ್ವಜನಿಕರು ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿ ಸಮಸ್ಯೆ ಬಗೆಹರಿಸಿ ಅನೈರ್ಮಲ್ಯ ವಾತಾವರಣದಿಂದ ಪಾರು ಮಾಡುವಂತೆ ಮನವಿ ಮಾಡಿದ್ದಾರೆ.

– ಪ್ರೇಮಾ, ಹೆಬ್ಬಾಳು, ಮೈಸೂರು.

ದಸರೆಯನ್ನು ನೆನಪಿಸುತ್ತಿರುವ ಉಚಿತ ಬಸ್ ಸೇವೆ!

ಮಾನ್ಯರೇ,

ಈಗಿನ ಕರ್ನಾಟಕ ರಸ್ತೆ ಸಾರಿಗೆ ಬಸ್ಸುಗಳನ್ನು ಗಮನಿಸಿದರೆ ವಿಶ್ವವಿಖ್ಯಾತ ನಾಡಹಬ್ಬ ದಸರಾ ಉತ್ಸವದ ವೇಳೆ ಕಂಡು ಬರುವ ಜನಜಂಗುಳಿ ನೆನಪಿಗೆ ಬರುತ್ತಿದೆ. ಯಾವುದೇ ಬಸ್ಸನ್ನು ನೋಡಿದರೂ ತುಂಬಿರುತ್ತವೆ. ಮಾಸಿಕ ಬಸ್ ಪಾಸ್ ತೆಗೆದುಕೊಂಡವರು ಈ ಜನಜಂಗುಳಿಯನ್ನು ನೋಡಿ ಖಾಸಗಿ ವಾಹನದ ಮೊರೆ ಹೋಗಿ, ಹಣ ತೆತ್ತು ಪ್ರಯಾಣಿಸಬೇಕಾದ ಸನಿವೇಶ ನಿರ್ಮಾಣ ಆಗಿದೆ. ಖಾಸಗಿ ಆಟೋ, ಕ್ಯಾಬ್‌ಗಳಿಗೆ ದೊಡ್ಡ ಹೊಡೆತ ಬಿದ್ದಿದೆ. ಕಾಂಗ್ರೆಸ್ ಸರ್ಕಾರ ಇಂತಹ ಗ್ಯಾರಂಟಿಗಳ ಬದಲು 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಹಾಗೂ 15 ವರ್ಷದೊಳಗಿನ ಮಕ್ಕಳಿಗೆ ಉಚಿತ ಯೋಜನೆಯನ್ನು ತಂದಿದ್ದರೆ ಬಹಳ ಅನುಕೂಲವಾಗಿರುತ್ತಿತ್ತು. ಅದರ ಜೊತೆಗೆ ಉಚಿತ ಶಿಕ್ಷಣ, ಉಚಿತ ಆರೋಗ್ಯ ತಪಾಸಣೆಗಳ ಜೊತೆಗೆ ಔಷಧಿಯನ್ನು ಉಚಿತವಾಗಿ ನೀಡಿದ್ದರೆ ಹೆಚ್ಚು ಪ್ರಯೋಜನವಾಗುತ್ತಿತ್ತು. ಈ ಹಿಂದೆ ಬಿಜೆಪಿ ಸರ್ಕಾರ ಕೆಲವು ವರ್ಷಗಳ ಹಿಂದೆ 2000 ರೂ. ನೋಟ್ ಬ್ಯಾನ್ ಮಾಡಿದಾಗಲೂ ಇದೇ ತರಹದ ಜನಜಾತ್ರೆ ಬ್ಯಾಂಕುಗಳ ಮುಂದೆ ಸಾಲುಗಟ್ಟಿ ನಿಲ್ಲುತ್ತಿದ್ದವು. ಇದಕ್ಕೆ ಒಂದೇ ಪರಿಹಾರ ಎಂದರೆ ಈಗಿರುವ ಸಾರಿಗೆ ಬಸ್ಸುಗಳ ಸಂಖ್ಯೆಯನ್ನು ಮತ್ತಷ್ಟು ಜಾಸ್ತಿಗೊಳಿಸಬೇಕು. ಆಧಾರ್ ಕಾರ್ಡ್ ಅನ್ನು ಕಡೆಗಣಿಸಿದ್ದ ಜನರಿಗೆ ಈಗ ಅದು ಬಹಳ ಬೇಡಿಕೆ ಬಂದಿದೆ. ಇತ್ತೀಚೆಗೆ ಗದಗದಲ್ಲಿ ಇನ್ನೇನು ಉದುರಿ ಬೀಳುವ, ಎಲ್ಲಾ ಕಂಬಿಗಳೂ ಕಳಚಿ ಬಿದ್ದಿರುವ ಬಸ್ಸನ್ನು ಜನ ಹತ್ತಿ ಕಂಗಾಲಾದ ದೃಶ್ಯ ಕಣ್ಣಿಗೆ ಗೋಚರಿಸಿತ್ತು. ಇದು ಎಷ್ಟು ದಿನ ಹೀಗೆ ಸಾಗುತ್ತದೋ! ಜನ ಮರುಳೋ ಜಾತ್ರೆ ಮರುಳೋ!!

–ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

ಚಿರತೆ ಹಾವಳಿ ತಪ್ಪಿಸಿ

ಮಾನ್ಯರೇ

ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲೂಕು ಹಾಗೂ ಹೋಬಳಿಯಲ್ಲಿರುವ ಮಲುಗನಹಳ್ಳಿ ಗ್ರಾಮದಲ್ಲಿ ಕಳೆದ ಮೂರು ತಿಂಗಳಿಂದ ಚಿರತೆ ಹಾವಳಿ ಜಾಸ್ತಿಯಾಗಿದೆ. ಇಲ್ಲಿಯ ವರೆಗೂ 5ರಿಂದ 6 ನಾಯಿಗಳನ್ನು ತಿಂದು ಹಾಕಿದೆ. ಈ ಗ್ರಾಮದ ರೈತರು ವ್ಯವಸಾಯ ಮಾಡುವುದಕ್ಕೆ ಜಮೀನಿಗೆ ಹೋಗಲು ಭಯಪಡುವಂತಾಗಿದೆ. ಮುಂದೆ ದೊಡ್ಡ ಅನಾಹುತ ಆಗುವುದಕ್ಕಿಂತ ಮುಂಚೆ ಅರಣ್ಯ ಅಧಿಕಾರಿಗಳು ಹಾಗೂ ಶಾಸಕರು ತಕ್ಷಣ ಕ್ರಮವಹಿಸಬೇಕಾಗಿ ಮನವಿ.

–ಮಲುಗನಹಳ್ಳಿ ಗ್ರಾಮಸ್ಥರು, ಸಾಲಿಗ್ರಾಮ ತಾ.


ಹದಗೆಟ್ಟಿರುವ ನಗರ ಬಸ್ ನಿಲ್ದಾಣದ ರಸ್ತೆ



ಮಾನ್ಯರೇ,

ಮೈಸೂರು ಸಿಟಿ ಬಸ್ ನಿಲ್ದಾಣದ ರಸ್ತೆಯು ತುಂಬಾ ಹದಗೆಟ್ಟಿದ್ದು, ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ರಸ್ತೆ ಸರಿಪಡಿಸಿ ಎಂದು ಎಷ್ಟೇ ಪತ್ರ ಬರೆದರೂ ಇದರ ಬಗ್ಗೆ ಗಮನಹರಿಸುತ್ತಿಲ್ಲ. ಹಾಗೆ ಯಾವಾಗಲೋ ಒಂದು ಸರಿ ಪ್ರಧಾನಮಂತ್ರಿ ಹಾಗೂ ಮುಖ್ಯಮಂತ್ರಿ ಬಂದರೆ ಸರಿಯಾಗಿರುವ ರಸ್ತೆಯನ್ನು ಮತ್ತೆ ಮತ್ತೆ ಸರಿ ಮಾಡುತ್ತಾರೆ. ಆದರೆ ಪ್ರತಿದಿನ ಈ ಬಸ್ ನಿಲ್ದಾಣದಲ್ಲಿ ಮಹಿಳೆಯರು, ವಯಸ್ಸಾದವರು, ರೋಗಿಗಳು ಮತ್ತು ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ಜನರು ಪ್ರಯಾಣಿಸುತ್ತಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ರಸ್ತೆಯನ್ನು ಸರಿಪಡಿಸಬೇಕೆಂದು ಮನವಿ.

–ಅನಿಲ್, ಪತ್ರಿಕೋದ್ಯಮ ವಿದ್ಯಾರ್ಥಿ, ಮಹಾರಾಜ ಕಾಲೇಜು ಮೈಸೂರು.



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಸಿಎಂ ಸಿದ್ದರಾಮಯ್ಯನವರಿಗೆ ಇದು ನುಂಗಲಾರದ ತುತ್ತು

ಭಾಗ್ಯಜ್ಯೋತಿ ಆರದಿರಲು ಒಂದು ಸಲಹೆ



ಸಿದ್ದರಾಮಯ್ಯ





ಪ್ರತಾಪ್ ಸಿಂಹ

ರಾಜಕಾರಣಿಗಳು ಸಾಮಾನ್ಯವಾಗಿ ಮಾತನಾಡಿದ ಮೇಲೆ ಯೋಚನೆ ಮಾಡುವವರು; ಅದೂ ವಿಶೇಷವಾಗಿ ನಮ್ಮ ದೇಶದಲ್ಲಿ. ಇದಕ್ಕೆ ನೆಹರೂ ಅವರಾಗಲಿ, ಮಹಾತ್ಮ ಗಾಂಧಿಯವರಾಗಲಿ ಹೊರತಲ್ಲ. ನಿದರ್ಶನಗಳು ಬೇಕಾದಷ್ಟು ಸಿಗುತ್ತವೆ.

ಚುನಾವಣೆಯಲ್ಲಿ ಗೆಲ್ಲುವ ಸಲುವಾಗಿ ರಾಜಕಾರಣಿಗಳು ಏನೇನೋ ಹತ್ತಾರು ಭರವಸೆಗಳನ್ನು ಕೊಡುತ್ತಾರೆ. ಅದನ್ನು ನಮ್ಮ ಪಾಪದ ಜನ, ಬಡವರಿಂದ ಹಿಡಿದು ವಿದ್ಯಾವಂತರೆನಿಸಿಕೊಂಡವರವರೆಗೂ, ನಂಬಿ ಈ ರಾಜಕಾರಣಿಗಳು ನೀಡಿದಂತಹ ಪೊಳ್ಳು ಭರವಸೆಗಳ ಖೆಡ್ಡಾಕ್ಕೆ ಬೀಳುತ್ತಾರೆ. ಚುನಾವಣೆಯಲ್ಲಿ ಗೆದ್ದ ನಂತರ ಈ ಪಾಪದ ಜನರನ್ನು ಖೆಡ್ಡಾದಿಂದ ಮೇಲೆ ತ್ತಲು ಈ ಗೆದ್ದ ರಾಜಕಾರಣಿಗಳು ಹರಸಾಹಸಪಡಬೇಕಾಗಿದೆ. ಆ ಸ್ಥಿತಿಯಲ್ಲಿದ್ದಾರೆ ಈಗ **ನಮ್ಮ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ.**

ಚುನಾವಣೆಯ ವೇಳೆ ವೀರಾವೇಶದಲ್ಲಿ ಘೋಷಿಸಿದ ಐದು ಗ್ಯಾರಂಟಿಗಳನ್ನು ಪೂರೈಸಲು ಈಗ ಸಿದ್ದರಾಮಯ್ಯನವರು ಹರಸಾಹಸಪಡುತ್ತಿದ್ದಾರೆ. ಅಷ್ಟಕ್ಕೂ 13 ಬಾರಿ ಬಜೆಟ್ ಮಂಡಿಸಿದ ಏಕೈಕ ವಿತ್ತ ಮಂತ್ರಿ ಎಂಬ ಹೆಗ್ಗಳಿಕೆಯೊಂದಿಗೆ ಬಹುಪರಾಕ್ ಹೇಳಿಸಿಕೊಂಡ ಸಿದ್ದರಾಮಯ್ಯನವರು ಈ ರೀತಿ ಪರಿತಪಿಸುತ್ತಿರುವುದು ಏಕೆ ಎಂಬುದು ನಮಗೆ ಅರ್ಥವಾಗುತ್ತಿಲ್ಲ. ಹಾಗಾದರೆ ಈ ಮೊದಲು ಅವರು ಕೊಟ್ಟ ಬಜೆಟ್‌ನಲ್ಲಿ ರಾಜ್ಯದ ಆರ್ಥಿಕ ಬೆಳವಣಿಗೆಯ ಅಂಶವಿತ್ತೆ ಎಂದು ಈಗ ಯೋಚಿಸಬೇಕಾದ ಕಾಲ ಬಂದಿದೆ. ಇವರ ಪರದಾಟವನ್ನು ನೋಡಿದಾಗ ಚಿನ್ನದ ಮೊಟ್ಟೆ ಇಡುವ ಕೋಳಿಯನ್ನು ಕೊಂದ ದುರಾಸೆಯುಳ್ಳ ಮನುಷ್ಯನ ಕಥೆ ನೆನಪಾಗುತ್ತದೆ. ಆದರೆ, ಇದು ಅಧಿಕಾರದ ದುರಾಸೆ.

ಕೂತು ಉಂಬುವವನಿಗೆ ಕುಡಿಕೆ ಅನ್ನ ಸಾಲದು. ಬಡವರನ್ನು ಬಡತನದಿಂದ ಪಾರು ಮಾಡಲು ಅಮೇರಿಕಾದಲ್ಲಿ Affirmative Action and Food Coupon ಎಂಬ ಕಾರ್ಯಯೋಜನೆ ಒಂದಿದೆ. ಜೊತೆಗೆ, ನಮ್ಮಲ್ಲಿ ಮೊದಲಿನಿಂದಲೂ ಆಚರಣೆಯಲ್ಲಿರುವ ಸಬ್ಸಿಡಿ ಅಡಿ ಕಡಿಮೆ ಬೆಲೆಗೆ ನೀಡುವಂತಹ ಕೆಲವು ನಾಗರಿಕ ಬೇಡಿಕೆಗಳಿವೆ. ಇನ್ನು ಮುಂದೆ ಹೋಗಿ ಈ ಎಲ್ಲಾ ಜಂಜಾಟ, ಜಟಿಲವಾದ ತೊಡಕುಗಳೇ ಬೇಡವೆಂದು ಈ ಯೋಜನೆಯನ್ನು ಸ್ವಲ್ಪ ಬದಲಾಯಿಸಿ ಫಲಾನುಭವಿಗಳಿಗೇ ಹಣವನ್ನು ಕೊಡುವುದನ್ನು ನಾವು ನೋಡಿದ್ದೇವೆ.

ನಾವೇಕೆ ಅದನ್ನು ಈ ಸಂದರ್ಭದಲ್ಲಿ ಅನುಸರಿಸಬಾರದು? ಈ ವಿಚಾರವಾಗಿಯೂ ಅರ್ಥಶಾಸ್ತ್ರ ಪ್ರವೀಣರನ್ನು ಕೇಳುವುದು ಒಳ್ಳೆಯದಲ್ಲವೆ? ಇದರ ಬಗ್ಗೆ ಇತ್ತೀಚೆಗೆ **ಬಿಜೆಪಿ ಸಂಸದ ಪ್ರತಾಪ್ ಸಿಂಹ** ಮಾತನಾಡಿ, ಸಿದ್ದರಾಮಯ್ಯನವರಿಗೆ ಒಂದು ಸಲಹೆ ಕೊಟ್ಟಿದ್ದಾರೆ. "ಕೇಂದ್ರ ಹಾಗೂ ರಾಜ್ಯಗಳಿಂದ ಅಕ್ಕಿ ಸಿಗಲಿಲ್ಲವೆಂದರೆ ಮುಕ್ತ ಮಾರುಕಟ್ಟೆಯಲ್ಲಿ ಅಕ್ಕಿ ಖರೀದಿಸಿ ನೀವು ಕೊಟ್ಟ ಚುನಾವಣಾ ಭರವಸೆಯನ್ನು ಕಾರ್ಯರೂಪಕ್ಕೆ ತನ್ನಿ. ಇಲ್ಲವೇ ಅಕ್ಕಿಗೆ ತಗಲುವ ಹಣವನ್ನು ಜನರ ಬ್ಯಾಂಕ್ ಅಕೌಂಟ್‌ಗೆ ಹಾಕಿ" ಎಂದು ಹೇಳಿದ್ದಾರೆ.

ಸರಿ, ಆಗ 'ಅನ್ನಭಾಗ್ಯ'ದ ಬದಲು 'ಹಣದ ಭಾಗ್ಯ' ಕೊಟ್ಟ ಹಾಗೆ ಆಗುತ್ತದೆ. ಅಂದ ಹಾಗೆ ಹಣ ಕೊಟ್ಟರೆ ಅದು ಅನ್ನದ ಭಾಗ್ಯಕ್ಕೆ ವಿನಿಯೋಗ ಆಗುತ್ತದೋ ಅಥವಾ ಬೇರೆ ಯಾವುದಾದರೂ ಭಾಗ್ಯಕ್ಕೆ ವ್ಯಯವಾಗಬಹುದೋ ಎಂಬುದನ್ನು ಯೋಚಿಸಬೇಕಾಗುತ್ತದೆ! ಅಂದ ಹಾಗೆ ಮುಕ್ತ ಮಾರುಕಟ್ಟೆಯಲ್ಲಿ ಎಲ್ಲರಿಗೂ ಸಾಕಾಗುವಷ್ಟು ಅಕ್ಕಿ ಲಭ್ಯವಿದೆ. ಅದನ್ನೇಕೆ ಖರೀದಿಸಬಾರದು?

ಬಿಜೆಪಿಯವರು ಹೇಳುತ್ತಾರೆ, ಅದಾಗಲೇ ಮೋದಿಯವರ ಕೇಂದ್ರ ಸರ್ಕಾರ ಈಗಾಗಲೇ ಐದು ಕೆಜಿ ಅಕ್ಕಿ ಭಾಗ್ಯವನ್ನು ಬಡಜನರಿಗೆ, ಅದೂ ಬಿಪಿಎಲ್ ಕಾರ್ಡ್‌ದಾರರಿಗೆ ಕೊಡುತ್ತಿದೆ. ಕಾಂಗ್ರೆಸ್ 10 ಕೆಜಿ ಅಕ್ಕಿ ಭರವಸೆ ಕೊಟ್ಟಿದೆ. ಅದರಲ್ಲಿ ಈ ಐದು ಕೆಜಿ ಸೇರಲ್ಲ. ಕೇಂದ್ರದ ಐದು ಕೆಜಿ ಜೊತೆಗೆ ಇನ್ನು ಹತ್ತು ಕೆಜಿ ಕೊಡಲಿ ಎಂಬುದು ರಾಜ್ಯ ಬಿಜೆಪಿಯ ಆಗ್ರಹ.

2023ರ ರಾಜ್ಯ ವಿಧಾನಸಭಾ ಚುನಾವಣೆ, ಇಡೀ ರಾಷ್ಟ್ರದಲ್ಲಿ ಸಂಚಲನ ಮೂಡಿಸಿದೆ. ಇನ್ನು ಮುಂದೆ ಎಲ್ಲಾ ಪಕ್ಷಗಳು ಕಾಂಗ್ರೆಸ್‌ನ ಈ ರೀತಿಯ ಭರವಸೆ, ಗ್ಯಾರಂಟಿಗಳನ್ನು ತಮ್ಮ ತಮ್ಮ ಚುನಾವಣಾ ಪ್ರಣಾಳಿಕೆಯನ್ನಾಗಿಸಿ ಪೈಪೋಟಿಯಂತೆ, ಚುನಾವಣಾ ಕಣಕ್ಕೆ ಇಳಿಯುತ್ತಾರೆ. "ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡು" ಎಂಬ ಮಾತಿನಂತೆ ಚುನಾವಣೆ ಗೆಲ್ಲಲು ಪ್ರಯತ್ನಿಸುತ್ತಾರೆ. ಆಗ ಯಾವ ರಾಜಕೀಯ ಪಕ್ಷದ ಭರವಸೆ ಮತದಾರನ ಕಿಸೆ ಹಾಗೂ ಹೊಟ್ಟೆಯನ್ನು ಹೆಚ್ಚು ತುಂಬಿಸುತ್ತದೆ, ಯಾರನ್ನು ನಂಬಬಹುದು ಎಂದು ಮತದಾರ ಯೋಚಿಸಬೇಕಾಗುತ್ತದೆ.

ಆದ್ದರಿಂದ **ನಾವು ಮತದಾರರು 2023ರ ಚುನಾವಣೆಯಿಂದ ಪಾಠ ಕಲಿತು ಈ ರೀತಿಯ ಭರವಸೆಗಳಿಗೆ ಹೆಚ್ಚು ಒತ್ತು ಕೊಡದೆ ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ಒತ್ತು ಕೊಡುವ ಪಕ್ಷಕ್ಕೆ ಮತ ಹಾಕಬೇಕಾಗುತ್ತದೆ.** ರಾಜ್ಯದ ಉದ್ಯಮಿಗಳು ಮತ್ತು ರೈತರ ಶ್ರಮದಿಂದ ರಾಜ್ಯ ಆರ್ಥಿಕವಾಗಿ ಅಭಿವೃದ್ಧಿಗೊಂಡರೆ ಕೂಲಿ ಕಾರ್ಮಿಕರ, ಬಿಪಿಎಲ್ ಕಾರ್ಡುದಾರರ ಕೂಲಿ ಹೆಚ್ಚಾಗುತ್ತದೆ. ರಾಜ್ಯದ ಬೊಕ್ಕಸ ತುಂಬಿದರೆ ಬಡವರಿಗೆ, ಮಧ್ಯಮ ವರ್ಗದವರ ಈ ಭರವಸೆಗಳನ್ನು ಸರ್ಕಾರವೇ ಸುಲಭವಾಗಿ ಈಡೇರಿಸಬಹುದಲ್ಲವೆ?


ಈಗ ಈ ಅಕ್ಕಿಯ ಸಮಸ್ಯೆಗೆ ಬರೋಣ. ಭತ್ತದಿಂದ ಅಕ್ಕಿ. ಈ ಅಕ್ಕಿ ನಮ್ಮ ರಾಜ್ಯದ ಒಂದು ಬಹುಮುಖ್ಯವಾದ ಆಹಾರ ಧಾನ್ಯ. ಜನರು ಹೆಚ್ಚಾಗಿ ಅನ್ನವನ್ನೇ ಊಟ ಮಾಡುತ್ತಾರೆ. ನಂತರ ರಾಗಿ, ಗೋಧಿ ಮೊದಲಾಗಿ. ರಾಜ್ಯದಲ್ಲಿ 2022ರ ಮಾಹಿತಿ ಪ್ರಕಾರ ವ್ಯವಸಾಯ ಅರ್ಹವಾದ 2,81,299.5 ಹೆಕ್ಟೇರ್ ನೀರಾವರಿ ಪ್ರದೇಶದಲ್ಲಿ ನಾವು ಕೇವಲ ಶೇ. 28.2 ರಷ್ಟು ಭೂಮಿಯನ್ನು ಮಾತ್ರ ಭತ್ತ ಬೆಳೆಯಲು ಉಪಯೋಗಿಸುತ್ತಿದ್ದೇವೆ.

ರಾಜ್ಯದ ಒಟ್ಟು 31 ಜಿಲ್ಲೆಗಳಲ್ಲಿ ಭತ್ತ ಬೆಳೆಯಲಾಗುತ್ತಿದೆ. ಅದರಲ್ಲಿ ನಾಲ್ಕು ಲಕ್ಷ ಟನ್‌ಗಿಂತ ಅಧಿಕ ಭತ್ತ ಬೆಳೆಯುವ ಜಿಲ್ಲೆಗಳ ಸಂಖ್ಯೆ ಕೇವಲ ಮೂರಾದರೆ, ಬೇರೆ ಇತರೆ ಜಿಲ್ಲೆಗಳಲ್ಲಿ ಮೂರು ಲಕ್ಷ, ಎರಡು ಲಕ್ಷ, ಒಂದು ಲಕ್ಷ ಟನ್ ಭತ್ತ ಬೆಳೆಯಲಾಗುತ್ತಿದೆ. ಅತೀ ಕಡಿಮೆ ಭತ್ತ ಬೆಳೆಯುವ ಜಿಲ್ಲೆ ಅಂದರೆ ಬಾಗಲಕೋಟೆ–210 ಟನ್. **ಹೀಗಿರಬೇಕಾದರೆ ನಮ್ಮ ಸರಕಾರವೇಕೆ ಭತ್ತವನ್ನು ಇನ್ನೂ ಅಧಿಕ ಭೂಮಿಯಲ್ಲಿ ಬೆಳೆಯಲು ಉತ್ತೇಜನ ನೀಡಬಾರದು?** ಯಾವುದೇ ಸರಕಾರ ಅಧಿಕಾರಕ್ಕೆ ಬರಲಿ, ಬೇರೆ ಯಾವ ಭಾಗ್ಯವಿಲ್ಲದಿದ್ದರೂ ಪರವಾಗಿಲ್ಲ, ನಿಭಾಯಿಸಬಹುದು. ಆದರೆ 'ಅನ್ನಭಾಗ್ಯ'ವನ್ನು ಕೊಡಲೇಬೇಕು.

ನಾನು ತಿಳಿದ ಹಾಗೆ ಅನೇಕ ಜಿಲ್ಲೆಗಳಲ್ಲಿ ಭತ್ತ ಬೆಳೆಯುವ ಭೂಮಿಯಲ್ಲಿ ಈಗ ಶುಂಠಿ, ಕಬ್ಬು, ತಂಬಾಕು, ಜೋಳ ಮೊದಲಾಗಿ ಬೇರೆ ಹೆಚ್ಚು ಲಾಭದಾಯಕವೂ, ಕಡಿಮೆ ಖರ್ಚಿನ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಿ ಹೆಚ್ಚು ಭತ್ತ ಬೆಳೆಯಲು ತತ್‌ಕ್ಷಣದಿಂದಲೇ ಸಿದ್ದರಾಮಯ್ಯ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

email: voice @starofmysore.com

15 ಐಪಿಎಸ್ ಅಧಿಕಾರಿಗಳ ವರ್ಗಾವಣೆ, 75 ಕೆಎಎಸ್ ಅಧಿಕಾರಿಗಳಿಗೆ ಬಡ್ತಿ



ಡಾ. ಬೋರಲಿಂಗಯ್ಯ ದಕ್ಷಿಣ ವಲಯ ಐಜಿಪಿ

ಬೆಂಗಳೂರು, ಜೂ. 20– ರಾಜ್ಯ ಸರ್ಕಾರ 15 ಐಪಿಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ, 75 ಕೆಎಎಸ್ ಅಧಿಕಾರಿಗಳಿಗೆ ಕಿರಿಯ ಶ್ರೇಣಿಯಿಂದ ಹಿರಿಯ ಶ್ರೇಣಿಗೆ ಬಡ್ತಿ ನೀಡಿ ಆದೇಶಿಸಿದೆ.

ದಕ್ಷಿಣ ವಲಯ ಐಜಿಪಿಯಾಗಿ ಡಾ. ಬೋರಲಿಂಗಯ್ಯ ಅವರನ್ನು ವರ್ಗಾವಣೆ ಮಾಡಿದ್ದು, ಆ ಸ್ಥಳದಲ್ಲಿದ್ದ ಪ್ರವೀಣ್ ಮಧುಕರ್ ಪವಾರ್ ಅವರನ್ನು ಸಿಐಡಿ ಐಜಿಪಿಯಾಗಿ ವರ್ಗಾಯಿಸಿದೆ. ಸಿ.ಬಿ. ರಿಷ್ಯಂತ್ ಅವರನ್ನು ದಕ್ಷಿಣ ಕನ್ನಡ ಎಸ್ಪಿಯಾಗಿ ವರ್ಗಾವಣೆ ಮಾಡಲಾಗಿದೆ.

ರಾಜ್ಯದ 75 ಕೆಎಎಸ್ ಅಧಿಕಾರಿಗಳಿಗೆ ಕಿರಿಯ ಶ್ರೇಣಿಯಿಂದ ಹಿರಿಯ ಶ್ರೇಣಿಗೆ ಬಡ್ತಿ ನೀಡಿರುವ ಸರ್ಕಾರ ಬಹುತೇಕ ಅಧಿಕಾರಿಗಳನ್ನು ಹಾಲಿ ಇರುವ ಹುದ್ದೆಯಲ್ಲೇ ಮುಂದುವರೆಸಿದೆ. ಈ ಅಧಿಕಾರಿಗಳು ಹಾಲಿ ಹುದ್ದೆಯಲ್ಲೇ ಮುಂದುವರೆದಿದ್ದರೂ, ಬಡ್ತಿ ನೀಡಿರುವುದರಿಂದ ವೇತನ ಹೆಚ್ಚಾಗಲಿದೆ.

ಕೇಂದ್ರದ ವಿರುದ್ಧ ಪ್ರತಿಭಟನೆಗಿಳಿದಿರುವುದು ಕಾಂಗ್ರೆಸ್ ವೈಫಲ್ಯ, ದಿವಾಳಿತನಕ್ಕೆ ಸಾಕ್ಷಿ

ಕಾಂಗ್ರೆಸ್ ವಿರುದ್ಧ ಮೈಲ್ಯಾಕ್ ಮಾಜಿ ಅಧ್ಯಕ್ಷ ರಘು ಕೌಟಿಲ್ಯ ಲೇವಡಿ



ಮೈಸೂರು, ಜೂ.20–ತನ್ನ ವೈಫಲ್ಯ ಮುಚ್ಚಿಕೊಳ್ಳಲು ಅಕ್ಕಿ ವಿಚಾರದಲ್ಲಿ ಕೇಂದ್ರ ಸರ್ಕಾರದತ್ತ ಬೊಟ್ಟು ಮಾಡಿ ಪ್ರತಿಭಟನೆಗಿಳಿದಿರುವುದು ಕಾಂಗ್ರೆಸ್‌ನ ನೈತಿಕ ದಿವಾಳಿತನಕ್ಕೆ ಸಾಕ್ಷಿಯಾಗಿದೆ ಎಂದು ಬಿಜೆಪಿ ಮುಖಂಡರೂ ಆದ ಮೈಲ್ಯಾಕ್ ಮಾಜಿ ಅಧ್ಯಕ್ಷ ರಘು ಕೌಟಿಲ್ಯ ಟೀಕಿಸಿದ್ದಾರೆ.

ಇಡೀ ದೇಶಕ್ಕೇ ಪ್ರಧಾನಿ ಮೋದಿ ಸರ್ಕಾರ ನೀಡುತ್ತಿರುವ 5 ಕೆ.ಜಿ. ಅಕ್ಕಿ ಕರ್ನಾಟಕದ ಜನರಿಗೂ ತಲುಪುತ್ತಲೇ ಇದೆ. ಇದರೊಟ್ಟಿಗೆ ಕಾಂಗ್ರೆಸ್ ಗ್ಯಾರಂಟಿ 10 ಕೆ.ಜಿ. ಸೇರಿಸಿ, ರಾಜ್ಯ ಸರ್ಕಾರ ಒಟ್ಟು 15 ಕೆ.ಜಿ. ಅಕ್ಕಿ ಕೊಟ್ಟು ನ್ಯಾಯ ಒದಗಿಸಬೇಕಾಗಿದೆ. ಆದರೆ, ಚುನಾವಣೆಯಲ್ಲಿ ಗೆದ್ದ ನಂತರ 'ದಡ ಸೇರಿದ ಮೇಲೆ ಅಂಬಿಗನ ಹಂಗ್ಯಾಕೆ' ಎಂಬಂತೆ ಮತದಾರರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳದ ಕಾಂಗ್ರೆಸ್ ಕೇಂದ್ರ ಬಿಜೆಪಿ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದೆ ಎಂದಿದ್ದಾರೆ. ಸಿದ್ಧತೆ, ಬದ್ಧತೆ ಇಲ್ಲದ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಕೇಂದ್ರ ಸರ್ಕಾರದ ನೆರವಿನಿಂದ ಅಕ್ಕಿ ಕೊಡುವುದಾಗಿ ತಿಳಿಸಿತ್ತೆ ಎಂದು ಪ್ರಶ್ನಿಸಿರುವ ಅವರು, ಅಪಪ್ರಚಾರ ಹಾಗೂ ಸುಳ್ಳುಗಳು ಕಾಂಗ್ರೆಸ್ ಸರ್ಕಾರವನ್ನು ರಕ್ಷಿಸಲು ಸಾಧ್ಯವಿಲ್ಲ ಎಂದಿದ್ದಾರೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದಾಗ ಕೇಂದ್ರದ 5 ಕೆ.ಜಿ. ಜೊತೆಗೆ 2 ಕೆ.ಜಿ. ಸೇರಿಸಿ ಒಟ್ಟು 7 ಕೆಜಿ. ಅಕ್ಕಿ ಉಚಿತವಾಗಿ ನೀಡಲಾಗುತ್ತಿತ್ತು. ಆದರ ಜೊತೆಗೆ ಕೇವಲ 3 ಕೆ.ಜಿ. ಹೆಚ್ಚುವರಿಯಾಗಿ ಅಕ್ಕಿ ಕೊಡಲು ನಿಸ್ಸಹಾಯಕವಾಗಿರುವ ಕಾಂಗ್ರೆಸ್ ಸರ್ಕಾರದ ಸ್ಥಿತಿ ಕೊಟ್ಟ ಕುದುರೆ ಏರಲಾಗದಂತಹ ಪರಿಸ್ಥಿತಿಯಾಗಿದೆ. ನ್ಯಾಯವಾಗಿ ಹೇಳಬೇಕೆಂದರೆ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದ ಪ್ರಕಾರ ಅನ್ನಭಾಗ್ಯ ಯೋಜನೆಯಡಿ 17 ಕೆ.ಜಿ (ಈಗಾಗಲೇ ನೀಡುತ್ತಿರುವ 7 ಕೆಜಿ ಹಾಗೂ ಈಗ ಗ್ಯಾರಂಟಿ ಅಡಿ ಘೋಷಿಸಿರುವ 10 ಕೆಜಿ) ಉಚಿತ ಅಕ್ಕಿಯನ್ನು ಜನರಿಗೆ ವಿತರಿಸಬೇಕಾಗಿದೆ. ಇಲ್ಲವಾದಲ್ಲಿ ನೋಡಿ, ಕೇಂದ್ರದ್ದು 5 ನಮ್ಮದು 5 ಎಂದು ವಿತರಿಸಿ ಕಾಂಗ್ರೆಸ್ ತನ್ನ ನೈತಿಕತೆ ಹಾಗೂ ಆತ್ಮಗೌರವ ಉಳಿಸಿಕೊಳ್ಳಲಿ ಎಂದು ರಘು ಕೌಟಿಲ್ಯ ಹೇಳಿದ್ದಾರೆ.

ವಿಂಬಲ್ಡನ್ ಚಾಂಪಿಯನ್‌ಷಿಪ್: ವಿಜೇತರಿಗೆ ರೂ. 24 ಕೋಟಿ ಬಹುಮಾನ

ಲಂಡನ್ : ವಿಂಬಲ್ಡನ್ ಚಾಂಪಿಯನ್ ಗಳಿಗೆ ನೀಡುವ ಒಟ್ಟು ಬಹುಮಾನದ ಮೊತ್ತವನ್ನು ಶೇ 11ರಷ್ಟು ಹೆಚ್ಚಳ ಮಾಡಲಾಗಿದೆ. ಪ್ರಸಕ್ತ ವರ್ಷದಿಂದ ಪುರುಷ ಮತ್ತು ಮಹಿಳಾ ಸಿಂಗಲ್ಸ್‌ನ ವಿಜೇತರು ತಲಾ 3 ಮಿಲಿಯನ್ ಡಾಲರ್ (ಅಂದಾಜು ರೂ. 24 ಕೋಟಿ) ಪಡೆಯಲಿದ್ದಾರೆ.

ವಿಂಬಲ್ಡನ್ ಚಾಂಪಿಯನ್‌ಷಿಪ್‌ನ ಪ್ರಶಸ್ತಿಗಳ ಒಟ್ಟು ಮೊತ್ತವನ್ನು 56.5 ಮಿಲಿಯನ್ ಡಾಲರ್‌ಗೆ (ಅಂದಾಜು ರೂ. 463 ಕೋಟಿ) ಹೆಚ್ಚಿಸಲಾಗಿದೆ. ಕೋವಿಡ್ ಸಾಂಕ್ರಾಮಿಕದ ಹಿಂದಿನ ವರ್ಷ 2019ಕ್ಕೆ ಹೋಲಿಕೆ ಮಾಡಿದರೆ ಶೇ 17.1ರಷ್ಟು ಏರಿಕೆ ಮಾಡಲಾಗಿದೆ ಎಂದು ಆಲ್ ಇಂಗ್ಲೆಂಡ್ ಕ್ಲಬ್ ಹೇಳಿದೆ. ಆರಂಭಿಕ ಸುತ್ತಿನ ಆಟಗಾರರನ್ನೂ ಪ್ರೋತ್ಸಾಹಿಸಲು ಆದ್ಯತೆ ನೀಡಲಾಗಿದೆ ಮೊದಲ ಸುತ್ತಿನಲ್ಲಿ ಸೋತವರು 69,500 ಡಾಲರ್ (ರೂ. 56.98 ಲಕ್ಷ) ಪಡೆಯಲಿದ್ದಾರೆ. ಕಳೆದ ವರ್ಷಕ್ಕಿಂತ ಶೇ 10ರಷ್ಟು ಹೆಚ್ಚಿಸಲಾಗಿದೆ. ಈ ಬಾರಿ ವಿಂಬಲ್ಡನ್ ಟೂರ್ನಿ ಜುಲೈ 3ರಿಂದ 16ರವರೆಗೆ ನಡೆಯಲಿದೆ.

ಅಪ್ರಾಪ್ತೆಯ ಮೇಲೆ ಅತ್ಯಾಚಾರ: ಅಪರಾಧಿಗೆ 135 ವರ್ಷ ಜೈಲು ಶಿಕ್ಷೆ!

ತಿರುವನಂತಪುರಂ: ಅಪ್ರಾಪ್ತೆಯ ಮೇಲೆ ಅತ್ಯಾಚಾರ ವೆಸಗಿದ್ದ ಅಪರಾಧಿಗೆ ಕೇರಳ ಕೋರ್ಟ್ 135 ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಈ ಅಪರಾಧಿ ತನ್ನ ಸೋದರ ಸಂಬಂಧಿಯ ಮೇಲೆ 2 ವರ್ಷಗಳ ಹಿಂದೆ ಅತ್ಯಾಚಾರ ವೆಸಗಿದ್ದ. ಫಾಸ್ಟ್ ಟ್ರ್ಯಾಕ್ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಸಜಿ ಕುಮಾರ್ ತೀರ್ಪು ಪ್ರಕಟಿಸಿದ್ದು, ಪೋಕ್ಸೋ ಕಾಯ್ದೆ, ಐಪಿಸಿ, ಐಟಿ ಕಾಯ್ದೆ, ಬಾಲಾಪರಾಧಿ ನ್ಯಾಯಾಂಗ ಕಾಯ್ದೆ ಸೇರಿದಂತೆ ಹಲವು ಕಾಯ್ದೆಗಳ ಅಡಿಯಲ್ಲಿ ಅಪರಾಧಿಗೆ 135 ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಿದ್ದಾರೆ. ಈಗ ಆತ ಜೈಲಿನಲ್ಲೇ ಇರುವುದರಿಂದ ಹಾಗೂ ಆ ಪೈಕಿ ಗರಿಷ್ಠವಾದ್ದು 20 ವರ್ಷವಾಗಿದ್ದರಿಂದ ಅಪರಾಧಿ 20 ವರ್ಷಗಳ ಕಾಲ ಜೈಲಿನಲ್ಲಿರಲಿದ್ದಾನೆ.

ಅಪರಾಧಿಗೆ 5.1 ಲಕ್ಷ ರೂಪಾಯಿ ದಂಡ ವಿಧಿಸಿದ್ದು, ಸಂತ್ರಸ್ತೆಗೆ 4 ಲಕ್ಷ ರೂಪಾಯಿ ಪರಿಹಾರ ನೀಡಬೇಕು ಎಂದು ಕೋರ್ಟ್ ಸೂಚಿಸಿದೆ. ಪ್ರಾಸಿಕ್ಯೂಷನ್ ಪ್ರಕಾರ, ಅಪರಾಧಿ ಸಂತ್ರಸ್ತೆಯ ತಂದೆಯ ಹಿರಿಯ ಸಹೋದರನ ಮಗನಾಗಿದ್ದು, ಅವಳನ್ನು ಶಾಲೆಗೆ ಕರೆದೊಯ್ದು ತನ್ನ ಅಜ್ಜಿಯ ಮನೆಗೆ ಮರಳಿ ಕರೆತರುತ್ತಿದ್ದನು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಪಡಿತರ ಅಕ್ಕಿ ಜತೆ ಸಿರಿಧಾನ್ಯ ನೀಡಿ: ವಿಕ್ರಂ ಅಯ್ಯಂಗಾರ್ ಒತ್ತಾಯ

ಮೈಸೂರು, ಜೂ.20– ಕಾಂಗ್ರೆಸ್ ಸರ್ಕಾರ ಬಿಪಿಎಲ್ ಪಡಿತರ ಚೀಟಿದಾರರಿಗೆ 10 ಕೆ.ಜಿ. ಅಕ್ಕಿ ವಿತರಿಸುವುದಾಗಿ ಹೇಳಿದ್ದು, ಇದರಲ್ಲಿ 5 ಕೆ.ಜಿ. ಅಕ್ಕಿ ಹಾಗೂ 5 ಕೆ.ಜಿ. ಸಿರಿಧಾನ್ಯಗಳನ್ನು ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್ ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ, ಕೃಷಿ ಸಚಿವ, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರಿಗೆ ಮನವಿ ಸಲ್ಲಿಸಿರುವ ಅವರು, ರಾಜ್ಯದಲ್ಲಿ ಹಲವರು ಅಪೌಷ್ಟಿಕತೆಯಿಂದ ಬಳಲುತ್ತಿದ್ದು, ಅಕ್ಕಿ ಜತೆಗೆ ಸಿರಿಧಾನ್ಯಗಳಾದ ನವಣೆ, ಅರ್ಕಾ, ಸಜ್ಜೆ, ಕೊರಗಲು ಹಾಗೂ ಮೆಕ್ಕೆಜೋಳವನ್ನು ವಿತರಿಸಿದರೆ ಅನುಕೂಲವಾಗಲಿದೆ ಎಂದು ಮನವಿ ಮಾಡಿದ್ದಾರೆ.

ಸಿರಿಧಾನ್ಯ ಹಾಗೂ ಮೆಕ್ಕೆಜೋಳವನ್ನು ತಲಾ ಒಂದು ಕೆ.ಜಿಯಂತೆ ವಿತರಿಸಬೇಕು. ಇದರಿಂದ ಜನರ ಆರೋಗ್ಯ ಸುಧಾರಿಸುತ್ತದೆ. ಆಸ್ಪತ್ರೆಗಳಿಗೆ ಜನರು ಅಲೆದಾಡುವುದು ತಪ್ಪುತ್ತದೆ. ಇದರಿಂದ ಆಸ್ಪತ್ರೆಗೆ ಸರ್ಕಾರ ವಿನಿಯೋಗಿಸುವ ಹಣವೂ ಉಳಿತಾಯವಾಗಲಿದೆ. ಬಡ ರೈತರನ್ನೂ ಪ್ರೋತ್ಸಾಹಿಸಿದಂತಾಗುತ್ತದೆ ಎಂದು ಅವರು ಸಲಹೆ ನೀಡಿದ್ದಾರೆ.

ಹುಣಸೂರಿನಲ್ಲಿ ಕುಡಿತ ಬಿಡಿಸುವ ಉಚಿತ ಶಿಬಿರ

ಮೈಸೂರು, ಜೂ.20–ಶ್ರೀ ಸುತ್ತೂರು ಮಠ, ಜೆಎಸ್ಎಸ್ ಮಹಾವಿದ್ಯಾಪೀಠ ಮತ್ತು ವಿವಿಧ ಸಂಘಸಂಸ್ಥೆಗಳ ಸಹಯೋಗದೊಂದಿಗೆ 2023ರ ಜುಲೈ 1ರಿಂದ 10 ರವರೆಗೆ 15ನೆಯ ಕುಡಿತ ಬಿಡಿಸುವ ಉಚಿತ ಶಿಬಿರವನ್ನು ಹುಣಸೂರಿನ ಶ್ರೀ ಗುರುಬೂದಿಸ್ವಾಮಿಗಳವರ ಮಂಗಳ ಮಂಟಪದಲ್ಲಿ ಏರ್ಪಡಿಸಲಾಗಿದೆ. ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಈ ಸಾಮಾಜಿಕ ಸಮಸ್ಯೆಯ ಪರಿಹಾರದಲ್ಲಿ ಆಸಕ್ತಿಯುಳ್ಳವರು ಸಹ ಮದ್ಯವ್ಯಸನಿಗಳನ್ನು ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿ, ಭಾವಚಿತ್ರ, ಅಗತ್ಯ ಬಟ್ಟೆ ಹಾಗೂ ಹೊದಿಕೆಗಳೊಡನೆ ಕರೆದುಕೊಂಡು ಬಂದು ಶಿಬಿರಕ್ಕೆ ಸೇರಿಸಬಹುದಾಗಿದೆ.

ಹೆಸರನ್ನು ನೋಂದಾಯಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಚುಂಚನಹಳ್ಳಿ ಶ್ರೀಗಳು, ಡಾ.ಎಂ.ಪಿ. ಸೋಮಶೇಖರ್ ಮತ್ತು ಎಸ್. ಬಸವರಾಜು ಅವರನ್ನು ಕ್ರಮವಾಗಿ 9945494612, 9448653897 ಮತ್ತು 9886476142 ದೂರವಾಣಿಗಳಲ್ಲಿ ಸಂಪರ್ಕಿಸಲು ಕೋರಿದೆ. ಮದ್ಯಪಾನ ಸೇವನೆಯಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವುದನ್ನು ಮನಗಂಡು ಸಾರ್ವಜನಿಕರಲ್ಲಿ ಈ ಸಮಸ್ಯೆಯ ಬಗ್ಗೆ ಅರಿವು ಮೂಡಿಸಿ ಮದ್ಯ ವ್ಯಸನ ಮುಕ್ತರಾಗಿಸಲು ಹಲವಾರು ವರ್ಷಗಳಿಂದ ಶಿಬಿರ ಗಳನ್ನು ಏರ್ಪಡಿಸಿಕೊಂಡು ಬರ ಲಾಗುತ್ತಿದೆ. ಇದುವರೆಗೆ 14 ಶಿಬಿರಗಳು ನಡೆದಿವೆ.

ದೆಹಲಿಯಲ್ಲಿ ಇಂದು ಸಚಿವರಿಗೆ ನೀತಿ ಪಾಠ ದಿಢೀರ್ ಮುಂದೂಡಿಕೆ

ವೇಣುಗೋಪಾಲ್‌ಗೆ ಅನಾರೋಗ್ಯ; ಸುರ್ಜೇವಾಲ ಪ್ರವಾಸದ ಹಿನ್ನೆಲೆಯಲ್ಲಿ ಸಭೆ ರದ್ದು

ಬೆಂಗಳೂರು, ಜೂ.20(ಕೆಎಂಶಿ)– ಸಿದ್ದರಾಮಯ್ಯ ಸಂಪುಟದ ಸಚಿವರಿಗೆ ನೀತಿ ಪಾಠ ಹೇಳಲು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಾಳೆ ಕರೆದಿದ್ದ ಸಭೆ ದಿಢೀರನೇ ಮುಂದೂಡಲ್ಪಟ್ಟಿದೆ.

ಎಐಸಿಸಿಯ ರಾಜಕೀಯ ಕಾರ್ಯದರ್ಶಿ ವೇಣುಗೋಪಾಲ್ ಆರೋಗ್ಯದಲ್ಲಿ ಏರುಪೇರು ಆಗಿರುವುದು, ರಾಜ್ಯ ಉಸ್ತುವಾರಿ ಹೊಣೆ ಹೊತ್ತಿರುವ ರಂದೀಪ್ ಸುರ್ಜೇವಾಲ ಪ್ರವಾಸದಲ್ಲಿರುವುದರಿಂದ ಸಚಿವರ ಸಭೆ ಮುಂದೂಡಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಮುಂಬರುವ ಲೋಕಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಸಚಿವರು ಯಾವ ರೀತಿ ಜನರೊಂದಿಗೆ ಬೆರೆಯಬೇಕು ಮತ್ತು ಅಭಿವೃದ್ಧಿ ಕೆಲಸ ಮಾಡಬೇಕು ಎಂಬ ಬಗ್ಗೆ ಬೋಧನೆ ಮಾಡಲು ಅಧ್ಯಕ್ಷರು ಸಭೆ ಆಯೋಜಿಸಿದ್ದರು.

ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಿ ಅಧಿಕಾರಕ್ಕೆ ಬಂದ ನಾವು ಅದಕ್ಕೆ ಬಲಿಯಾಗಿ ಪಕ್ಷಕ್ಕೆ ಕಪ್ಪು ಚುಕ್ಕೆ ತರದಿರುವಂತೆ ಆಡಳಿತ ನಡೆಸಿ ಎಂಬ ನಿರ್ದೇಶನ ನೀಡುವುದೇ ಸಭೆಯ ಮುಖ್ಯ ಉದ್ದೇಶವಾಗಿತ್ತು. ದೆಹಲಿಯ ಎಐಸಿಸಿ ವಾರ್ ರೂಂನಲ್ಲಿ ನಾಳೆ ಬೆಳಗ್ಗೆ 11ಗಂಟೆಗೆ ಸಭೆ ನಿಗದಿಯಾಗಿತ್ತು. ಈ ಸಭೆಯ ಸಂಚಾಲಕರಾಗಿರುವ ವೇಣುಗೋಪಾಲ್ ಅವರ ಆರೋಗ್ಯದಲ್ಲಿ ವ್ಯತ್ಯಾಸ ಕಂಡುಬಂದ ಹಿನ್ನೆಲೆಯಲ್ಲಿ ಅಧ್ಯಕ್ಷರು ಸಭೆ ಮುಂದೂಡಿದ್ದಾರೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತ್ರ ಎಂದಿನಂತೆ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದು, ತಮ್ಮ ಭೇಟಿಯ ಸಂದರ್ಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಸೇರಿದಂತೆ ಕೆಲವು ಮಂತ್ರಿಗಳನ್ನು ಭೇಟಿ ಮಾಡಿ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚಿಸಲಿದ್ದಾರೆ.

ಅಕ್ಕಿ ಕೊಡದ ಕೇಂದ್ರದ ವಿರುದ್ಧ ಕಾಂಗ್ರೆಸ್ ಆಕ್ರೋಶ

ಕೇಂದ್ರ ಮಲತಾಯಿ ಧೋರಣೆ ತೋರುತ್ತಿದೆ ಎಂದು ದೂರಿ ಮೈಸೂರಲ್ಲಿ ಕಾಂಗ್ರೆಸ್ ಪ್ರತಿಭಟನೆ



ಮೈಸೂರು, ಜೂ.20(ಬಿಎಲ್‌ಯು)– ಅನ್ನಭಾಗ್ಯ ಯೋಜನೆಯಡಿ ಜನರಿಗೆ ಅಕ್ಕಿ ಕೊಡುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಿ ಒಂದು ಕಡೆ ಬಿಜೆಪಿ ಪ್ರತಿಭಟನೆ ನಡೆಸಿದರೆ, ಮತ್ತೊಂದು ಕಡೆ ಕೇಂದ್ರದ ಬಿಜೆಪಿ ಸರ್ಕಾರ ರಾಜ್ಯದ ಮಹತ್ವದ ಅನ್ನಭಾಗ್ಯ ಯೋಜನೆಗೆ ಅಕ್ಕಿ ನೀಡದೆ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸಿ ಕಾಂಗ್ರೆಸ್ಸಿಗರು ಮೈಸೂರಿನಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಗಾಂಧಿ ವೃತ್ತದ ಬಳಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಫುಡ್ ಕಾರ್ಪೊರೇಷನ್ ಆಫ್ ಇಂಡಿಯಾ (ಎಫ್‌ಸಿಐ)ದಿಂದ ಅಕ್ಕಿ ಬಿಡುಗಡೆಗೆ ತಡೆಯೊಡ್ಡಿದ ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅಕ್ಕಿ ಹಾಗೂ ತಟ್ಟೆಯನ್ನು ಮುಂದಿಟ್ಟು ವಿನೂತನ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ಅನ್ನಭಾಗ್ಯ ಯೋಜನೆ ಅನುಷ್ಠಾನಗೊಳಿಸಲು ಅಕ್ಕಿ ನೀಡದ ಬಿಜೆಪಿ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಕೇಂದ್ರ ಸರ್ಕಾರ ಅಂದು ಆಕ್ಸಿಜನ್ ಕೊಡಲಿಲ್ಲ, ಇಂದು ಅಕ್ಕಿ ಕೊಡುತ್ತಿಲ್ಲ, ಅಂಬಾನಿ, ಅದಾನಿ ಪ್ರಾಣ ಸ್ನೇಹಿತ ಮೋದಿಗೆ ಧಿಕ್ಕಾರ ಎಂಬ ಘೋಷಣಾ ಫಲಕಗಳನ್ನು ಹಿಡಿದು ಬಿಜೆಪಿ ಸರ್ಕಾರದ ವಿರುದ್ಧ ಕಿಡಿಕಾರಿದರು. ಕರ್ನಾಟಕಕ್ಕೆ ಅಕ್ಕಿ ಕೊಡದಂತೆ ಕೇಂದ್ರದ ಬಿಜೆಪಿ ಸರ್ಕಾರ ಕೆಲವು ರಾಜ್ಯ ಸರ್ಕಾರಗಳಿಗೆ ತಾಕೀತು ಮಾಡಿದೆ. ನಾವು ನೀಡುತ್ತಿರುವ ಜನಪರ ಗ್ಯಾರಂಟಿ ಯೋಜನೆಗಳ ಸಹಿಸದೆ ಬಿಜೆಪಿ ಸರ್ಕಾರ ದ್ವೇಷ ರಾಜಕಾರಣ ಮಾಡುತ್ತಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಆಪಾದಿಸಿದರು. ಎಥಾನ್ ಉತ್ಪಾದನೆಗೆ ಕೇಂದ್ರದ ಬಿಜೆಪಿ ಸರ್ಕಾರ ಅಕ್ಕಿ ಕೊಡುತ್ತಿದೆ. ಅದೇ ಜನರ ಹಸಿವು ನೀಗಿಸಲು ಅಕ್ಕಿ ಕೊಡದೆ ಜನ ವಿರೋಧಿ ಧೋರಣೆ ತಳೆದಿದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಆರೋಪಿಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾಧ್ಯಕ್ಷ ಡಾ.ವಿಜಯಕುಮಾರ್, ರಾಜ್ಯ ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ, ಮಾಜಿ ಮೇಯರ್‌ಗಳಾದ ನಾರಾಯಣ್, ಚಿಕ್ಕಣ್ಣ, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು ಸೇರಿದಂತೆ ನೂರಾರು ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಭರವಸೆ ನೀಡಿದ್ದಂತೆ 10 ಕೆಜಿ ಅಕ್ಕಿ ಕೊಡಿ

● ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಬಿಜೆಪಿ ಆಗ್ರಹ ● ಮೈಸೂರಲ್ಲಿ ಗ್ಯಾರಂಟಿ ಯೋಜನೆ ಜಾರಿಗೆ ಒತ್ತಾಯಿಸಿ ಪ್ರತಿಭಟನೆ



ಮೈಸೂರು, ಜೂ.20(ಬಿಎಲ್‌ಯು)– ಅನ್ನಭಾಗ್ಯ ಯೋಜನೆಯಲ್ಲಿ ಕರ್ನಾಟಕದ ಜನತೆಗೆ ಮಾತು ಕೊಟ್ಟಂತೆ ತಲಾ 10ಕೆ.ಜಿ. ಅಕ್ಕಿ ಕೊಡುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಿ ಮೈಸೂರಿನಲ್ಲಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ಬಿಜೆಪಿ ಕಾರ್ಯಕರ್ತರ ಪಡೆ, ಮಾತು ತಪ್ಪಿದ ಕಾಂಗ್ರೆಸ್ ಸರ್ಕಾರ ಎಂದು ಕುಟುಕಿ ಧಿಕ್ಕಾರದ ಘೋಷಣೆಗಳನ್ನು ಮೊಳಗಿಸಿದರು.

ಗ್ಯಾರಂಟಿ ಅಡಿ ಅಕ್ಕಿ ಕೊಡುವುದಾಗಿ ಕಾಂಗ್ರೆಸ್ ಸರ್ಕಾರ ಮತ ಪಡೆದಿದೆ. ಆದರೆ ಈಗ ಅಕ್ಕಿ ಕೊಡಲು ಸಾಧ್ಯವಾಗದೆ ಸಬೂಬು ಹೇಳುತ್ತಾ ವಚನ ಭ್ರಷ್ಟವಾಗಿದೆ. ಕೇಂದ್ರದ ಬಿಜೆಪಿ ಸರ್ಕಾರ ತನ್ನ ಪಾಲಿನ 5 ಕೆ.ಜಿ. ಅಕ್ಕಿ ಕೊಡುತ್ತಿದೆ. ಉಳಿದ 5 ಕೆ.ಜಿ.ಯನ್ನು ಕಾಂಗ್ರೆಸ್ ಸರ್ಕಾರ ಕೊಡಬೇಕಿದೆ. ಇಲ್ಲದಿದ್ದರೆ ಬಿಜೆಪಿಯ ಪ್ರತಿಭಟನೆ ಮತ್ತಷ್ಟು ತೀವ್ರವಾಗಲಿದೆ ಎಂದು ಪ್ರತಿಭಟನಾಕಾರರು ಕಾಂಗ್ರೆಸ್ ಸರ್ಕಾರವನ್ನು ಎಚ್ಚರಿಸಿದರು.

ಗ್ಯಾರಂಟಿ ಗ್ಯಾರಂಟಿ–ಇದಕ್ಕಿಲ್ಲ ವಾರಂಟಿ, ಮೋದಿ 5 ಕೆ.ಜಿ.ಅಕ್ಕಿ ನಿಜ– ಕಾಂಗ್ರೆಸ್ 10 ಕೆ.ಜಿ.ಅಕ್ಕಿ ಸುಳ್ಳು, ಸುಳ್ಳು ಗ್ಯಾರಂಟಿ– ಪೊಳ್ಳು ಭರವಸೆ ಎಂಬ ಘೋಷಣಾ ಫಲಕ ಹಿಡಿದು ಕಾಂಗ್ರೆಸ್ ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಇದೇ ವೇಳೆ ಮಾತನಾಡಿದ ಮಾಜಿ ಶಾಸಕ ನಾಗೇಂದ್ರ, ಬಸ್ ಫ್ರೀ ಇದೆ ಅಂತ ಧರ್ಮಸ್ಥಳಕ್ಕೆ ಹೋದ ನನ್ನ ಹೆಂಡತಿ ಇನ್ನೂ ಬಂದಿಲ್ಲ ಅಂತ ಕೆಲವು ಗಂಡಸರು ಗೋಳು ತೋಡಿಕೊಳ್ಳುತ್ತಿದ್ದಾರೆ. ಇಂತಹ ಹಲವು ಅಧ್ವಾನವನ್ನು ಗ್ಯಾರಂಟಿ ಸ್ಕೀಂ ಸೃಷ್ಟಿ ಮಾಡಿದೆ ಎಂದು ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆ ಯನ್ನು ಗೇಲಿ ಮಾಡಿದರು. ಶಾಸಕ ಶ್ರೀವತ್ಸ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಬಿಜೆಪಿ ಮುಖಂಡರಾದ ಮೈ.ವಿ.ರವಿ ಶಂಕರ್, ಮಂಗಳ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನ್ಯೂಯಾರ್ಕ್ ತಲುಪಿದ ಪ್ರಧಾನಿ ಮೋದಿ

● 3 ದಿನಗಳ ಅಮೆರಿಕಾ ಪ್ರವಾಸ ಆರಂಭ ● ಯೋಗ ದಿನಾಚರಣೆಯಲ್ಲಿ ಭಾಗಿ



ನ್ಯೂಯಾರ್ಕ್, ಜೂ.21– ಪ್ರಧಾನಿ ನರೇಂದ್ರ ಮೋದಿ ನ್ಯೂಯಾರ್ಕ್ ತಲುಪಿದ್ದು, 3 ದಿನಗಳ ಅಮೆರಿಕಾ ಪ್ರವಾಸವನ್ನು ಆರಂಭಿಸಿದ್ದಾರೆ. ಅಮೆರಿಕಾ–ಭಾರತದ ದ್ವಿಪಕ್ಷೀಯ ಸಂಬಂಧ ಪ್ರಜಾಪ್ರಭುತ್ವ, ವೈವಿಧ್ಯತೆ ಹಾಗೂ ಸ್ವಾತಂತ್ರ್ಯದ ಮೌಲ್ಯಗಳ ಆಧಾರವನ್ನು ಹೊಂದಿದೆ ಹಾಗೂ ಉಭಯ ರಾಷ್ಟ್ರಗಳು ಜಾಗತಿಕ ಸವಾಲುಗಳನ್ನು ಎದುರಿಸಲು ಜೊತೆಯಾಗಿ ನಿಂತಿವೆ ಎಂದು ಮೋದಿ ಅಮೆರಿಕಾ ಪ್ರವಾಸಕ್ಕೂ ಮುನ್ನ ಹೇಳಿದ್ದರು.

ಪ್ರಧಾನಿ ನರೇಂದ್ರ ಮೋದಿ ನ್ಯೂಯಾರ್ಕ್‌ಗೆ ಆಗಮಿಸುತ್ತಿದ್ದಂತೆಯೇ, ರಸ್ತೆಯ ಇಕ್ಕೆಲಗಳಲ್ಲಿ ನೆರೆದಿದ್ದ ಅನಿವಾಸಿ ಭಾರತೀಯರ ಸಮೂಹ, 'ಮೋದಿ, ಮೋದಿ...' ಘೋಷಣೆಗಳೊಂದಿಗೆ ಪ್ರಧಾನಿ ಮೋದಿ ಅವರನ್ನು ಸ್ವಾಗತಿಸಿತು.

ನ್ಯೂಯಾರ್ಕ್‌ನಲ್ಲಿ ಪ್ರಧಾನಿ ಮೋದಿ ಉದ್ಯಮ, ಕಲೆ, ಥಿಂಕ್ ಟ್ಯಾಂಕ್ ಸಮುದಾಯ, ಆರೋಗ್ಯ, ವಿಜ್ಞಾನ ಸೇರಿದಂತೆ ಹಲವು ಕ್ಷೇತ್ರಗಳಲ್ಲಿರುವ ಜನರನ್ನು ಭೇಟಿ ಮಾಡಲಿದ್ದಾರೆ. ಟೆಸ್ಲಾದ ಸಿಇಒ, ಸ್ಪೇಸ್ ಎಕ್ಸ್ ಹಾಗೂ ಟ್ವಿಟರ್‌ನ ಅಧ್ಯಕ್ಷ ಎಲಾನ್ ಮಸ್ಕ್, ಖಗೋಳ ಭೌತಶಾಸ್ತ್ರಜ್ಞ ನೀಲ್ ಡಿಗ್ರಾಸ್ ಟೈಸನ್, ಗ್ರ್ಯಾಮಿ ಪ್ರಶಸ್ತಿ ವಿಜೇತ ಭಾರತೀಯ–ಅಮೆರಿಕನ್ ಗಾಯಕ ಫಾಲು (ಫಲ್ಗುಣಿ ಶಾ), ನಿಕೋಲಸ್ ನಾಸಿಮ್ ತಾಲೆಬ್, ರೇ ಡಾಲಿಯೊ, ಜೆಫ್ ಸ್ಮಿತ್, ಮೈಕೆಲ್ ಫ್ರೊಮಾನ್ ಡೇನಿಯಲ್ ರಸ್ಸೆಲ್, ಎಲ್ಬ್ರಿಡ್ಜ್ ಕಾಲ್ಬಿ, ಪೀಟರ್ ಆಗ್ರೆ, ಸ್ಟೀಫನ್ ಕ್ಲಾಸ್ಕೊ ಮತ್ತು ಚಂದ್ರಿಕಾ ಟಂಡನ್ ಅವರನ್ನು ಪ್ರಧಾನಿ ಮೋದಿ ಭೇಟಿ ಮಾಡಲಿದ್ದಾರೆ.

ಬುಧವಾರ ಬೆಳಿಗ್ಗೆ (ಪೂರ್ವ ದೇಶಗಳ ಸಮಯ) ವಿಶ್ವಸಂಸ್ಥೆಯಲ್ಲಿ ನಡೆಯಲಿರುವ 9 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪ್ರಧಾನಿ ಮೋದಿ ಭಾಗಿಯಾಗಲಿದ್ದಾರೆ. ಯೋಗ ದಿನಾಚರಣೆಯಲ್ಲಿ ಭಾಗಿಯಾದ ಬಳಿಕ ಪ್ರಧಾನಿ ವಾಷಿಂಗ್ಟನ್‌ಗೆ ತೆರಳಲಿದ್ದು, ಅಲ್ಲಿ ಶ್ವೇತ ಭವನದಲ್ಲಿ ಪ್ರಧಾನಿ ಮೋದಿ ಅವರಿಗೆ ವಿಧ್ಯುಕ್ತ ಸ್ವಾಗತ ಏರ್ಪಡಾಗಿದೆ. ಈ ಬಳಿಕ ಬೈಡನ್ ಸರ್ಕಾರ ಆಯೋಜಿಸಿರುವ ಔತಣ ಕೂಟ ಹಾಗೂ ಉಪಾಧ್ಯಕ್ಷರು ಆಯೋಜಿಸಿರುವ ಉಪಹಾರ ಕೂಟದಲ್ಲಿ ಮೋದಿ ಭಾಗವಹಿಸಲಿದ್ದಾರೆ. ಈ ಬಳಿಕ ಮೋದಿ ಅಮೆರಿಕಾ ಕಾಂಗ್ರೆಸ್‌ನ ಜಂಟಿ ಸದನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಈ ನಂತರ ಅನಿವಾಸಿ ಭಾರತೀಯರನ್ನುದ್ದೇಶಿಸಿ ಮೋದಿ ಭಾಷಣ ಮಾಡಲಿದ್ದಾರೆ.

ಕೊಟ್ಟಿಗೆಯಲ್ಲಿ ಕಟ್ಟಿದ್ದ ಎತ್ತುಗಳ ಕಳವು

ಹುಣಸೂರು, ಜೂ.20–ಮನೆ ಹಿಂದೆ ಕೊಟ್ಟಿಗೆಯಲ್ಲಿ ಕಟ್ಟಿದ್ದ ಎತ್ತುಗಳನ್ನು ಕಳವು ಮಾಡಿರುವ ಘಟನೆ ಹುಣಸೂರು ತಾಲೂಕು ನೆಲ್ಲೂರುಪಾಲ ಗ್ರಾಮದಿಂದ ವರದಿಯಾಗಿದೆ.

ಈ ಗ್ರಾಮದ ರೈತ ಎಚ್.ಎಂ. ಭಾಸ್ಕರ(42) ಅವರು ತಮ್ಮ ಮನೆಯ ಹಿಂಬದಿಯಲ್ಲಿರುವ ಕೊಟ್ಟಿಗೆಯಲ್ಲಿ ಜೂ.18ರಂದು ರಾತ್ರಿ 80 ಸಾವಿರ ರೂ. ಮೌಲ್ಯದ ಒಂದು ಜೊತೆ ಎತ್ತುಗಳನ್ನು ಕಟ್ಟಿಹಾಕಿದ್ದರು. ಜೂ.19ರಂದು ಬೆಳಗ್ಗೆ ನೋಡಿದಾಗ ಎತ್ತುಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೀದಿ ನಾಟಕದ ಮೂಲಕ 'ಯೋಗ' ಕುರಿತು ಅರಿವು



ಮೈಸೂರು, ಜೂ.20(ಆರ್‌ಕೆ)– ಜೂನ್ 21ರಂದು ನಡೆಯಲಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಮೈಸೂರಿನ ಸರ್ಕಾರಿ ಆಯುರ್ವೇದ ಕಾಲೇಜು ವಿದ್ಯಾರ್ಥಿಗಳು ಬೀದಿ ನಾಟಕದ ಮೂಲಕ ಯೋಗದ ಮಹತ್ವದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದರು. ಕಾಲೇಜು ಮುಂಭಾಗದ ಸರ್ಕಲ್‌ನಲ್ಲಿ ಯೋಗ ಪ್ರದರ್ಶನ ಮತ್ತು ಬೀದಿ ನಾಟಕ ಪ್ರದರ್ಶಿಸಿದ ವಿದ್ಯಾರ್ಥಿಗಳು, ಯೋಗಾಭ್ಯಾಸ ಮಾಡಿ ಆರೋಗ್ಯ ಕಾಪಾಡಿಕೊಳ್ಳಿ ಎಂಬ ಸಂದೇಶ ರವಾನಿಸಿದರು. ಯೋಗದ ವಿವಿಧ ಭಂಗಿಗಳು, ಉಪಯೋಗದ ಬಗ್ಗೆ ಜನರಲ್ಲಿ ಅರಿವು ಮೂಡಿಸಿದರು. ಕಾಲೇಜು ಪ್ರಾಂಶುಪಾಲ ಡಾ.ಕೆ.ಎಸ್.ರಾಧಾಕೃಷ್ಣರಾವ್, ಸಂಘಟನಾ ಕಾರ್ಯದರ್ಶಿ ಡಾ.ವೆಂಕಟಕೃಷ್ಣ, ಪ್ರಾಧ್ಯಾಪಕರು, ಎಲ್ಲಾ ವಿಭಾಗಗಳ ಮುಖ್ಯಸ್ಥರು, ಸಿಬ್ಬಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

'ಯೋಗ ನಡಿಗೆ ಆರೋಗ್ಯದೆಡೆಗೆ' ಜಾಗೃತಿ ಯೋಗ ಜಾಥಾ



ಮೈಸೂರು, ಜೂ. 20– ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯ ಹಾಗೂ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ, ಮೈಸೂರಿನ ನಾಯ್ಡುನಗರ ಬಸ್ ನಿಲ್ದಾಣದ ಬಳಿ ಅಂತಾರಾಷ್ಟ್ರೀಯ ಯೋಗದಿನದ ಪ್ರಯುಕ್ತ "ಯೋಗ ನಡಿಗೆ ಆರೋಗ್ಯದೆಡೆಗೆ" ಜನ ಜಾಗೃತಿ ಯೋಗ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಮೈಸೂರು ಮಹಾನಗರ ಪಾಲಿಕೆ ಸದಸ್ಯ ಸಮ್ಮಿ ಅಜ್ಜು ನೆರವೇರಿಸಿ ಮಾತನಾಡಿ, ಯೋಗ ಈ ದೇಶದ ಸಂಪತ್ತು. ನಮ್ಮ ಅರೋಗ್ಯವನ್ನು ಕಾಪಾಡಿಕೊಳ್ಳಲು, ಯೋಗ ಒಂದು ಅಸ್ತ್ರವಾಗಿದೆ, ಇಂತಹ ಒಂದು ಜಾಗೃತಿ ಕಾರ್ಯಕ್ರಮದ ಮೂಲಕ ಸಾರ್ವಜನಿಕರಲ್ಲಿ ಯೋಗದ ಮಹತ್ವವನ್ನು ತಿಳಿಸುತ್ತಿರುವುದು ಬಹಳ ಶ್ಲಾಘನೀಯ ಕಾರ್ಯವಾಗಿದೆ ಎಂದರು. ತದನಂತರ ಜಾಥಾವು 3 ಕಿ.ಮೀ.ವರೆಗೆ ಸಾಗಿ ಕಾಲೇಜಿನ ಬಳಿ ಅಂತ್ಯವಾಯಿತು.

ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಡಾ ಲಕ್ಷ್ಮೀನಾರಾಯಣ ಶೆಣೈ, ಅಂತಾರಾಷ್ಟ್ರೀಯ ಯೋಗ ಶಿಕ್ಷಕರಾದ ರಂಗನಾಥ್, ಅಂತಾರಾಷ್ಟ್ರೀಯ ಯೋಗಪಟು ಶಶಿಕುಮಾರ್, ಶ್ರೀ ಛಾಯಾದೇವಿ ಕಾಲೇಜಿನ ಪ್ರಾಂಶುಪಾಲ ಡಾ ಅಂತೋಣಿ ಪಾಲ್‌ರಾಜ್, ಪ್ರಾಧ್ಯಾಪಕರಾದ ಚಂದ್ರಶೇಖರ, ಯಶವಂತ, ಸುಮ, ಪಲ್ಲವಿ, ರೇಖಾ, ಇಂಚರ, ಅನು, ಶ್ರೀ ಛಾಯಾದೇವಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಮಂಜುನಾಥ್, ಸಿಬ್ಬಂದಿ ವರ್ಗ ಹಾಗೂ ಸುಮಾರು 250 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಸತತ 3ನೇ ದಿನವೂ ಸರ್ವರ್ ಡೌನ್ ಸಮಸ್ಯೆ

ಗೃಹಜ್ಯೋತಿ ನೋಂದಣಿಗೆ ಜನರ ಹೆಣಗಾಟ

ಮೈಸೂರು, ಜೂ. 20 (ಆರ್‌ಕೆ)– ಸೇವಾ ಸಿಂಧು ಪೋರ್ಟಲ್ ಓಪನ್ ಆಗದ ಕಾರಣ ಮೂರನೇ ದಿನವೂ ಗೃಹಜ್ಯೋತಿ ಯೋಜನೆಗೆ ನೋಂದಣಿ ಮಾಡಲಾಗದೇ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿ, ನಿರಾಸೆಯಿಂದಲೇ ವಾಪಸಾದರು.

ಗೃಹ ಬಳಕೆ ಗ್ರಾಹಕರಿಗೆ ಪ್ರತೀ ತಿಂಗಳೂ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ಪೂರೈಸುವ ಗೃಹಜ್ಯೋತಿ ಯೋಜನೆಗೆ ನೋಂದಣಿಗೆ ಕಳೆದ ಭಾನುವಾರ ಚಾಲನೆ ನೀಡಲಾಗಿದೆ. ಫಲಾನುಭವಿಗಳ ಹೆಸರು ನೋಂದಾಯಿಸಲು ಮೈಸೂರಿನ 6 ಕರ್ನಾಟಕ ಒನ್ ಕೇಂದ್ರಗಳಲ್ಲಿ ಸರ್ವರ್ ಡೌನ್ ಆದ ಪರಿಣಾಮ ಸೇವಾ ಸಿಂಧು ವೆಬ್‌ಸೈಟ್ ಓಪನ್ ಆಗುತ್ತಿಲ್ಲ. ಮಾಸಿಕ ವಿದ್ಯುತ್ ಬಿಲ್, ಆಧಾರ್ ಸಂಖ್ಯೆ ಹಾಗೂ ಆಧಾರ್ ಕಾರ್ಡ್ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆಯೊಂದಿಗೆ ಹೆಸರು ನೋಂದಾಯಿಸಲೆಂದು ಕರ್ನಾಟಕ ಒನ್ ಕೇಂದ್ರಗಳಿಗೆ ತೆರಳಿ ಗಂಟೆಗಟ್ಟಲೆ ಕಾದರೂ ಸೇವಾ ಸಿಂಧು ಪೋರ್ಟಲ್ ಮೂರನೇ ದಿನವಾದ ಇಂದೂ ಓಪನ್ ಆಗಲೇ ಇಲ್ಲ.

ನೋಂದಣಿಗೆ ಗ್ರಾಹಕರು ಮುಗಿ ಬೀಳುತ್ತಿದ್ದರೂ ಸರ್ವರ್ ಡೌನ್ ಆಗಿ ನೆಟ್‌ವರ್ಕ್ ಸಿಗದ ಕಾರಣ ಕರ್ನಾಟಕ ಒನ್ ಕೇಂದ್ರಗಳ ಸಿಬ್ಬಂದಿ ಹೆಣಗಾಡಬೇಕಾಯಿತು. ಬೆಳಗ್ಗೆಯಿಂದ ದಾಖಲಾತಿಯೊಂದಿಗೆ ಕಾಯುತ್ತಾ ಕುಳಿತಿದ್ದ ಸಾರ್ವಜನಿಕರು ಹೆಸರು ನೋಂದಣಿಯಾಗದ ಕಾರಣ ಕೊನೆಗೆ ಬೇಸತ್ತು ಸರ್ಕಾರದ ವಿರುದ್ಧ ಅಸಮಾಧಾನಗೊಂಡು ಬರಿಗೈಯಲ್ಲಿ ಮನೆಗೆ ಹಿಂದಿರುಗಿದರು. ಬೆಂಗಳೂರಿನಲ್ಲಿ ಸೇವಾ ಸಿಂಧು ವೆಬ್‌ಸೈಟ್ ನಿರ್ವಹಿಸುತ್ತಿರುವವರು ವ್ಯವಸ್ಥೆ ಸರಿಪಡಿಸಬೇಕು. ಪೋರ್ಟಲ್ ಓಪನ್ ಆಗದಿದ್ದರೆ ನಾವೇನೂ ಮಾಡಲು ಸಾಧ್ಯವಿಲ್ಲ ಎಂದು ಕರ್ನಾಟಕ ಒನ್ ಸೆಂಟರ್‌ಗಳ ಸಿಬ್ಬಂದಿ ಅಸಹಾಯಕತೆ ವ್ಯಕ್ತಪಡಿಸಿ ಕೈಚೆಲ್ಲಿದ್ದಾರೆ.



ಮೈಸೂರಿನ ಶೇಷಾದ್ರಿ ಅಯ್ಯರ್ ರಸ್ತೆಯ ವಿದ್ಯಾವರ್ಧಕ ಕಾಲೇಜು ಎದುರು, ಗೋಕುಲಂ 3ನೇ ಹಂತದ ವಾಟರ್ ಟ್ಯಾಂಕ್ ಬಳಿ, ಜಯನಗರ ರೈಲ್ವೆ ಗೇಟ್ ಬಳಿ, ಸಿದ್ದಾರ್ಥನಗರದ ಶಾಂತಲಾ ಶಾಲೆ ಎದುರು, ನಜರ್‌ಬಾದ್‌ನ ಮುಖ್ಯ ರಸ್ತೆಯ ಗುರು ಹೋಟೆಲ್ ಎದುರು ಹಾಗೂ ರಾಮಕೃಷ್ಣನಗರದ ಮುಡಾ ಕಾಂಪ್ಲೆಕ್ಸ್‌ನಲ್ಲಿರುವ ಕರ್ನಾಟಕ ಒನ್ ಕೇಂದ್ರಗಳಲ್ಲಿ ಗೃಹ ಜ್ಯೋತಿ ಯೋಜನೆ ಪ್ರಯೋಜನ ಪಡೆಯಲು ಹೆಸರು ನೋಂದಾಯಿಸುವುದಕ್ಕಾಗಿ ಮಧ್ಯಾಹ್ನದಿಂದ ಸಂಜೆವರೆಗೂ ಕಾಯ್ದು ಸಾಕಾಗಿ ವಾಪಸ್ ಹೋದರು.

ಸಿಬ್ಬಂದಿ, ಜನರು ತಂದಿರುವ ದಾಖಲಾತಿಗಳನ್ನು ಪರಿಶೀಲಿಸಿದರಾದರೂ ಗೃಹ ಜ್ಯೋತಿಗಾಗಿ ನೋಂದಣಿ ಮಾಡಲು ಸಾಧ್ಯವಾಗದ ಕಾರಣ, ಸರ್ವರ್ ಸುಸ್ಥಿತಿಗೆ ಬರುವವರೆಗೂ ಕಾಯಿರಿ ಎಂದಷ್ಟೇ ಹೇಳಿ, ಸೆಂಟರ್‌ನಲ್ಲಿ ಲಭ್ಯವಿರುವ ಇತರ ಸೇವೆಗಳನ್ನು ಮಾತ್ರ ನೀಡುತ್ತಿದ್ದರು. ನೆಟ್‌ವರ್ಕ್‌ಗಾಗಿ ಕಂಪ್ಯೂಟರ್‌ನಲ್ಲಿ ಕಾಯುತ್ತಿದ್ದ ಸಿಬ್ಬಂದಿ, ಏನೂ ಮಾಡಲಾಗದೇ ಅಸಹಾಯಕರಾದರು. ಮನೆಯಲ್ಲೇ ಕುಳಿತು ಮೊಬೈಲ್, ಲ್ಯಾಪ್‌ಟಾಪ್ ಕಂಪ್ಯೂಟರ್ ಮೂಲಕ ನೆಟ್‌ವರ್ಕ್ ಲಭ್ಯವಾದಾಗ ಸೇವಾ ಸಿಂಧು ಪೋರ್ಟಲ್ ಮೂಲಕ ಗೃಹ ಜ್ಯೋತಿಗೆ ನೋಂದಣಿ ಮಾಡಿಕೊಳ್ಳಬಹುದು, ಒಂದು ವೇಳೆ ಸಾಧ್ಯವಾಗದಿದ್ದರೆ ಮಾತ್ರ ಕೇಂದ್ರಕ್ಕೆ ಬನ್ನಿ ಎಂದು ಸಿಬ್ಬಂದಿ ಜನರಿಗೆ ಹೇಳಿ ಕಳುಹಿಸುತ್ತಿದ್ದಾರೆ.

6,58,593 ಅರ್ಜಿ ಸ್ವೀಕಾರ

"ಜೂನ್ 18 ರಂದು 96,305, ಜೂನ್ 19ರಂದು 3,34,845 ಹಾಗೂ ಜೂನ್ 20 ರಂದು ಮಧ್ಯಾಹ್ನ 2.30ರವರೆಗೆ 2,27,443 ಮಂದಿಯಿಂದ ಗೃಹಜ್ಯೋತಿ ಯೋಜನೆಗೆ ಒಟ್ಟು 6,58,593 ಅರ್ಜಿಯನ್ನು ಸಾರ್ವಜನಿಕರಿಂದ ಸ್ವೀಕರಿಸಲಾಗಿದೆ. –ಜಯವಿಭವಸ್ವಾಮಿ –ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ

ಸಾಫ್ಟ್‌ವೇರ್ ಅಭಿವೃದ್ಧಿಯಲ್ಲೇ ದೋಷವಿರುವ ಅನುಮಾನ

ಮೈಸೂರು,ಜೂ.20(ಪಿಎಂ)– ಗೃಹ ಜ್ಯೋತಿ ಯೋಜನೆಗೆ ಅರ್ಜಿ ಸಲ್ಲಿಸಲು ಸರ್ವರ್ ಬ್ಯುಸಿಯೋ ಇಲ್ಲ ಸಾಫ್ಟ್‌ವೇರ್ ಸಮರ್ಪಕವಾಗಿ ಅಭಿವೃದ್ಧಿಪಡಿಸಿಲ್ಲವೋ ಗೊತ್ತಾಗುತ್ತಿಲ್ಲ ಎಂದು ಮೈಸೂರಿನ ಕಂಪ್ಯೂಟರ್ ಸೆಂಟರ್ ಮಾಲೀಕರೊಬ್ಬರು ತಿಳಿಸಿದರು.

ಹೆಸರೇಳಲಿಚ್ಛಿಸದ ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ವೆಬ್‌ಸೈಟ್‌ನಲ್ಲಿ ಅಪ್ಲಿಕೇಷನ್ ತೆರೆದುಕೊಳ್ಳುತ್ತದೆ. ಬಳಿಕ ಮುಂದುವರೆಯಲು ಸಾಧ್ಯವಾಗುತ್ತಿಲ್ಲ. ಜಿಲ್ಲೆಯ ಬಹುತೇಕ ಕಂಪ್ಯೂಟರ್ ಸೆಂಟರ್‌ನಲ್ಲಿ ಇದೇ ಪರಿಸ್ಥಿತಿ ಇದೆ. ಮೊಬೈಲ್‌ಗಳಲ್ಲೂ ಅರ್ಜಿ ಸಲ್ಲಿಕೆ ಸಾಧ್ಯವಾಗುತ್ತಿಲ್ಲ. ಕರ್ನಾಟಕ ಓನ್, ಗ್ರಾಮ್ ಓನ್ ಕೇಂದ್ರ, ಗ್ರಾಮ ಪಂಚಾಯಿತಿ, ನಾಡಕಚೇರಿ ಸೇರಿದಂತೆ ಎಲ್ಲಾ ಸೆಸ್ಕ್ ಸ್ಥಳೀಯ ಕಚೇರಿಗಳಲ್ಲೂ ಸರ್ವರ್ ಸಮಸ್ಯೆ ವ್ಯಾಪಕವಾಗಿದೆ ಎಂದರು. ಇದರಿಂದ ಸಾರ್ವಜನಿಕರು ಹೈರಾಣಾಗಿದ್ದಾರೆ. ಪ್ರಾರಂಭದಿಂದಲೂ ಸರ್ವರ್ ಸಮಸ್ಯೆ ಇದೆ ಎಂದು ಅವರು ತಿಳಿಸಿದರು.

ಮೈಸೂರು ಮಿತ್ರ ಬುಧವಾರ 21 ಜೂನ್ 2023

ರಾಜ್ಯಕ್ಕೆ ಅಕ್ಕಿ ನೀಡಲು ಕೇಂದ್ರ ಸರ್ಕಾರ ನಿರಾಕರಣೆ

ಕೇಂದ್ರದ ವಿರುದ್ಧ ಕಾಂಗ್ರೆಸ್ ಬೃಹತ್ ಪ್ರತಿಭಟನೆ



ಮಂಡ್ಯ, ಜೂ.20– ರಾಜ್ಯಕ್ಕೆ ಅಕ್ಕಿ ನೀಡಲು ಕೇಂದ್ರ ಸರ್ಕಾರ ನಿರಾಕರಿಸಿರುವುದನ್ನು ಖಂಡಿಸಿ ಮಂಡ್ಯ ಜಿಲ್ಲಾ ಕಾಂಗ್ರೆಸ್ ವತಿಯಿಂದ ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ನಗರದಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಬೆಂಗಳೂರು– ಮೈಸೂರು ಹೆದ್ದಾರಿಯ ವಿಶ್ವೇಶ್ವರಯ್ಯ ಪ್ರತಿಮೆ ಎದುರು ಜಮಾಯಿಸಿದ ನೂರಾರು ಕಾಂಗ್ರೆಸ್ಸಿಗರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಕೇಂದ್ರದ ಬಿಜೆಪಿ ಸರ್ಕಾರ ರಾಜ್ಯಕ್ಕೆ ಅಕ್ಕಿ ಕೊಡಲು ನಿರಾಕರಿಸುವ ಮೂಲಕ ಕಾಂಗ್ರೆಸ್‌ನ ಗ್ಯಾರಂಟಿಗೆ ಅಡ್ಡಿಪಡಿಸುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಕ್ಕಿಗಾಗಿ FCA ಅವರೊಂದಿಗೆ ಮಾತುಕತೆ ನಡೆಸಿದ್ದರು. ಅವರೂ ಸಹ ಅಕ್ಕಿ ಇದೆ ಎಂದು ತಿಳಿಸಿದ್ದರು. ಆದರೆ 15 ದಿನಗಳ ಬಳಿಕ ಕೇಂದ್ರದ ಸೂಚನೆ ಮೇರೆಗೆ ರಾಜ್ಯಕ್ಕೆ ಅಕ್ಕಿ ಸರಬರಾಜು ಮಾಡಲ್ಲ ಎನ್ನುತ್ತಿದ್ದು, ಇದು ಅನ್ಯಾಯ ಎಂದು ಖಂಡಿಸಿದರು.

ನಾವು ದುಡ್ಡು ಕೊಡುತ್ತೇವೆ ಎಂದರೂ ಅಕ್ಕಿ ಕೊಡುತ್ತಿಲ್ಲ. ಇದು ದುರುದ್ದೇಶದ ರಾಜಕಾರಣ. ಹರಿಯಾಣ ಅಕ್ಕಿ ಕೊಡಲು ಒಪ್ಪಿದೆ. ಎಷ್ಟು ಸಾಧ್ಯವೋ ಅಷ್ಟು ವ್ಯವಸ್ಥೆ ಮಾಡುತ್ತೇವೆ. ಆಂಧ್ರ, ತೆಲಂಗಾಣ ದೂರ ಆದರೂ, ಏನೇ ಕಷ್ಟವಾದರೂ, ಅಕ್ಕಿ ಸರಬರಾಜು ಮಾಡಿಕೊಳ್ಳುತ್ತೇವೆ. ರಾಜ್ಯದ ವಿರುದ್ಧ ಕೇಂದ್ರ ಈ ರೀತಿ ಧೋರಣೆ ಅನುಸರಿಸಬಾರದು ಎಂದು ಕಿಡಿಕಾರಿದರು.

ಬಿಜೆಪಿಗೆ ಕಾಂಗ್ರೆಸ್ ಭಯ ಶುರುವಾಗಿದೆ. ಅದಕ್ಕಾಗಿ 'ಕೈ' ಕಾರ್ಯಕ್ರಮಗಳಿಗೆ ಅಡ್ಡಿಪಡಿಸುತ್ತಿದೆ. ಅಕ್ಕಿ ಬದಲು ರಾಗಿ, ಜೋಳ ಕೊಡಿ ಎಂದು ಬಿಜೆಪಿ ನಾಯಕರು ಹೇಳುತ್ತಾರೆ. ಇಂತಹುದೇ ಪದಾರ್ಥ ಕೊಡಿ ಎಂದು ಹೇಳೋಕೆ ಅವರ್‍ಯಾರು. ನಮ್ಮ ತೀರ್ಮಾನ ನಮಗೆ ಬಿಟ್ಟಿದ್ದು. ಅವರು 5 ವರ್ಷ ಅಧಿಕಾರದಲ್ಲಿ ಇದ್ದರೂ, ನಾವು ಅವರನ್ನು ಕಟ್ಟಾಳ್ವಿಕೆ ಮಾಡುವ ಕೆಲಸಕ್ಕೆ ಮುಂದಾಗಿರಲಿಲ್ಲ ಎಂದರು.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಈ ಯೋಜನೆಗಳು ಕಾಂಗ್ರೆಸ್ ಕೈ ಹಿಡಿಯುತ್ತವೆ. ಬಿಜೆಪಿ ಸರ್ಕಾರದ ಹಿಂದಿನ ಡ್ಯಾಮೇಜ್‌ಗಳು ಸಹ ಕೈ ಹಿಡಿಯುತ್ತವೆ. ಒಳ್ಳೆಯ ಅಭಿವೃದ್ಧಿ, ಸದೃಢ ಆಡಳಿತ ಕೊಡುತ್ತೇವೆ ಎಂದರು.

ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆಯ ಅವಾಂತರಗಳ ಬಗ್ಗೆ ಮಾತನಾಡಿ, ಈ ಬಗ್ಗೆ ಸಾರಿಗೆ ಮಂತ್ರಿಗಳೊಂದಿಗೆ ಚರ್ಚಿಸಿ, ಶೀಘ್ರ ಬಸ್‌ಗಳ ಸಂಖ್ಯೆ ಹೆಚ್ಚಳ ಮಾಡಲು ಕ್ರಮ ಕೈಗೊಳ್ಳುತ್ತೇವೆ. ಬಸ್‌ನಲ್ಲಿ ಶೇ.50ರಷ್ಟು ಸೀಟ್‌ಗಳನ್ನು ರಿಸರ್ವ್ ಮಾಡ ಲಾಗಿದೆ. ಆಷಾಢ ಬಂದಿರುವುದರಿಂದ ಹೆಚ್ಚಾಗಿ ಮಹಿಳೆಯರು ದೇವಸ್ಥಾನಕ್ಕೆ ಹೋಗುತ್ತಿದ್ದಾರೆ ಅಷ್ಟೆ. ಕೆಲವು ಕಡೆ ಗಲಾಟೆಯಾಗಿದೆ. ಎಲ್ಲವೂ ಸರಿ ಹೋಗುತ್ತೆ. ಶೀಘ್ರ ಸರ್ಕಾರ ಸಮಸ್ಯೆ ಬಗೆಹರಿಸುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಶಾಸಕರಾದ ಎ.ಬಿ. ರಮೇಶ್‌ಬಾಬು ಬಂಡಿಸಿದ್ದೇಗೌಡ, ಗಣಿಗ ರವಿಕುಮಾರ್, ಕೆ.ಎಂ.ಉದಯ್, ಮಾಜಿ ಶಾಸಕರಾದ ಎಂ.ಎಸ್.ಆತ್ಮಾ ನಂದ, ಬಿ.ಸೋಮಶೇಖರ್, ಹೆಚ್.ಬಿ. ರಾಮು, ಕೆ.ಬಿ.ಚಂದ್ರಶೇಖರ್, ಮುಖಂಡರಾದ ಬಿ.ರೇವಣ್ಣ, ಬಿ.ಎಲ್.ದೇವರಾಜು, ಪಾಪಣ್ಣ, ರಾಧಾಕೃಷ್ಣ, ಸಿ.ಡಿ.ಗಂಗಾಧರ್, ಎಂ.ಎಸ್.ಚಿದಂಬರ್, ರವೀಶ್ ಸೇರಿದಂತೆ ಸಾವಿರಕ್ಕೂ ಅಧಿಕ ಕಾರ್ಯಕರ್ತರು ಭಾಗವಹಿಸಿದ್ದರು.

ಭಾರತೀನಗರದಲ್ಲಿ ಸಿಪಿಐ(ಎಂ) ಪ್ರತಿಭಟನೆ



ಭಾರತೀನಗರ, ಜೂ.20– ರಾಜ್ಯಕ್ಕೆ ಅಕ್ಕಿ ನೀಡದ ಕೇಂದ್ರ ಸರ್ಕಾರದ ಧೋರಣೆ ಖಂಡಿಸಿ ಮದ್ದೂರು ವಲಯದ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಭಾರತೀನಗರದಲ್ಲಿ ಭೂತ ದಹನ ಮಾಡಿ ಪ್ರತಿಭಟನೆ ನಡೆಸಿದರು. ಇಲ್ಲಿನ ಮದ್ದೂರು–ಮಳವಳ್ಳಿ ಮುಖ್ಯರಸ್ತೆಯಲ್ಲಿ ಮೆರವಣಿಗೆ ನಡೆಸಿದ ಸಿಪಿಐ(ಎಂ) ಕಾರ್ಯಕರ್ತರು ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಹಲಗೂರು ವೃತ್ತದಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದು ಭೂತ ದಹನ ಮಾಡಿ ಪ್ರತಿಭಟಿಸಿದರು.

ಬಳಿಕ ಮಾತನಾಡಿದ ಪ್ರತಿಭಟನಾಕಾರರು, ಪಡಿತರ ಚೀಟಿದಾರರಿಗೆ ತಲಾ 10 ಕೆಜಿ ಆಹಾರ ಧಾನ್ಯ ನೀಡಲು ಕೇಂದ್ರ ಸರ್ಕಾರ ರಾಜ್ಯ ಸರ್ಕಾರದೊಡನೆ ಸಹಕರಿಸದೆ ಪೈಪೋಟಿ ನಡೆಸುವ ಮೂಲಕ ಬಡವರನ್ನು ವಂಚಿಸುತ್ತಿದೆ ಎಂದು ಗುಡುಗಿದರು.

ಛಿದ್ರವಾಗಿದ್ದ ರಾಜ್ಯಗಳನ್ನು ಒಗ್ಗೂಡಿಸಿ ಭಾರತ ದೇಶ ಕಟ್ಟಲಾಯಿತು. ಆದರೆ ಇದೀಗ ಕೇಂದ್ರ ಸರ್ಕಾರ ಕಟ್ಟಿರುವ ಒಕ್ಕೂಟ ವ್ಯವಸ್ಥೆ ಹಾಳು ಮಾಡಲು ಹೊರಟಿದೆ. ಇದು ಮುಂದಿನ ದಿನಗಳಲ್ಲಿ ಜನರ ಭಾವನೆಗಳನ್ನು ಕೆರಳಿಸುವ ಮೂಲಕ ರಾಷ್ಟ್ರವು ಛಿದ್ರವಾಗುವ ಸಂಭವವಿದೆ. ಆದ್ದರಿಂದ ಈಗಾಗಲೇ ಸಂವಿಧಾನದಲ್ಲಿ ಸೇರಿಸಿರುವ ಒಕ್ಕೂಟ ವ್ಯವಸ್ಥೆಗನುಗುಣವಾಗಿ ಎಲ್ಲಾ ಪಾಲುಗಳನ್ನು ಆಯಾ ರಾಜ್ಯ ಸರ್ಕಾರಗಳಿಗೆ ಕೊಡಬೇಕು. ಅದರ ಭಾಗವಾಗಿ ಅಕ್ಕಿಯನ್ನು ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಟಿ.ಎಲ್. ಕೃಷ್ಣೇಗೌಡ, ಜಿಲ್ಲಾ ಸಮಿತಿ ಸದಸ್ಯರಾದ ಬಿ.ಹನುಮೇಶ್, ಟಿ.ಪಿ.ಶೋಭಾ, ವಲಯ ಸಮಿತಿ ಸದಸ್ಯರಾದ ಡಿ.ಕೆ.ಲತಾ, ಸಹ ಸದಸ್ಯರಾದ ಮಂಚೇಗೌಡ, ಟಿ.ಪಿ.ಅರುಣ್‌ಕುಮಾರ್, ಪ್ರೇಮಮ್ಮ, ಗೋಪಾಲಸ್ವಾಮಿ ಸೇರಿದಂತೆ ಹಲವರಿದ್ದರು.

ಗೂಡ್ಸ್ ವಾಹನ ಹರಿದು ಮಗು ಸಾವು

ಮದ್ದೂರು, ಜೂ.20– ಹಾಲು ಸಾಗಿಸುವ ಮಿನಿ ಗೂಡ್ಸ್ ವಾಹನದ ಚಕ್ರ ಹರಿದು ಸ್ಥಳದಲ್ಲೇ ಮಗು ಸಾವನ್ನಪ್ಪಿರುವ ಘಟನೆ ಮಂಗಳವಾರ ಮುಂಜಾನೆ 6.30ರಲ್ಲಿ ತಾಲೂಕಿನ ಡಿ.ಹೊಸೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಸರ್ವರ್ ಖಾನ್ ಅವರ ಪುತ್ರಿ ರಿಪ(3) ಸಾವನ್ನಪ್ಪಿದ ಮಗು. ಎಂದಿನಂತೆ ಬೆಳಗ್ಗೆ ಹಾಲು ಸಾಗಿಸಲು ಡೇರಿಗೆ ಬಂದ ಮಿನಿ ಗೂಡ್ಸ್ ವಾಹನ ವಾಪಸ್ ತಿರುಗಿಸಿಕೊಳ್ಳುವಾಗ ಮನೆ ಸಮೀಪ ಆಟವಾಡುತ್ತಿದ್ದ ಮಗು ಗಮನಿಸದೇ ಚಾಲಕ ಹಿಂದಕ್ಕೆ ತೆಗೆದುಕೊಂಡಿದ್ದಾನೆ. ಈ ವೇಳೆ ಮಗುವಿನ ತಲೆ ಮೇಲೆ ಹಿಂಬದಿ ಚಕ್ರ ಹರಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದೆ ಎನ್ನಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಮದ್ದೂರು ಗ್ರಾಮಾಂತರ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಮಿನಿ ಗೂಡ್ಸ್ ವಾಹನ ಹಾಗೂ ಚಾಲಕನನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸಿಡಿಲು ಬಡಿದು ರೈತ ಸಾವು



ಕೆ.ಆರ್.ಪೇಟೆ, ಜೂ.20– ಸಿಡಿಲು ಬಡಿದು ರೈತ ಸಾವನ್ನಪ್ಪಿರುವ ಘಟನೆ ತಾಲೂಕಿನ ಬೀರುವಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಜವರೇಗೌಡರ ಪುತ್ರ ಮಂಜುನಾಥ್ (40) ಸಾವನ್ನಪ್ಪಿದವರು. ಈತ ಎಂದಿನಂತೆ ಮಂಗಳವಾರ ಮಧ್ಯಾಹ್ನ ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದರು. ಈ ವೇಳೆ ಗುಡುಗು ಸಹಿತ ಸುರಿದ ಭಾರೀ ಮಳೆ ವೇಳೆ ಸಿಡಿಲು ಬಡಿದು ಮಂಜುನಾಥ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮತ್ತೋರ್ವ ರೈತ ರಾಜು ಅವರಿಗೂ ಸಿಡಿಲು ಬಡಿದಿದ್ದು, ಬಂಡಿಹೊಳೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ಪಡೆದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಂಜುನಾಥ್ ಸಾವಿನಿಂದ ಆತನ ಕುಟುಂಬ ಸಂಕಷ್ಟಕ್ಕೆ ಸಿಲುಕಿದೆ. ಹೀಗಾಗಿ ಸರ್ಕಾರ ಮೃತ ರೈತನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ್, ಸೊಸೈಟಿ ಅಧ್ಯಕ್ಷ ಈರೇಗೌಡ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಮುಖಂಡರ ಮೇಲಿನ ಮನ್‌ಮುಲ್ ನಿರ್ದೇಶಕ ಡಾಲು ರವಿ ಆರೋಪ ಸತ್ಯಕ್ಕೆ ದೂರ

ಕ್ಷಮೆ ಕೇಳದಿದ್ದರೆ ಅವರ ವಿರುದ್ಧ ಮಾನನಷ್ಟ ಮೊಕದ್ದಮೆ: ಎಚ್ಚರಿಕೆ



ಕೆ.ಆರ್.ಪೇಟೆ, ಜೂ.20– ಮೇ 10ರಂದು ನಡೆದ ವಿಧಾನಸಭಾ ಚುನಾವಣೆಯಲ್ಲಿ ಕೆಲವು ಕಾಂಗ್ರೆಸ್ ಮುಖಂಡರು ಲಕ್ಷಗಟ್ಟಲೆ ಹಣ ಪಡೆದು ಜೆಡಿಎಸ್ ಅಭ್ಯರ್ಥಿ ಬೆಂಬಲಿಸಿದ್ದಾರೆ ಎಂದು ಮನ್‌ಮುಲ್ ನಿರ್ದೇಶಕ ಡಾಲು ರವಿ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ. ಸುಳ್ಳು ಆರೋಪ ಮಾಡಿ ನಮ್ಮ ವ್ಯಕ್ತಿತ್ವಕ್ಕೆ ಧಕ್ಕೆ ತಂದಿರುವ ಡಾಲು ರವಿ ಕೂಡಲೇ ಬಹಿರಂಗ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ ಮಾನನಷ್ಟ ಮೊಕದ್ದಮೆ ಹೂಡುವ ಜೊತೆಗೆ ಅವರ ಮನೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಕಾಂಗ್ರೆಸ್ ಮುಖಂಡರು ಎಚ್ಚರಿಕೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ಎಂ.ಡಿ.ಕೃಷ್ಣಮೂರ್ತಿ, ಕಿಕ್ಕೇರಿ ಸುರೇಶ್, ಬಿ.ನಾಗೇಂದ್ರಕುಮಾರ್, ಕೋಡಿಮಾರನಹಳ್ಳಿ ದೇವರಾಜು ಅವರುಗಳು ಮಂಡ್ಯ ಹಾಲು ಒಕ್ಕೂಟದ ನಿರ್ದೇಶಕ ಡಾಲು ರವಿ ಮಾಡಿರುವ ಆರೋಪ ನಿರಾಧಾರವಾಗಿದೆ. ಒಂದು ವೇಳೆ ನಾವು ಹಣ ಪಡೆದಿರುವ ಬಗ್ಗೆ ದಾಖಲೆ ಬಿಡುಗಡೆ ಮಾಡಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇವೆ ಎಂದು ಸವಾಲು ಹಾಕಿದರು.

ಕಾಂಗ್ರೆಸ್‌ನಲ್ಲಿ ರಾಜಕೀಯ ಸ್ಥಾನಮಾನ ಪಡೆದ ಡಾಲು ರವಿ ಪಕ್ಷಕ್ಕೆ ಮೋಸ ಮಾಡಿ ವಿಧಾನಸಭಾ ಚುನಾವಣೆ ವೇಳೆ ಜೆಡಿಎಸ್ ಪಕ್ಷ ಸೇರಿದ್ದಾರೆ. ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿದ್ದ ನಮ್ಮಗಳ ಮೇಲೆ ರಾಜಕೀಯವಾಗಿ ತಾಲೂಕಿನ ಜನತೆಗೆ ತಪ್ಪು ಸಂದೇಶ ನೀಡಲು ಹಣ ಸಂದಾಯ ಆರೋಪ ಮಾಡಿರುವ ರವಿ ತಮ್ಮ ಆರೋಪವನ್ನು ಸಾಬೀತು ಮಾಡಿದರೆ ಸಾರ್ವಜನಿಕವಾಗಿ ಪ್ರವಾಸಿ ಮಂದಿರ ವೃತ್ತದಲ್ಲಿ ಆರೂ ಜನರು ನೇಣಿಗೇರಲು ಸಿದ್ಧರಿದ್ದೇವೆ. ಕೇವಲ ಪ್ರಚಾರಕ್ಕಾಗಿ ಸುಳ್ಳು ಆರೋಪ ಮಾಡಿರುವ ರವಿ ಆರೋಪ ಸಾಬೀತುಪಡಿಸಲಾಗದಿದ್ದರೆ ಸಾರ್ವಜನಿಕ ಜೀವನದಿಂದ ನೇಪಥ್ಯಕ್ಕೆ ಸರಿದು ತಾಲೂಕಿನಿಂದ ಜಾಗ ಖಾಲಿ ಮಾಡಬೇಕು ಎಂದರು.

ಕಾಂಗ್ರೆಸ್ ನಾಯಕರು ಚುನಾವಣೆಯಲ್ಲಿ ಪರಾಜಿತರಾಗಿರುವ ಅಭ್ಯರ್ಥಿ ಬಿ.ಎಲ್.ದೇವರಾಜು ಹಾಗೂ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಕಾಂಗ್ರೆಸ್ ಕಾರ್ಯಕರ್ತರ ಆತ್ಮಾವಲೋಕನಾ ಸಭೆ ಕರೆದು ಮತದಾರ ಬಂಧುಗಳಿಗೆ ಕೃತಜ್ಞತೆ ಸಮರ್ಪಣೆ ಮಾಡುವ ಜೊತೆಗೆ ಪಕ್ಷದ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು. ಕ್ಷೇತ್ರದ ಶಾಸಕ ಮಂಜು ಅವರು ಕೂಡ ಡಾಲು ರವಿ ಕಾಂಗ್ರೆಸ್ ಮುಖಂಡರಿಗೆ ಹಣ ನೀಡಿರುವ ಬಗ್ಗೆ ಆರೋಪ ಮಾಡಿರುವುದನ್ನು ಗಂಭೀರವಾಗಿ ಪರಿಗಣಿಸಿ ಈ ಬಗ್ಗೆ ಸ್ಪಷ್ಟನೆ ನೀಡಬೇಕು ಎಂದು ಒತ್ತಾಯ ಮಾಡಿದರು.

ಮಾನಸಗೆ ಪಿಹೆಚ್.ಡಿ



ಮಂಡ್ಯ, ಜೂ.20– ಡಾ.ಎಂ.ಸಿ.ಪದ್ಮ ಅವರ ಮಾರ್ಗದರ್ಶನದಲ್ಲಿ ಕೆ.ಎನ್. ಮಾನಸ ಅವರು ಆಂಗ್ಲ ಭಾಷೆಯಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಸಾಮಾಜಿಕ ಜಾಲತಾಣದ ಬಗೆಗಿನ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಇಂದು ವಿದ್ಯುತ್ ವ್ಯತ್ಯಯ

ಶ್ರೀರಂಗಪಟ್ಟಣ, ಜೂ.20– ಶ್ರೀರಂಗಪಟ್ಟಣದ ವಿದ್ಯುತ್ ಉಪ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಜೂ.21ರಂದು ಬೆಳಗ್ಗೆ 10 ರಿಂದ ಸಂಜೆ 5.30ಕ್ಕೆ ಶ್ರೀರಂಗಪಟ್ಟಣ, ಚಂದಗಾಲು, ಗಂಜಾಂ, ಪಾಂಡವಪುರ ವಾಟರ್ ಸಪ್ಲೆ, ನಗುವನಹಳ್ಳಿ, ಬೆಳವಾಡಿ, ಬೊಮ್ಮೂರು ಅಗ್ರಹಾರ, ಕಿರಂಗೂರು, ಕೆ.ಶೆಟ್ಟಹಳ್ಳಿ, ಶ್ರೀನಿವಾಸ ಅಗ್ರಹಾರ, ದರಸಗುಪ್ಪೆ, ಬಲ್ಲೇನಹಳ್ಳಿ, ನೆಲಮನೆ, ಮಂಡ್ಯ ವಾಟರ್ ಸಪ್ಲೆ, ಚಿಂದಗಿರಿಕೊಪ್ಪಲು ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸೀಟಿಗಾಗಿ ಜುಟ್ಟು ಹಿಡಿದು ಬಡಿದಾಡಿಕೊಂಡ ಮಹಿಳೆಯರು!

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ಶಕ್ತಿ ಯೋಜನೆ ಹೆಣ್ಣು ಮಕ್ಕಳಿಗೆ ಭಾರೀ ಲಾಭ ಕೊಟ್ಟಿದೆ. ಆದರೆ ಹಲವೆಡೆ ಪ್ರಯಾಣಿಕರಿಗೆ ಅನೇಕ ರೀತಿಯ ಸಮಸ್ಯೆಗಳು ಎದುರಾಗಿವೆ. ಮಹಿಳಾ ಪ್ರಯಾಣಿಕರ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕೆಲವು ಗೊಂದಲಗಳು ಉಂಟಾಗುತ್ತಿವೆ. ತಳ್ಳಾಟ, ನೂಕಾಟ ಸೇರಿದಂತೆ ಜಡೆ ಜಗಳ ಸಹ ನಡೆದಿದೆ. ಕೆಲವು ಭಾಗಗಳಲ್ಲಿ ತಳ್ಳಾಟ, ನೂಕಾಟದಿಂದ ಬಸ್ ಬಾಗಿಲು, ಕಿಟಕಿಯ ಸರಪಳಿ ತುಂಡಾಗಿ ಬಂದಿದೆ.

ಒಂದನೇ ಪುಟದಿಂದ

ಜೈಲಿಗೆ ಹಾಕಿ...

ಮಕ್ಕಳ ಕಳ್ಳರು, ಗೋಮಾಂಸ ಸಾಗಿಸುವವರು...ಇತ್ಯಾದಿ ಸುಳ್ಳು ಸುದ್ದಿಗಳನ್ನು ಹರಡಿಸಿ ಕಳೆದ ಬಾರಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸುವ ಪ್ರಯತ್ನ ಮಾಡಿದ್ದರು. ಈ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ ಜನತೆ ಬಿಜೆಪಿ ಮತ್ತು ಸಂಘ ಪರಿವಾರವನ್ನು ಸ್ಪಷ್ಟವಾಗಿ ಮತ್ತು ಅಷ್ಟೆ ನಿಷ್ಠುರವಾಗಿ ತಿರಸ್ಕರಿಸಿದ್ದಾರೆ.

ಆದರೆ ದೇಶದ ಪ್ರಜಾಪ್ರಭುತ್ವದ ಉಳಿವಿಗೆ ಅತ್ಯಂತ ಮಹತ್ವದ್ದಾಗಿರುವ 2024ರ ಲೋಕಸಭಾ ಚುನಾವಣೆಗೆ ನಾವು ಸಜ್ಜಾಗುತ್ತಿರುವ ಹೊತ್ತಿನಲ್ಲಿ ಸುಳ್ಳು ಸುದ್ದಿ, ವದಂತಿಗಳ ಮೂಲಕ ಗುಂಪು ಹಲ್ಲೆ, ಗಲಭೆಗಳನ್ನು ಸೃಷ್ಟಿಸುವ ಪ್ರಯತ್ನಗಳು ನಡೆಯಬಹುದು ಎನ್ನುವ ಸೂಚನೆಗಳೂ ಕಾಣಿಸುತ್ತಿವೆ. ಹೀಗಾಗಿ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ. ಈ ಹಿಂದೆ ಬೆಂಗಳೂರು ನಗರ ಪೊಲೀಸ್ ಕಮಿಷನರೇಟ್ ಮತ್ತು ಪೊಲೀಸ್ ಪ್ರಧಾನ ಕಚೇರಿಯಲ್ಲೇ ಒಂದು ತಾಂತ್ರಿಕ ತಂಡ ಫೇಕ್ ನ್ಯೂಸ್‌ಗಳನ್ನು ಪತ್ತೆ ಹಚ್ಚಿ, ಫ್ಯಾಕ್ಟ್‌ಚೆಕ್ ಮಾಡಿ, ಜನರನ್ನು ಎಚ್ಚರಿಸುವ, ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕೆಲಸ ನಡೆಯುತ್ತಿತ್ತು.

ಆದರೆ, ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ ಫ್ಯಾಕ್ಟ್ ಚೆಕ್ ಮಾಡುವುದನ್ನು ಬಂದ್ ಮಾಡಿಸಿದೆ. ಇದನ್ನು ಮತ್ತೆ ಆರಂಭಿಸಬೇಕು. ಸೈಬರ್ ಪೊಲೀಸರು ಫೇಕ್ ನ್ಯೂಸ್‌ಗಳ ಮೂಲಗಳನ್ನು ಪತ್ತೆ ಹಚ್ಚಲು ಸರ್ವಸನ್ನದ್ಧವಾಗಿ ಕೆಲಸ ಮಾಡಬೇಕು. ಪ್ರತೀ ತಿಂಗಳು ಈ ಬಗ್ಗೆ ವರದಿಯನ್ನು ನೀಡಬೇಕು ಎಂದು ಮುಖ್ಯಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ನಮ್ಮ ಬೆಂಬಲವಿಲ್ಲ


ದರ ಪರಿಷ್ಕರಣೆ ಮಾಡಿದೆ ಎಂದು ಸುರೇಶ್ ಕುಮಾರ್ ಜೈನ್ ತಿಳಿಸಿದ್ದಾರೆ. ಕಳೆದ 23 ವರ್ಷದ ಇತಿಹಾಸ ದಲ್ಲಿ ಕೆಇಆರ್‌ಸಿ ದರ ನಿರ್ಧಾರಣೆಯನ್ನು ಪುನಃ ಪರಿಷ್ಕರಿಸಿದ ಇತಿಹಾಸ ಇಲ್ಲ. ಅಷ್ಟೆ ಅಲ್ಲದೆ ಸರ್ಕಾರ ಕೂಡ ಈ ಬಗ್ಗೆ ಮಧ್ಯ ಪ್ರವೇಶಿಸಲು ಸಾಧ್ಯವಿಲ್ಲ. ಪ್ರವೇಶಿಸುವುದೂ ಇಲ್ಲ ಎಂದರು. ಈ ಕಾರಣದಿಂದ ನಾವು ಬಂದ್‌ನಲ್ಲಿ ಭಾಗವಹಿಸುವುದಿಲ್ಲ ಹಾಗೂ ಬೆಂಬಲಿಸುವುದಿಲ್ಲ ಎಂದು ಜೈನ್ ಹೇಳಿದ್ದಾರೆ.

ವಿಶ್ವಮಾನ್ಯ ನಮ್ಮ ಮೈಸೂರು ಯೋಗ ಪರಂಪರೆ

ಜೂನ್ 21, ವಿಶ್ವ ಯೋಗ ದಿನಾಚರಣೆ ಸಂಭ್ರಮ. ಈ ಸಂದರ್ಭ ಇಂದು ಭಾರತಕ್ಕೆ ಅದರಲ್ಲೂ ನಮ್ಮ ಮೈಸೂರಿಗೆ ಯೋಗದಲ್ಲಿ ವಿಶ್ವಮಾನ್ಯತೆಯನ್ನು ತಂದುಕೊಟ್ಟ ಯೋಗ ಗುರುಗಳು, ಅವರು ಕ್ರಮಿಸಿದ ಹಾದಿಯ ಸಿಂಹಾವಲೋಕನ ಈ ಲೇಖನದ ವಸ್ತು. ಯೋಗದ ಮಹತ್ವ ಇಂದು ವಿಶ್ವದಾದ್ಯಂತ ಪಸರಿಸಿ ಯೋಗ ವಿಶ್ವಮಾನ್ಯವಾಗಿದೆ. ಅದರಲ್ಲೂ ಮೈಸೂರು "ಯೋಗ ನಗರಿ"ಯೆಂಬ ಅಭಿದಾನಕ್ಕೆ ಪಾತ್ರವಾಗಿ ವಿಶ್ವ ಮನ್ನಣೆ ಗಳಿಸಿರುವುದು ಮೈಸೂರಿಗರಾದ ನಮಗೆಲ್ಲಾ ಹೆಮ್ಮೆಯ ಸಂಗತಿಯೇ ಆಗಿದೆ.


■ ಎನ್.ಅನಂತ
ಯೋಗಶಿಕ್ಷಕರು, ಮೈಸೂರು
ಮೊ.9743769403

ಶ್ರೀ ತಿರುಮಲೆ ಕೃಷ್ಣಮಾಚಾರ್ಯ



ಯೋಗಕ್ಕೆ ನೆಲೆ–ಬೆಲೆ ಇಲ್ಲದ ಅಂದಿನ ಕಾಲಮಾನದಲ್ಲಿ ಅತ್ಯಂತ ದೃಢ ವಿಶ್ವಾಸದಿಂದ ಯೋಗದ ಸಸಿಯನ್ನು ನೆಟ್ಟ ಕೀರ್ತಿ ಶ್ರೀ ತಿರುಮಲೆ ಕೃಷ್ಣಮಾಚಾರ್ಯರಿಗೆ ಸಲ್ಲುತ್ತದೆ. ಯೋಗವನ್ನು ಸ್ವತಃ ತಂದೆಯವರಿಂದ ಬಾಲ್ಯಾವಸ್ಥೆಯಲ್ಲಿಯೇ ಅಭ್ಯಸಿಸಿ, ಯೋಗದ ಮಹತ್ವವನ್ನು ಮನಗಂಡಿದ್ದ ಶ್ರೀ ಕೃಷ್ಣಮಾಚಾರ್ಯರಿಗೆ ಯೋಗ ಮುಂದೊಂದು ದಿನ ಇಡೀ ವಿಶ್ವವನ್ನೇ ವ್ಯಾಪಿಸುವುದೆಂಬ ದೃಢ ವಿಶ್ವಾಸವಿತ್ತು. ಅವರು ಅಂದು ಮೈಸೂರಿನಲ್ಲಿ ನೆಟ್ಟ ಯೋಗದ ಸಸಿ, ಮುಂದೆ ಮಹಾವೃಕ್ಷವಾಗಿ ರೂಪು ತಳೆದದ್ದೇ ಒಂದು ಆಕಸ್ಮಿಕ ಎನ್ನಬಹುದು. ರಾಜಪ್ರಭುತ್ವ ಕೊನೆಗೊಂಡು ಪ್ರಜಾಪ್ರಭುತ್ವ ನೆಲೆಗೊಂಡ ಕಾಲಮಾನವದು. ರಾಜಾಶ್ರಯದಿಂದ ಬದುಕು ಕಟ್ಟಿಕೊಂಡಿದ್ದ ಕೃಷ್ಣಮಾಚಾರ್ಯರು ಅದು ತಪ್ಪಿದಾಗ ಅನ್ಯ ಮಾರ್ಗವಿಲ್ಲದೆ ಮೈಸೂರು ತೊರೆದು ಜೀವನೋಪಾಯಕ್ಕಾಗಿ ಮದ್ರಾಸಿಗೆ ಹೋಗಿ ನೆಲೆಸಬೇಕಾಗಿ ಬಂತು. ಆಗ ಅವರ ಅಗ್ರಗಣ್ಯ ಶಿಷ್ಯರುಗಳಲ್ಲಿ ಪ್ರಮುಖರೂ ಸ್ವತಃ ಭಾವಮೈದುನನಾದ ಬಿಕೆಎಸ್ ಐಯ್ಯಂಗಾರ್ ತಮ್ಮ ಗುರುಗಳ ಆಣತಿಯ ಮೇರೆಗೆ ಯೋಗ ತರಗತಿಗಳನ್ನು ನಡೆಸಲು ಪುಣೆಗೆ ಬಂದರು.

ಬಿಕೆಎಸ್ ಐಯ್ಯಂಗಾರ್



ಆಗ 1937ರ ಇಸವಿ. ಬಿಕೆಎಸ್ ಐಯ್ಯಂಗಾರ್ ಅವರಿಗೆ ಕೇವಲ 19ರ ಹರೆಯ. ಮೈಸೂರಿನಿಂದ ಪುಣೆಗೆ ಬಂದು ನೆಲೆಸಿದ ಐಯ್ಯಂಗಾರರ ಮುಂದಿದ್ದ ಹಾದಿ ಹೂವಿನ ಹಾಸಿನಂತಿರದೆ ಕಲ್ಲು–ಮುಳ್ಳುಗಳೇ ತುಂಬಿದ್ದ ದುರ್ಗಮ ಮಾರ್ಗವಾಗಿತ್ತು. ಅಪರಿಚಿತ ಜಾಗ, ಸಂವಹನಕ್ಕೆ ತೊಡಕಾದ ಭಾಷೆ, 10ನೇ ತರಗತಿಗೆ ಮೊಟಕಾಗಿದ್ದ ವಿದ್ಯಾಭ್ಯಾಸ ಇದು ಅವರ ಆತ್ಮವಿಶ್ವಾಸವನ್ನು ಕುಗ್ಗಿಸಿದ್ದೂ ಉಂಟು. ಒಮ್ಮೊಮ್ಮೆ ದಿನಕ್ಕೆ ಒಂದೇ ಬಾರಿ ಊಟ, ನೀರು ಕುಡಿದೇ ಕೆಲ ದಿನಗಳನ್ನು ಕಳೆದದ್ದೂ ಇದೆ. ಇವೆಲ್ಲ ಇದ್ದರೂ ಯೋಗದಲ್ಲಿನ ಶ್ರದ್ಧೆ ಮಾತ್ರ ಐಯ್ಯಂಗಾರ್ ಅವರಿಗೆ ಕಡಿಮೆಯಾಗಲಿಲ್ಲ. ಆ ದಿನಗಳಲ್ಲಿ ಯೋಗ ಏನೇನೂ ಜನಪ್ರಿಯವಾಗಿರಲಿಲ್ಲ. ಆದರೆ ಐಯ್ಯಂಗಾರರು ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಆಸನಗಳನ್ನು ಕಲಿಸುತ್ತಿದ್ದ ರೀತಿ ಒಬ್ಬರಿಂದ ಒಬ್ಬರಿಗೆ ಹರಡಿ ಯೋಗವನ್ನು ಕಲಿಯಲು ಬರುವವರ ಸಂಖ್ಯೆ ಹೆಚ್ಚಿತು.

ಕೃಷ್ಣಮಾಚಾರ್ಯರು ತಮಗೆ ಕಲಿಸಿದ ಯೋಗವಿದ್ಯೆಯನ್ನು ಪರಿಷ್ಕರಿಸಿ ತಮ್ಮದೇ ಆದ ವಿನೂತನವಾದ ಇಟ್ಟಿಗೆ, ಹಗ್ಗ ಮುಂತಾದ ಪರಿಕರಗಳನ್ನು ಬಳಸಿ ಸುಲಭವಾಗಿ ಯೋಗಾಭ್ಯಾಸ ಮಾಡುವ ನೂತನ ವಿಧಾನವನ್ನು ಆವಿಷ್ಕರಿಸಿದ ಹೆಗ್ಗಳಿಕೆ ಬಿಕೆಎಸ್ ಐಯ್ಯಂಗಾರ್ ಅವರದಾಯಿತು. ಅದರಲ್ಲಿ ಅವರು ಯಶಸ್ಸನ್ನೂ ಕಂಡರು. ಅದೇ ಮುಂದೆ "ಐಯ್ಯಂಗಾರ್ ಯೋಗ" ಎಂದೇ ವಿಶ್ವ ವಿಖ್ಯಾತವಾಯಿತು.


ಕೇವಲ ಐದಾರು ವರ್ಷಗಳಲ್ಲೇ ಐಯ್ಯಂಗಾರರು ಉತ್ತಮ ಯೋಗ ಶಿಕ್ಷಕರೆನಿಸಿದರು. ಇಂಗ್ಲೀಷ್, ತಮಿಳು, ಮರಾಠಿ ಮುಂತಾದ ಭಾಷೆಗಳಲ್ಲೂ ನಿರರ್ಗಳವಾಗಿ ಉಪನ್ಯಾಸ ಮಾಡುವ ಮಟ್ಟಿಗೆ ಪ್ರಾವೀಣ್ಯತೆ ಗಳಿಸಿದರು.

ಸಾಧನೆಯ ಹಾದಿಯಲ್ಲಿ ಸಾಕಷ್ಟು ಕ್ರಮಿಸಿದ್ದರೂ ಬಿಕೆಎಸ್ ಐಯ್ಯಂಗಾರ್ ಪುಣೆಯಿಂದಾಚೆಗೆ ಜನಪ್ರಿಯರಾಗಿರಲೇ ಇಲ್ಲ. 1952ರಲ್ಲಿ ವಿಶ್ವವಿಖ್ಯಾತ ವಯಲಿನ್ ವಾದಕ ಯಹೂದಿ ಮೆನುಹಿನ್ ಎಂಬುವರ ಸಂಪರ್ಕ ಐಯ್ಯಂಗಾರ್ ಅವರಿಗೆ ದೊರೆತದ್ದೇ ಅವರ ಜೀವನದಲ್ಲಿ ಮಹತ್ತರ ಬದಲಾವಣೆಗೆ ಕಾರಣೀಭೂತವಾಯಿತು. ಅದು ಕೇವಲ ಐಯ್ಯಂಗಾರ್ ಅವರ ಜೀವನಕ್ಕೆ ಮಾತ್ರ ಸೀಮಿತವಾಗದೆ ಇಡೀ ಭಾರತಕ್ಕೂ ಅನ್ವಯಿಸಿದ ಘಟನೆಯೂ ಆಗಿತ್ತು ಮೆನುಹಿನ್ ಅವರ ಸಹಾಯದಿಂದ ಲಂಡನ್, ಸ್ವಿಡ್ಜರ್‌ಲ್ಯಾಂಡ್, ಪ್ಯಾರಿಸ್ ಮತ್ತು ವಿಶ್ವದ ನಾನಾ ಕಡೆ ಯೋಗ ಬೋಧನೆಗೆ ವ್ಯವಸ್ಥೆ ಕಲ್ಪಿಸಿದುದರ ಫಲವಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಯೋಗ ಜನಪ್ರಿಯಗೊಂಡಿತಲ್ಲದೆ ಬಿ.ಕೆ.ಎಸ್.ಐಯ್ಯಂಗಾರರೂ ಕೂಡ ಅತ್ಯಂತ ಬೇಡಿಕೆಯುಳ್ಳ ವಿಶ್ವವಿಖ್ಯಾತ ಯೋಗಾಚಾರ್ಯರಾಗಿ ಹೊರಹೊಮ್ಮಿದರು. ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಯೋಗ ಕಲಿಯುವವರ ಸಂಖ್ಯೆ ಹೆಚ್ಚಿ ಭಾರತ ವಿಶ್ವಮಾನ್ಯ ಯೋಗದ ಕೇಂದ್ರವಾಗಿ ರೂಪುಗೊಂಡಿತು.

ಮುಂದೆ ಬಿಕೆಎಸ್ ಐಯ್ಯಂಗಾರ್ ದೇಶ ವಿದೇಶಗಳಲ್ಲಿ ಪ್ರವಾಸ ಕೈಗೊಂಡು ಯೋಗದ ಪ್ರಭಾವವನ್ನು ಪ್ರಚುರಪಡಿಸಿದ್ದೇ ಅಲ್ಲದೆ ಯೋಗ ಸಂಬಂಧಿತವಾದ ಅನೇಕ ಪುಸ್ತಕಗಳನ್ನು ಬರೆದು ಪ್ರಕಟಿಸಿದರು. ಅದರಲ್ಲೂ ಅವರ "ಯೋಗ ದೀಪಿಕ" ಎಂಬ ಕನ್ನಡ ಗ್ರಂಥ, "ಲೈಟ್ ಆನ್ ಯೋಗ" ಎಂಬ ಆಂಗ್ಲಭಾಷೆಯ ಗ್ರಂಥ ವಿಶ್ವದಾದ್ಯಂತ ಅಪಾರ ಜನಮನ್ನಣೆಯನ್ನು ಗಳಿಸಿತು. ಹೀಗೆ ಬಿಕೆಎಸ್ ಐಯ್ಯಂಗಾರ್ ಸ್ವಂತ ಸಾಧನೆಯಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ನವೀನ ಕಾಲದ ವಿಜ್ಞಾನಿಗಳೂ ಕೂಡ ಒಪ್ಪುವಂತೆ ಯೋಗವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ದರು.

ವಿಶ್ವ ವಿಖ್ಯಾತವಾದ ಮೈಸೂರು ಯೋಗ: ಬಿಕೆಎಸ್ ಐಯ್ಯಂಗಾರ್ ಅವರಂತೆಯೇ ಯೋಗವನ್ನು ಪ್ರಪಂಚಾದ್ಯಂತ ಪಸರಿಸಲು ಕಾರಣಕರ್ತರಾದ ಕೃಷ್ಣಮಾಚಾರ್ಯರ ಮತ್ತೊಬ್ಬ ಪ್ರಮುಖ ಶಿಷ್ಯರೆಂದರೆ ಅವರು ಪಟ್ಟಾಭಿ ಜೋಯಿಸ್. ಬಿಕೆಎಸ್ ಐಯ್ಯಂಗಾರ್ ಪುಣೆಗೆ ಹೋಗಿ ನೆಲೆಸಿ ಯಶಸ್ವಿಯಾದರೆ, ಮೈಸೂರನ್ನೇ ತನ್ನ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು, ಯೋಗಕೇಂದ್ರವನ್ನು ತೆರೆದು, ಯೋಗವನ್ನು ವಿಶ್ವವಿಖ್ಯಾತ ಬೆಳೆಸಿದ ಸತ್ಕೀರ್ತಿ ಮಾತ್ರ ಶ್ರೀಯುತ ಪಟ್ಟಾಭಿ ಜೋಯಿಸರಿಗೆ ಸಲ್ಲುತ್ತದೆ. ಆ ಕಥೆಯೂ ರೋಚಕತೆಯುಳ್ಳದ್ದು.

ಪಟ್ಟಾಭಿ ಜೋಯಿಸ್



ಮೈಸೂರಿನ ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ಯೋಗ ಶಿಕ್ಷಕರಾಗಿ ಮಹಾರಾಜರಿಂದ ನಿಯುಕ್ತಿಗೊಂಡಿದ್ದ ಜೋಯಿಸರು ನಿವೃತ್ತಿಯ ನಂತರ ಶಿಷ್ಯರಿಂದ ಸಾಲಮಾಡಿ ಮೈಸೂರಿನ ಲಕ್ಷ್ಮೀಪುರಂನಲ್ಲಿ ಮನೆಯೊಂದನ್ನು ಖರೀದಿಸಿ ಅಲ್ಲಿಯೇ ಯೋಗಶಾಲೆ ಪ್ರಾರಂಭಿಸಿದರು. ಅಲ್ಲಿ ಅವರ ಶ್ರದ್ಧೆಯ ಶಿಕ್ಷಣಕ್ಕೆ ಶಿಷ್ಯರುಗಳ ಸಂಖ್ಯೆ ಹೆಚ್ಚತೊಡಗಿದಾಗ ತಮ್ಮ ಕೇಂದ್ರವನ್ನು ಅಷ್ಟಾಗಿ ಜನವಸತಿ ಇಲ್ಲದ ಗೋಕುಲಂ ಬಡಾವಣೆಗೆ ಸ್ಥಳಾಂತರಿಸಿದರು.

ಇದೇ ಸಂದರ್ಭ ವಿದೇಶಿ ಮೂಲದ 'ಲೈಫ್' ಎಂಬ ಮ್ಯಾಗಜಿನ್ ಸಂಪಾದಕ ಆಂಡ್ರೆ ವಾನ್ ಲಿಸ್ ಬೆತ್ ಎಂಬಾತ 1964ರಲ್ಲಿ ಮುಂಬೈಗೆ ಭೇಟಿ ನೀಡಿ ತಾನು ಯೋಗ ಕಲಿಯುವ ಆಸೆಯನ್ನು ಡಾ.ಮೋದಿ ಹಾಗೂ ಸ್ವಾಮೀಜಿಯೊಬ್ಬರ ಬಳಿ ವ್ಯಕ್ತಪಡಿಸಿದಾಗ ಅವರು ನೀಡಿದ ಸಲಹೆಯ ಮೇರೆಗೆ ನೇರವಾಗಿ ಮೈಸೂರಿನ ಗೋಕುಲಂಗೆ ಹೋಗಿ ಪಟ್ಟಾಭಿ ಜೋಯಿಸರ ಬಳಿ ಯೋಗಾಭ್ಯಾಸಕ್ಕೆ ಸೇರಿಕೊಳ್ಳುತ್ತಾರೆ. ಯೋಗಾಭ್ಯಾಸದಿಂದ ತನ್ನ ದೈಹಿಕ ಮತ್ತು ಮಾನಸಿಕ ಬದಲಾವಣೆಗಳನ್ನು ಸ್ವತಃ ಅನುಭವಿಸಿ ಸಂತೃಪ್ತನಾದ ಅವನು ತನ್ನ ಪತ್ರಿಕೆಯಲ್ಲಿ ಪಟ್ಟಾಭಿ ಜೋಯಿಸರು ಮತ್ತು ಯೋಗದ ಬಗ್ಗೆ ಬರೆದ ಲೇಖನಗಳ ದೆಸೆಯಿಂದಾಗಿ ಮುಂದೆ ಆದ ಮಹತ್ತರ ಬದಲಾವಣೆಗಳಿಗೆ ಮೈಸೂರು ಮೈ ಕೊಡವಿ ನಿಂತಿತು.

ಯೋಗದ ಬಗ್ಗೆ ಕುತೂಹಲ ಹೆಚ್ಚಿದ ವಿದೇಶೀಯರು ಅದನ್ನು ಕಲಿಯಲು ಮೈಸೂರಿಗೆ ದಂಡು ದಂಡಾಗಿ ಬರಲಾರಂಭಿಸಿದರು. ಅವರೆಲ್ಲರ ಏಕಮಾತ್ರ ಗಮನ ಶ್ರೀಯುತ ಪಟ್ಟಾಭೀ ಜೋಯಿಸರೇ ಆಗಿದ್ದರು. ಪಟ್ಟಾಭಿ ಜೋಯಿಸರು ವಿದೇಶಿಯರ ನಂಬಿಕೆಯನ್ನು ಹುಸಿಗೊಳಿಸಲಿಲ್ಲ. ಕೃಷ್ಣಮಾಚಾರ್ಯರ ವಿನ್ಯಾಸ ಪದ್ಧತಿಯನ್ನು ಕೊಂಚವೂ ಬದಲಿಸದೆ ವಿದೇಶಿ ಶಿಷ್ಯರಿಗೆ ತೆರೆದಿಟ್ಟರು. ಹಾಗಾಗಿ ವಿಶ್ವದ ನಾನಾ ಮೂಲೆಗಳಿಂದ ಪಾಶ್ಚಿಮಾತ್ಯರು ಯೋಗವನ್ನು ಕಲಿಯಲೆಂದೇ ಮೈಸೂರಿಗೆ ಅದರಲ್ಲೂ ಗೋಕುಲಂಗೆ ದಾಂಗುಡಿಯಿಡಲಾರಂಭಿಸಿದರು. ಮೈಸೂರಿನ ಗೋಕುಲಂ ವಿದೇಶಿಯರ ಪಾಲಿನ ಯೋಗದ ಕೇಂದ್ರಬಿಂದುವಾಗಿ ಮೈದಳೆದು ನಿಂತಿತು. ಶ್ರೀಪಟ್ಟಾಭಿ ಜೋಯಿಸ್ ಯೋಗದ ಮಹಾಗುರುಗಳಾಗಿ ಹೊರಹೊಮ್ಮಿದರು.

ಒಂದು ಕಾಲದಲ್ಲಿ ಜನಸಂದಣಿ ಅಷ್ಟಾಗಿ ಇರದ ಗೋಕುಲಂ ವಿದೇಶಿಯ ಯೋಗ ಪಟುಗಳಿಂದ ಕಂಗೊಳಿಸಲಾರಂಭಿಸಿತು. ಒಮ್ಮೊಮ್ಮೆ ಇದು ನಮ್ಮ ದೇಶವೋ ಇಲ್ಲ ವಿದೇಶವೋ ಎಂಬ ಭ್ರಾಂತಿ ಮೂಡಿಸುವಷ್ಟು ಬದಲಾವಣೆ ಆಗಲಾರಂಭಿಸಿತು. ಪಟ್ಟಾಭಿ ಜೋಯಿಸರಿಂದ ತುಂಬಿ ತುಳುಕಿದ ವಿದೇಶಿಯರಿಗೆ ಅಲ್ಲಿ ಪ್ರವೇಶ ಮುಗಿದಾಗ ವಿಧಿಯಿಲ್ಲದೆ ಬೇರೆ ಯೋಗ ಗುರುಗಳ ಅನ್ವೇಷಣೆಗೆ ಮುಂದಾದ ಪರಿಣಾಮ ಗೋಕುಲಂನಲ್ಲಿ ಬೇರೆ ಬೇರೆ ಯೋಗ ಗುರುಗಳ ಯೋಗಕೇಂದ್ರಗಳು ತಲೆಯೆತ್ತತೊಡಗಿದವು. ನಾನಾ ಆಯುರ್ವೇದ ಕೇಂದ್ರಗಳು, ಸಂಗೀತ, ಲಲಿತ ಕಲಾ ಕೇಂದ್ರಗಳು, ಓಷೋ ಕೇಂದ್ರಗಳು, ಕರಕುಶಲ ವಸ್ತುಗಳ ಮಳಿಗೆಗಳು ಪ್ರಾರಂಭವಾಗಿ ಗೋಕುಲಂನ ಚಿತ್ರಣವೇ ಬದಲಾಗಿ ಹೋಯಿತು. ಇದಕ್ಕೆಲ್ಲಾ ಕಾರಣೀಭೂತರಾದ ಪಟ್ಟಾಭಿ ಜೋಯಿಸರ ನಿಧನದ ನಂತರ ಅವರ ಸುಪುತ್ರಿ ಸರಸ್ವತಿ ಜೋಯಿಸ್, ಮೊಮ್ಮಗ ಶರತ್ ಜೋಯಿಸ್ ಈ ಪರಂಪರೆಯನ್ನು ಚ್ಯುತಿ ತಾರದೆ ನಡೆಸಿಕೊಂಡು ಹೋಗುತ್ತಿದ್ದಾರೆ.

ಮೈಸೂರು ಯೋಗ ಪರಂಪರೆಯ ಕೊನೆಯ ಕೊಂಡಿ ಬಿಎನ್‌ಎಸ್ ಐಯ್ಯಂಗಾರ್.

ಶ್ರೀಕೃಷ್ಣಮಾಚಾರ್ಯರ ಬಳಿ ಕೆಲ ಕಾಲ ಯೋಗ ಅಭ್ಯಸಿಸಿ, ಆನಂತರ ಪಟ್ಟಾಭಿ ಜೋಯಿಸ್ ಅವರ ಬಳಿ ದೀರ್ಘಕಾಲ ಯೋಗಶಾಸ್ತ್ರವನ್ನು ಕಲಿತು, ಆ ಪರಂಪರೆಯನ್ನೇ ಮುಂದುವರೆಸಿಕೊಂಡು ಬಂದಿರುವ ಕೀರ್ತಿ ಶ್ರೀಯುತ ಬಿ.ಎನ್. ಸುಂದರರಾಜ ಐಯ್ಯಂಗಾರ್ ಅವರದಾಗಿದೆ. ಮೈಸೂರಿನ ಪರಕಾಲಮಠದಲ್ಲಿ ಆ ಕಾಲದಲ್ಲಿಯೇ ಯೋಗಶಾಲೆ ತೆರೆದು, ದೇಶೀಯ ಹಾಗೂ ವಿದೇಶೀಯರಿಗೂ ಮೆಚ್ಚಿನ ಯೋಗ ಗುರುಗಳಾಗಿ ರೂಪುಗೊಂಡ ಬಿಎನ್‌ಎಸ್ ಐಯ್ಯಂಗಾರ್ ಅವರು ಮೈಸೂರು ಯೋಗ ಪರಂಪರೆಯ ಕೊನೆಯ ಕೊಂಡಿಯಾಗಿದ್ದು, ಇಂದಿಗೂ ನಮ್ಮೊಡನೆ ಇರುವುದು ಹೆಗ್ಗಳಿಕೆಯ ವಿಚಾರವಾಗಿದೆ. ತಮ್ಮ 96ರ ಹರೆಯದಲ್ಲಿಯೂ ಬಿಎನ್‌ಎಸ್ ಐಯ್ಯಂಗಾರ್ ಅವರು ಸಕ್ರಿಯವಾಗಿರುವುದು ಅಚ್ಚರಿ ಮೂಡಿಸುತ್ತದೆ.

ವಿದೇಶೀಯರ ಮೆಚ್ಚಿನ ಯೋಗಗುರುಗಳು: ಮೈಸೂರಿನ ಮಟ್ಟಿಗೆ ವಿದೇಶೀಯರಿಗೆ ಮೆಚ್ಚಿನ ಯೋಗಗುರುಗಳಾಗಿ ಗೋಕುಲಂನಲ್ಲಿ ಯೋಗ ಇಂಡಿಯಾದ ಭರತ್ ಶೆಟ್ಟಿ, ಪ್ರಾಣವಶ್ಯ ಯೋಗಕೇಂದ್ರದ ವಿನಯ್, ಅಷ್ಟಾಂಗ ಯೋಗ ಶಾಲೆಯ ವಿಜಯ್, ನಿರ್ವಾಣ ಯೋಗ ಕೇಂದ್ರದ ಶಶಿಕುಮಾರ್, ಪಾತಂಜಲ ಅಷ್ಟಾಂಗ ವಿನ್ಯಾಸ ಯೋಗಶಾಲೆಯ ಶೇಷಾದ್ರಿ, ಹರೀಶ್, ಅಷ್ಟಾಂಗ ಯೋಗ ಕೇಂದ್ರದ ರಮೇಶ್ ಶೆಟ್ಟಿ ಮುಂತಾದವರು ಸೇವೆ ಸಲ್ಲಿಸುತ್ತಿದ್ದಾರೆ.

ವಿದೇಶೀಯರು ಎಷ್ಟೇ ಯೋಗ ಕಲಿತು ವಿದೇಶದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರೂ ಯೋಗಗುರುಗಳ ಬೇಡಿಕೆಯೇನೂ ಕುಗ್ಗಿಲ್ಲ. ಇದಕ್ಕೆ ವಿದೇಶೀಯರಿಗೆ ನಮ್ಮ ಸಂಸ್ಕೃತಿಯ ಮೇಲಿರುವ ಅಪಾರ ಅಭಿಮಾನ, ಗೌರವವೂ ಕಾರಣವಾಗಿದೆ. ಇಂದಿಗೂ ಪ್ರತಿ ವರ್ಷ ಪಟ್ಟಾಭಿ ಜೋಯಿಸರು ಕಾಲವಾದ ಗುರುಪೂರ್ಣಿಮೆಯಂದು ಆ ದಿವ್ಯ ಸ್ಮರಣೆಗೆಂದೇ ಒಂದೆರಡು ದಿನಗಳ ಮಟ್ಟಿಗೆ ಮೈಸೂರಿಗೆ ಬಂದು, ಆ ಪುಣ್ಯಕೈಂಕರ್ಯದಲ್ಲಿ ಪಾಲ್ಗೊಂಡು ಹಿಂತಿರುಗುವ ಅಪಾರ ವಿದೇಶೀಯ ಶಿಷ್ಯರುಗಳ ಸಂಖ್ಯೆಯೇ ಇದಕ್ಕೆ ಸಾಕ್ಷಿಯಾಗಿದೆ.

ಭಾರತಕ್ಕೆ ಅದರಲ್ಲೂ ನಮ್ಮ ಮೈಸೂರಿಗೆ ಯೋಗದಲ್ಲಿ ವಿಶ್ವಮಾನ್ಯತೆಯನ್ನು ತಂದುಕೊಟ್ಟ ಪಟ್ಟಾಭಿ ಜೋಯಿಸರು ಹಾಗೂ ಬಿಕೆಎಸ್ ಐಯ್ಯಂಗಾರ್ ನಮ್ಮ ಮುಂದಿಲ್ಲದಿದ್ದರೂ ಅವರು ಹಾಕಿಕೊಟ್ಟ ಮೇಲ್ಪಂಕ್ತಿ ಮಾತ್ರ ನಮ್ಮ ಯೋಗ ಶಿಕ್ಷಕರಿಗೆ ದಾರಿದೀಪವಾಗಿದೆ.

ಸಾಮಾಜಿಕ ಭದ್ರತಾ ಯೋಜನೆಯಡಿ ಕೊಡಗಲ್ಲಿ 69,473 ಮಂದಿಗೆ ಪಿಂಚಣಿ

ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಮಾಡಲು ಡಿಸಿ ಡಾ.ಬಿ.ಸಿ.ಸತೀಶ ಸೂಚನೆ

ಜೂ.25ರ ಗಡುವು, ಆಧಾರ್ ಲಿಂಕ್ ಮಾಡದಿದ್ದಲ್ಲಿ ಪಿಂಚಣಿ ಇಲ್ಲ

ಮಡಿಕೇರಿ, ಜೂ.20– ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ, ಸಂಧ್ಯಾ ಸುರಕ್ಷಾ, ಮನಸ್ವಿನಿ ಹೀಗೆ ವಿವಿಧ ಪಿಂಚಣಿಯನ್ನು ಕೊಡಗು ಜಿಲ್ಲೆಯಲ್ಲಿ ಒಟ್ಟು 69,473 ಫಲಾನುಭವಿಗಳಿಗೆ ಈಗಾಗಲೇ ವಿತರಿಸಲಾಗಿದ್ದು, ಈ ಪಿಂಚಣಿಯನ್ನು ಸಂಬಂಧಿಸಿದ ಫಲಾನುಭವಿಗಳ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ತಿಳಿಸಿದ್ದಾರೆ.



ಆದರೆ ಜೂನ್, 2023 ರಿಂದ ಸಾಮಾಜಿಕ ಭದ್ರತಾ ಯೋಜನೆ ಮತ್ತು ಪಿಂಚಣಿಗಳ ನಿರ್ದೇಶನಾಲಯವು ಫಲಾನುಭವಿಗಳಿಗೆ ಪಾವತಿಸುತ್ತಿರುವ ಪಿಂಚಣಿಯನ್ನು ಆಧಾರ್ ನಂಬರ್ ಆಧಾರಿತ ಪಾವತಿಯನ್ನಾಗಿಸಲು ತೀರ್ಮಾನಿಸಿದ್ದು, ಈ ತೀರ್ಮಾನದಂತೆ ಆಧಾರ್ ನಂಬರನ್ನು ಬ್ಯಾಂಕ್ ಖಾತೆಗೆ ಲಿಂಕ್ ಮಾಡದೇ ಇರುವ ಎನ್‌ಪಿಸಿಐ ಮ್ಯಾಪಿಂಗ್ ಆಗದೇ ಇರುವ ಹಾಗೂ ಬ್ಯಾಂಕ್/ ಅಂಚೆ ಕಚೇರಿಯಲ್ಲಿ ಚಾಲನೆಯಲ್ಲಿಲ್ಲದಿರುವ ಖಾತೆಗಳಿಗೆ ಪಿಂಚಣಿ ಪಾವತಿಯಾಗುವುದಿಲ್ಲ. ಈ ಕಾರ್ಯವನ್ನು ಜೂ.25 ರೊಳಗೆ ಎಲ್ಲಾ ಫಲಾನುಭವಿಗಳು ಸರಿಪಡಿಸಿಕೊಳ್ಳಬೇಕಿದೆ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

ಜಿಲ್ಲೆಯಲ್ಲಿ ಅಂತಹ ಒಟ್ಟು 5,949 ಫಲಾನುಭವಿಗಳಿದ್ದು, ಈ ಫಲಾನುಭವಿಗಳ ಪಟ್ಟಿಯನ್ನು ನಿರ್ದೇಶನಾಲಯದಿಂದ ಕಳುಹಿಸಲಾಗಿದ್ದು, ತಾಲ್ಲೂಕುವಾರು ವಿವರ ಇಂತಿದೆ:

ಮಡಿಕೇರಿ 1,470, ವಿರಾಜಪೇಟೆ 976, ಪೊನ್ನಂಪೇಟೆ 888, ಕುಶಾಲನಗರ 1091 ಮತ್ತು ಸೋಮವಾರಪೇಟೆ 1524 ಇದ್ದು, ಈ ಫಲಾನುಭವಿಗಳ ಹೆಸರು ಹಾಗೂ ಮಾಹಿತಿಯು ಸಂಬಂಧಿಸಿದ ಕಂದಾಯ ನಿರೀಕ್ಷಕರ ಕಚೇರಿಗಳಲ್ಲಿ ಲಭ್ಯವಿದೆ. ಪಟ್ಟಿಯಲ್ಲಿರುವ ಫಲಾನುಭವಿಗಳು ತಮ್ಮ ಖಾತೆ ಇರುವ ಬ್ಯಾಂಕ್/ ಅಂಚೆ ಕಚೇರಿಗೆ ತೆರಳಿ ತುರ್ತಾಗಿ ಈ ಕೂಡಲೇ ತಮ್ಮ ಆಧಾರ್ ನಂಬರನ್ನು ಬ್ಯಾಂಕ್ ಖಾತೆಗೆ ಲಿಂಕ್, ಎನ್‌ಪಿಸಿಐ ಮ್ಯಾಪಿಂಗ್ ಮಾಡಿಸಿ ಹಾಗೂ ಬ್ಯಾಂಕ್/ ಅಂಚೆ ಕಚೇರಿ ಖಾತೆಯು ಚಾಲನೆಯಲ್ಲಿಲ್ಲದಿದ್ದರೆ ಈ ಖಾತೆಯನ್ನು ಫಲಾನುಭವಿಗಳು ಚಾಲನೆ ಮಾಡಿಸಿಕೊಳ್ಳುವುದು. ಅಥವಾ ಕಂದಾಯ ಪರಿವೀಕ್ಷಕರು / ಗ್ರಾಮ ಆಡಳಿತ ಅಧಿಕಾರಿಗಳಿಗೆ ಆಧಾರ್ ಪ್ರತಿ, ಬ್ಯಾಂಕ್ ಪಾಸ್ ಪುಸ್ತಕದ ಮೊದಲ ಪುಟದ ಜೆರಾಕ್ಸ್ ಪ್ರತಿ ಮತ್ತು ಆಧಾರ್‌ನೊಂದಿಗೆ ಬ್ಯಾಂಕ್ ಖಾತೆ ಲಿಂಕ್ ಮಾಡಲು ಒಪ್ಪಿಗೆ ಪ್ರತಿ ನೀಡುವಂತೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಕೋರಿದ್ದಾರೆ.

ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ



ಮಡಿಕೇರಿ, ಜೂ.20– 'ಅನ್ನಭಾಗ್ಯ' ಯೋಜನೆಯಡಿ 10 ಕೆ.ಜಿ. ಅಕ್ಕಿ ವಿತರಿಸುವ ರಾಜ್ಯ ಸರ್ಕಾರದ ಯೋಜನೆಯ ಜಾರಿಗೆ ಅಗತ್ಯವಾದ ಅಕ್ಕಿಯನ್ನು ಪೂರೈಸಲು ಕೇಂದ್ರ ಸರ್ಕಾರ ನಕಾರಾತ್ಮಕ ಧೋರಣೆ ತಳೆದಿದೆ ಎಂದು ಆರೋಪಿಸಿ ಕೊಡಗು ಜಿಲ್ಲಾ ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೊಲ್ಲೀರ ಧರ್ಮಜ ಉತ್ತಪ್ಪ ನೇತೃತ್ವದಲ್ಲಿ ಮಂಗಳವಾರ ಬೆಳಗ್ಗೆ ಜಿಲ್ಲಾಡಳಿತ ಭವನದ ಮುಂಭಾಗ ಜಿಲ್ಲೆಯ ವಿವಿಧೆಡೆಗಳಿಂದ ಆಗಮಿಸಿದ್ದ ಕಾಂಗ್ರೆಸ್ ಪ್ರಮುಖರು, ಕಾರ್ಯಕರ್ತರು ಸಮಾವೇಶಗೊಂಡು, ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗುವ ಮೂಲಕ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಸರಕಾರ ರಾಜ್ಯಕ್ಕೆ ಮಲತಾಯಿ ಧೋರಣೆ ತೋರುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸರಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ 5 ಗ್ಯಾರಂಟಿಗಳನ್ನು ಘೋಷಿಸಿತ್ತು. ಅದರಂತೆ ಅಧಿಕಾರಕ್ಕೆ ಬಂದ ಬಳಿಕ ಅವುಗಳನ್ನು ಈಡೇರಿಸಲು ಮೊದಲ ಶಾಸಕಾಂಗ ಸಭೆಯಲ್ಲೆ ಅನುಮೋದನೆಯನ್ನು ನೀಡಲಾಗಿದೆ. ಗ್ಯಾರಂಟಿಗಳಲ್ಲಿ ಒಂದಾಗಿರುವ ಅನ್ನಭಾಗ್ಯ ಯೋಜನೆಯಡಿ ಪ್ರತಿ ಬಿಪಿಎಲ್ ಪಡಿತರದಾರರಿಗೆ ತಲಾ 10 ಕೆ.ಜಿ. ಅಕ್ಕಿ ವಿತರಿಸಲು ಸರ್ಕಾರ ಕಾರ್ಯ ಯೋಜನೆಗಳನ್ನು ರೂಪಿಸಿದೆ. ಆದರೆ, ಇದು ಜಾರಿಯಾಗಬಾರದು ಎಂಬ ದೃಷ್ಟಿಯಿಂದ ಕೇಂದ್ರ ಸರ್ಕಾರ ಯೋಜನೆಯ ಪೂರೈಕೆಗೆ ಅಗತ್ಯವಾದ ಅಕ್ಕಿ ವಿತರಣೆಗೆ ಅಸಹಕಾರ ತೋರುತ್ತಿರುವುದಾಗಿ ತೀವ್ರ ಅಸಮಾಧಾನ ಹೊರ ಹಾಕಿದರು.

ಅನ್ನಭಾಗ್ಯ ಯೋಜನೆಯನ್ನು ಇದೇ ಜುಲೈ 1ರಿಂದ ಜಾರಿಗೊಳಿಸುವುದಾಗಿ ರಾಜ್ಯ ಸರ್ಕಾರ ಘೋಷಣೆ ಮಾಡಿತ್ತು. ಅದಕ್ಕೆ ಅನುಗುಣವಾಗಿ ಕೇಂದ್ರ ಆಹಾರ ನಿಗಮದೊಂದಿಗೆ ಪತ್ರ ವ್ಯವಹಾರ ನಡೆಸಿ ಒಪ್ಪಿಗೆಯನ್ನು ಪಡೆಯಲಾಗಿತ್ತು. ಆದರೆ ಈಗ ಕೇಂದ್ರ ಸರ್ಕಾರದ ಚಿತಾವಣೆಯ ಫಲವಾಗಿ ಅನ್ನಭಾಗ್ಯ ಯೋಜನೆಯನ್ನು ವಿಫಲಗೊಳಿಸಲು ಅಕ್ಕಿಯನ್ನು ಒದಗಿಸುತ್ತಿಲ್ಲವೆಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಕಾಂಗ್ರೆಸ್ ವಕ್ತಾರ ಟಿ.ಪಿ.ರಮೇಶ್, ಪ್ರಮುಖರಾದ ಕೊಲ್ಯದ ಗಿರೀಶ್, ಸುರಯ್ಯಾ ಅಬ್ರಾರ್, ನಗರಸಭಾ ಮಾಜಿ ಅಧ್ಯಕ್ಷೆ ಕೂಡಕಂಡಿ ಕಾವೇರಮ್ಮ ಸೋಮಣ್ಣ, ಜುಲೇಕಾಬಿ, ಕೆ.ಜೆ. ಪೀಟರ್, ಪ್ರಕಾಶ್ ಆಚಾರ್ಯ, ರಾಜೇಶ್ ಯಲ್ಲಪ್ಪ, ಮಂಡೀರ ಸದಾ ಮುದ್ದಪ್ಪ, ಪುಷ್ಪ ಪೂಣಚ್ಚ, ಕೆ.ಯು. ಅಬ್ದುಲ್ ರಜಾಕ್, ಬಿ.ಎನ್. ಪ್ರಥ್ಯು, ಹಂಸ, ಎಸ್.ಐ. ಮುನೀರ್ ಅಹಮ್ಮದ್, ಉದಯ ಕುಮಾರ್, ಚಂದ್ರಶೇಖರ್, ಕಾನೆಹಿತ್ಲು ಮೊಣ್ಣಪ್ಪ, ಹೊಸೂರು ಸೂರಜ್ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಕುಶಾಲನಗರ, ಜೂ.20– ನಂಜರಾಯ ಪಟ್ಟಣ ಮತ್ತು ರಂಗಸಮುದ್ರ ವ್ಯಾಪ್ತಿಯಲ್ಲಿ 20 ಲಕ್ಷ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗ್ರಾಪಂ ಅಧ್ಯಕ್ಷ ಸಿ.ಎಲ್.ವಿಶ್ವ ನೇತೃತ್ವದ ಆಡಳಿತ ಮಂಡಳಿ ಪದಾಧಿಕಾರಿಗಳು ಚಾಲನೆ ನೀಡಿದರು.

ದುಬಾರೆ ಪ್ರವಾಸಿತಾಣದಲ್ಲಿ ಪಾರ್ಕಿಂಗ್‌ಗೆ ಅನುಕೂಲವಾಗುವಂತೆ 3 ಲಕ್ಷ ವೆಚ್ಚದಲ್ಲಿ ಸೋಲಿಂಗ್, ಗ್ರಾಪಂ ಆವರಣದಲ್ಲಿ 1.50 ಲಕ್ಷದಲ್ಲಿ ವಾಹನ ಪಾರ್ಕಿಂಗ್ ಶೆಡ್, 1 ಲಕ್ಷದಲ್ಲಿ ಮಸೀದಿ ಆವರಣ ಗೋಡೆ ನಿರ್ಮಾಣ, 1.30 ಲಕ್ಷದಲ್ಲಿ ಗುಳಿಗ ದೇವಾಲಯ ಬಳಿ ಕೊಠಡಿಗೆ ಚಾವಣಿ ಅಳವಡಿಕೆ, ಅಯ್ಯಂಡ್ರ ಬೋಪಯ್ಯ ಜಮೀನು ದಾರಿಯಲ್ಲಿ 80 ಸಾವಿರದಲ್ಲಿ ಕಾಲು ಸೇತುವೆ ನಿರ್ಮಾಣ, ವಿಶೇಷಚೇತನರಾದ ಪಿ.ಸುಜಿತ್, ವಿನೋದ್ ಅವರ ಮನೆಗೆ ಸಂಪರ್ಕ ಕಲ್ಪಿಸುವ ಕಾಂಕ್ರೀಟ್ ರಸ್ತೆ ನಿರ್ಮಾಣ, 2 ಲಕ್ಷದಲ್ಲಿ ಪಟೇಲ್ ಮೋಹನ್, ಶಿವಣ್ಣ, ಕಾಳಿಂಗ ಅವರ ಮನೆಗೆ ಸಂಪರ್ಕ ಕಲ್ಪಿಸುವ ರಸ್ತೆ ಸೇರಿದಂತೆ ಚಿನ್ನೂರು, ದಾಸವಾಳ, ದುಬಾರೆ, ಗುಳಿಗ ದೇವಾಲಯ ಹಾಗೂ ಮಸೀದಿ ವ್ಯಾಪ್ತಿಯ ರಸ್ತೆಗಳು ಒಳಗೊಂಡಂತೆ ವಿವಿಧೆಡೆ ಸಂಪರ್ಕ ರಸ್ತೆಗಳ ಅಭಿವೃದ್ಧಿಗೆ ಕಾಮಗಾರಿ ಕೈಗೊಳ್ಳಲಾಗಿದೆ.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಗ್ರಾಪಂ ಅಧ್ಯಕ್ಷ ಸಿ.ಎಲ್.ವಿಶ್ವ, ಪ್ರಸಕ್ತ ಆಡಳಿತ ಮಂಡಳಿ ಎರಡೂವರೆ ವರ್ಷದಲ್ಲಿ 85 ರಿಂದ 90 ಲಕ್ಷ ವೆಚ್ಚದ ಅಭಿವೃದ್ಧಿ ಕಾಮಗಾರಿ ಕೈಗೊಂಡಿದೆ. ಸದ್ಯದಲ್ಲಿಯೇ ರಂಗಸಮುದ್ರ ಬ್ಲಾಕ್‌ನಲ್ಲಿ ಕೂಡ 13 ಲಕ್ಷ ರೂ. ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು. ಪಂಚಾಯಿತಿಗೆ ಆದಾಯ ಕ್ರೋಢೀಕರಣ ಉದ್ದೇಶದಿಂದ ಪ್ರವಾಸಿ ತಾಣ ದುಬಾರೆಯಲ್ಲಿ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಜಾತಿ, ಧರ್ಮ ರಹಿತವಾದ ಪ್ರಾಮಾಣಿಕ ಸೇವೆ ಒದಗಿಸುವಲ್ಲಿ ನಮ್ಮ ಆಡಳಿತ ಮಂಡಳಿ ಯಶಸ್ವಿಯಾಗಿದೆ ಎಂದರು. ಗ್ರಾಪಂ ಉಪಾಧ್ಯಕ್ಷೆ ಸಮೀರ, ಸದಸ್ಯರಾದ ಜಾಜಿ ತಮ್ಮಯ್ಯ, ಕುಸುಮ, ಗಿರಿಜಮ್ಮ, ಪಿಡಿಒ ಕಲ್ಪ, ಕಾರ್ಯದರ್ಶಿ ಶೇಷಗಿರಿ, ಗುತ್ತಿಗೆದಾರ ಅಹಮ್ಮದ್ ಸೇರಿದಂತೆ ಆಯಾ ವ್ಯಾಪ್ತಿಯ ಗ್ರಾಮಸ್ಥರು ಇದ್ದರು.

ಜೀವನದ ಉಲ್ಲಾಸಕ್ಕೆ ಕಲೆ ಸಹಕಾರಿ: ಶಶಿಧರ್ ಕೋಟೆ



ವಿರಾಜಪೇಟೆ, ಜೂ.20– ಜೀವನದಲ್ಲಿ ಉಲ್ಲಾಸದಿಂದಿರಲು ಕಲೆ ಸಹಕಾರಿ ಎಂದು ನಟ, ಗಾಯಕ ಶಶಿಧರ್ ಕೋಟೆ ಹೇಳಿದರು.

ವಿರಾಜಪೇಟೆಯ ನಾಟ್ಯ ಮಯೂರಿ ನೃತ್ಯ ಶಾಲೆಯ ವತಿಯಿಂದ ನಗರದ ಕಾವೇರಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಸಾಂಸ್ಕೃತಿಕ ಸಮಾರಂಭ ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ 'ಕರುನಾಡ ನಿಧಿ' ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಭಾಷೆಯನ್ನು ಪ್ರೀತಿಸಿ ಆದರೆ ಕನ್ನಡವನ್ನು ಆರಾಧಿಸಬೇಕು. ಇಲ್ಲಿನ ನಾಟ್ಯ ಮಯೂರಿ ನೃತ್ಯ ಶಾಲೆಯ ಸಂಸ್ಥಾಪಕಿ, ಪ್ರೇಮಾಂಜಲಿ ಆಚಾರ್ಯ ಅವರ ವಿದ್ಯಾರ್ಥಿ ವೃಂದ ಸಾಧನೆಯ ಮೆಟ್ಟಿಲನ್ನು ಹತ್ತಿದ್ದಾರೆ. ಇದು ನಿರಂತರವಾಗಿ ಮುಂದುವರೆಯಲಿ ಎಂದು ಆಶಿಸಿದರು.

ಅಂತಾರಾಷ್ಟ್ರೀಯ ಮಾಜಿ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ ಮಾತನಾಡಿ, ಸಾಧನೆ ಮಾಡುವ ಗುರಿ ನಿರ್ದಿಷ್ಟವಾಗಿರಬೇಕು ಎಂದರು. ರಂಗಭೂಮಿ ಕಲಾವಿದ ಪತ್ರಕರ್ತ, ನಟ ಕೆಂಚನೂರು ಶಂಕರ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕಲೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರಲ್ಲದೆ. ಎಲ್ಲಾ ತಾಲೂಕುಗಳಲ್ಲಿ ಕಲಾಮಂದಿರ ನಿರ್ಮಾಣವಾಗಬೇಕು ಹಾಗೂ ಅಸಕ್ತ, ಅಸಹಾಯಕ ಕಲಾವಿದರಿಗೆ ಸಹಾಯ ಹಸ್ತ ನೀಡಲು ಸರಕಾರ ಗಮನಹರಿಸಬೇಕು ಎಂದರು.

ಈ ಸಂದರ್ಭ ಗಾಯಕ ಶಶಿಧರ್ ಕೋಟೆ, ಕಾಂತಾರ ಸಿನಿಮಾ ಖ್ಯಾತಿಯ ಬಾಸುಮ, ಸತೀಶ್ ಆಚಾರಿ, ಕುಂದಾಪುರ ಶನೇಶ್ವರ ದೇವಸ್ಥಾನದ ಧರ್ಮದರ್ಶಿ ಡಾ. ಅಶೋಕ್ ಶೆಟ್ಟಿ, ಮಹೋನಿ ಶೋಭಾ, ಡಾ. ಜ್ಯೋತಿ ಶ್ರೀನಿವಾಸ್, ದಿನಕರ್ ಶೆಟ್ಟಿ, ಸುನೀಲ್ ಮಂಜುನಾಥ್ ರೇವಂಕರ್, ಮಾದಂಡ ತಿಮ್ಮಯ್ಯ, ಪೂಜಾ ರವೀಂದ್ರ ಶೋಭಾ, ಗಣಪತಿ ಹೋಬಳಿದಾರ್, ಸಿ.ಲಕ್ಷ್ಮಣ್ ಜ್ಞಾನ ರೈ, ಪೋಯಂಗಡ ಅಯ್ಯಪ್ಪ, ರವಿಚಂದ್ರನ್, ಮಹಿಮಾ ಕುಂದಾಪುರ, ಸತೀಶ್ ಕಲ್ಯಾಣಪುರ ಅವರಿಗೆ 'ಕರುನಾಡ ನಿಧಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕರ್ನಾಟಕ ರಕ್ಷಣಾ ವೇದಿಕೆಯ ವಿರಾಜಪೇಟೆ ತಾಲೂಕು ಅಧ್ಯಕ್ಷ ಅನಿಲ್ ಕುಮಾರ್, ಸಾಹಿತಿಗಳಾದ ರಜಿತ ಕಾರ್ಯಪ್ಪ, ಪುಷ್ಪಲತಾ ಶಿವಪ್ಪ, ಶಿಕ್ಷಕರಾದ ಲವಿನ್ ಲೋಪೇಸ್, ವಿ.ಸಿ. ದೀಪಕ್, ಧರ್ಮದರ್ಶಿ ಬಾಬಾ ಶಂಕರ್ ಹಾಗೂ ನೃತ್ಯ ಕಲಾವಿದೆಯರನ್ನು ಸನ್ಮಾನಿಸಲಾಯಿತು. ನಾಟ್ಯ ಮಯೂರಿ ನೃತ್ಯ ಶಾಲೆಯ ಸಂಸ್ಥಾಪಕಿ ವಿದೂಷಿ ಪ್ರೇಮಾಂಜಲಿ ಆಚಾರ್ಯ ಪ್ರಾಸ್ತಾವಿಕವಾಗಿ ಮಾತನಾಡಿದರು. ನೃತ್ಯ ಶಾಲೆಯ ಟ್ರಸ್ಟಿಗಳು, ಉಪಸ್ಥಿತರಿದ್ದರು.

ಪಿಎಂಇಜಿಪಿ ಯೋಜನೆಯಡಿ ಅರ್ಜಿ ಆಹ್ವಾನ

ಮಡಿಕೇರಿ, ಜೂ.20– ಪ್ರಸಕ್ತ (2023–24) ಸಾಲಿನ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ (ಪಿಎಂಇಜಿಪಿ) ಕಾರ್ಯಕ್ರಮದಡಿಯಲ್ಲಿ ಕೈಗಾರಿಕೆ / ಸೇವಾ ಘಟಕಗಳಿಗೆ ಸಾಲ ಸೌಲಭ್ಯ ಪಡೆಯಲು ಆನ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ. 18 ವರ್ಷ ತುಂಬಿದ ಪಟ್ಟಣ/ ಗ್ರಾಮಾಂತರ ಪ್ರದೇಶದ ಅರ್ಹ ಅಭ್ಯರ್ಥಿಗಳು www.kvic.org.in (pmegp online application) ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ದೂ.ಸಂ.08272–228431/ 228746 ಅನ್ನು ಸಂಪರ್ಕಿಸಬಹುದು.

ಇಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮಡಿಕೇರಿ, ಜೂ.20– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ ವತಿಯಿಂದ 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು "ವಸುದೈವ ಕುಟುಂಬಕ್ಕಾಗಿ ಯೋಗ' 'ಹರ್ ಆಂಗನ್ ಯೋಗ" ಎಂಬ ಘೋಷ ವಾಕ್ಯದೊಂದಿಗೆ ಜೂನ್, 21 ರಂದು ಬೆಳಗ್ಗೆ 6.30 ಗಂಟೆಗೆ ನಗರದ ಕೆಳಗಿನ ಗೌಡ ಸಮಾಜದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಬೋಸರಾಜು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಡಾ.ಮಂಥರ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಶಾಸಕ ಎ.ಎಸ್.ಪೊನ್ನಣ್ಣ, ಸಂಸದ ಪ್ರತಾಪ್‌ಸಿಂಹ, ವಿಧಾನಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಬೋಜೇಗೌಡ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಪಂ ಆಡಳಿತಾಧಿಕಾರಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬು ಕುಮಾರ್, ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಜಿಪಂ ಸಿಇಒ ಡಾ.ಎಸ್.ಆಕಾಶ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾ ದೇವಿ ಇತರರು ಪಾಲ್ಗೊಳ್ಳಲಿದ್ದಾರೆ.

ಅಕ್ಕಿ ಕೊಡದ ಕೇಂದ್ರದ ವಿರುದ್ಧ ಕಾಂಗ್ರೆಸ್ ಆಕ್ರೋಶ



ಚಾಮರಾಜನಗರ, ಜೂ.20– ರಾಜ್ಯ ಕಾಂಗ್ರೆಸ್ ಸರ್ಕಾರದ ಯೋಜನೆಗೆ ಕೇಂದ್ರ ಸರ್ಕಾರ ಅಕ್ಕಿ ನೀಡಲು ನಿರಾಕರಿಸುವುದನ್ನು ಖಂಡಿಸಿ ನಗರದಲ್ಲಿ ಮಂಗಳವಾರ ಜಿಲ್ಲಾ ಕಾಂಗ್ರೆಸ್‌ನಿಂದ ಪ್ರತಿಭಟನೆ ನಡೆಯಿತು.

ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ನೇತೃತ್ವದಲ್ಲಿ ನಗರದ ಶ್ರೀಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಸಮಾವೇಶಗೊಂಡ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಚಾಮರಾಜೇಶ್ವರಸ್ವಾಮಿ ದೇವಸ್ಥಾನದಿಂದ ಮೆರವಣಿಗೆ ಆರಂಭಿಸಿದ ಪ್ರತಿಭಟನಾಕಾರರು ನಗರದ ಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿದರು. ಬಳಿಕ, ಬಿ.ರಾಚಯ್ಯ ಜೋಡಿ ರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಮೂಲಕ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಿದರು.

ಹಸಿವಿನಿಂದ ಯಾರೂ ಬಳಲಬಾರದು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದ್ದು, ಇದನ್ನು ರಾಜ್ಯದ ಪ್ರತಿಯೊಬ್ಬರಿಗೂ ಪೂರೈಸಲು ಸರ್ಕಾರದ ಬೇಡಿಕೆಯಷ್ಟು ಪಡಿತರವನ್ನು ಬಿಡುಗಡೆಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಬೇಕು ಎಂದು ರಾಷ್ಟ್ರಪತಿಗಳನ್ನು ಒತ್ತಾಯಿಸಿದರು. ಈ ವೇಳೆ ಸಚಿವ ಕೆ. ವೆಂಕಟೇಶ್ ಮಾತನಾಡಿ, ಕೇಂದ್ರದ ಬಿಜೆಪಿ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಬಡವರ ವಿರೋಧಿ ನೀತಿಯನ್ನು ಮೋದಿ ಸರ್ಕಾರ ಪಾಲಿಸುತ್ತಿದೆ ಎಂದರು.

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳೊಂದಾದ ಅನ್ನಭಾಗ್ಯ ಯೋಜನೆ ಈಡೇರಿಸಲು ಕೇಂದ್ರ ಬಿಜೆಪಿ ಸರ್ಕಾರ ಅಡ್ಡಗಾಲು ಹಾಕುತ್ತಿದೆ. ಯೋಜನೆ ವಿಳಂಬ ಮಾಡಲು ಮುಂದಾಗಿದೆ ಎಂದು ಆರೋಪಿಸಿದರು.

ರಾಜ್ಯದ ಜನತೆಗೆ ನೀಡಿರುವ ಗ್ಯಾರಂಟಿಗಳನ್ನು ರಾಜ್ಯ ಸರ್ಕಾರ ಈಡೇರಿಸಲಿದೆ. ಪಕ್ಕದ ರಾಜ್ಯಗಳಿಂದ ಅಥವಾ ವಿದೇಶದಿಂದಲಾದರೂ ಸರಿ ಅಕ್ಕಿಯನ್ನು ತರಿಸಿಕೊಂಡು ಜನರಿಗೆ ನೀಡುತ್ತದೆ ಎಂದು ತಿಳಿಸಿದರು.

ನಂತರ ಶಾಸಕ ಹೆಚ್.ಎಂ.ಗಣೇಶಪ್ರಸಾದ್ ಮಾತನಾಡಿ, ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಹೆಚ್ಚುತ್ತಿದೆ. ಇದಕ್ಕೆ ಮುಂದಿನ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನರು ತಕ್ಕಪಾಠ ಕಲಿಸಲಿದ್ದಾರೆ ಎಂದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಕೆಪಿಸಿಸಿಯ ಆದೇಶದ ಮೇರೆಗೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ನಡೆಸುತ್ತಿದೆ. ಬಡವರಿಗೆ ಅಕ್ಕಿ ನೀಡಲು ನಿರಾಕರಿಸಿರುವ ಕೇಂದ್ರ ಸರ್ಕಾರದ ಧೋರಣೆಯನ್ನು ಈ ಮೂಲಕ ಜನರಿಗೆ ತಿಳಿಸಲಾಗುತ್ತಿದೆ ಎಂದರು.

ಪ್ರತಿಭಟನೆಯಲ್ಲಿ ಮಾಜಿ ಸಂಸದ ಎಂ. ಶಿವಣ್ಣ, ಮಾಜಿ ಶಾಸಕರಾದ ಎಸ್. ಜಯಣ್ಣ ಜಿ.ಎನ್. ನಂಜುಂಡಸ್ವಾಮಿ, ಆರ್. ನರೇಂದ್ರ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ, ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಬ್ಲಾಕ್ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನ, ಎ.ಎಸ್. ಗುರುಸ್ವಾಮಿ, ತೋಟೇಶ್, ಎಚ್.ವಿ. ಚಂದ್ರು, ಚಿಕ್ಕಮಹದೇವು, ಆರ್. ಮಹದೇವು, ಡಿ. ನಾಗೇಂದ್ರ, ಆಲೂರು ಪ್ರದೀಪ್, ಮಹಿಳಾ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಲತಾ ಜತ್ತಿ, ಮುಖಂಡರಾದ ಕೆ.ಪಿ. ಸದಾಶಿವಮೂರ್ತಿ, ಕೆ.ಎಸ್. ಮಹೇಶ್, ದಾಸ್, ಸೋಮಲಿಂಗಪ್ಪ, ಭಾಗ್ಯಮ್ಮ, ರಾಜಪ್ಪ ಇತರರು ಪಾಲ್ಗೊಂಡಿದ್ದರು.

ಗ್ಯಾರಂಟಿ ತಪ್ಪಿಸಿಕೊಳ್ಳಲು ಕಾಂಗ್ರೆಸ್ ಪ್ರತಿಭಟನೆ

ಚಾಮರಾಜನಗರ, ಜೂ.20– ರಾಜ್ಯ ಸರ್ಕಾರ ತನ್ನ ಗ್ಯಾರಂಟಿಯಿಂದ ತಪ್ಪಿಸಿಕೊಳ್ಳಲು ಕೇಂದ್ರ ಸರ್ಕಾರದ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ಪ್ರತಿಭಟನೆ ನಡೆಸುತ್ತಿರುವುದು ಖಂಡನೀಯ ಎಂದು ಮಾಜಿ ಶಾಸಕ ಎನ್. ಮಹೇಶ್ ಆಕ್ರೋಶ ವ್ಯಕ್ತಪಡಿಸಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಅಕ್ಕಿ ಕೊಡುತ್ತಿಲ್ಲ ಎನ್ನುವ ಕಾಂಗ್ರೆಸ್ ಸರ್ಕಾರದ ಆರೋಪ ಸರಿಯಲ್ಲ. ರಾಜ್ಯಕ್ಕೆ ಅಕ್ಕಿ ನೀಡುತ್ತೇವೆ ಎಂದು ಕೇಂದ್ರ ಸರ್ಕಾರವಾಗಲಿ, ಮೋದಿ ಅವರಾಗಲಿ ವಾಗ್ದಾನ ನೀಡಿಲ್ಲ ಎಂದರು.

ದೇಶದ ಎಲ್ಲಾ ರಾಜ್ಯಗಳ ಹಿತಕ್ಕಾಗಿ ಕೇಂದ್ರ ಸರ್ಕಾರ ಆಹಾರ ನೀತಿಯನ್ನು ಜಾರಿಗೊಳಿಸಿದೆ. ಬರಗಾಲ ಅಥವಾ ಪ್ರವಾಹ ಯಾವುದೇ ರಾಜ್ಯದಲ್ಲಿ ಉಂಟಾಗಿ ಆಹಾರದ ಸಮಸ್ಯೆ ಎದುರಾದರೆ ಅಥವಾ ಮಾರುಕಟ್ಟೆಯಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆಯಾದಂತಹ ತುರ್ತು ಸಂದರ್ಭದಲ್ಲಿ ಬಳಕೆ ಮಾಡಿಕೊಳ್ಳಲು ಎಫ್‌ಸಿಐ ಆಹಾರವನ್ನು ದಾಸ್ತಾನು ಮಾಡಿಕೊಳ್ಳುತ್ತದೆ. ಇದನ್ನು ಒಂದು ರಾಜ್ಯದ ಘೋಷಣೆಗೆ ನೀಡಲು ಸಾಧ್ಯವಿಲ್ಲ. ಅಲ್ಲದೇ ಆಹಾರ ಪದಾರ್ಥಗಳನ್ನು ದಾಸ್ತಾನು ಮಾಡುವಂತೆ ಕೇಂದ್ರ ಸರ್ಕಾರ ಮೇ 2ರಲ್ಲಿಯೇ ಸೂಚನೆ ನೀಡಿದೆ ಎಂದು ವಿವರಿಸಿದರು.

ಕಾಂಗ್ರೆಸ್‌ನವರು ಚುನಾವಣಾ ಪೂರ್ವದಲ್ಲಿ ನೀಡಿದ್ದ ಗ್ಯಾರಂಟಿಗೆ ಬದ್ಧರಾಗಿ ರಾಜ್ಯದ ಜನತೆಗೆ ರಾಜ್ಯ ಸರ್ಕಾರದ 10 ಕೆ.ಜಿ ಹಾಗೂ ಕೇಂದ್ರ ಸರ್ಕಾರದ 5 ಕೆ.ಜಿ. ಸೇರಿ ಒಟ್ಟು 15 ಕೆ.ಜಿ. ಅಕ್ಕಿಯನ್ನು ಬಿಪಿಎಲ್ ಹಾಗೂ ಅಂತ್ಯೋದಯ ಕಾರ್ಡ್‌ನ ಪ್ರತಿ ಸದಸ್ಯರಿಗೆ ನೀಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಶಾಸಕ ಎಸ್. ಬಾಲರಾಜು, ಮುಖಂಡರಾದ ಆರ್. ಸುಂದರ್, ನೂರೊಂದುಶೆಟ್ಟಿ, ಬಾಲರಾಜು, ಮಾಧ್ಯಮ್ ಪ್ರಮುಖ್ ಮಂಜುನಾಥ್ ಇದ್ದರು.

ಧಾರಾಕಾರ ಮಳೆಗೆ ಕೆರೆಯಂತಾದ ಚಾಮರಾಜನಗರ ಜೋಡಿ ರಸ್ತೆ



ಚಾಮರಾಜನಗರ, ಜೂ.20– ನಗರದಲ್ಲಿ ಮಂಗಳವಾರ ಮಧ್ಯಾಹ್ನ ಸುರಿದ ಧಾರಾಕಾರ ಮಳೆಯಿಂದ ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿ ಅವಾಂತರ ಸೃಷ್ಟಿಸಿದ್ದು, ವಾಹನ ಸವಾರರು ಪರದಾಡಿದರು.

ರಾಜಕಾಲುವೆ ಉಕ್ಕಿಹರಿದು ರಸ್ತೆಯಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ಅಡಚಣೆಯಾಯಿತು. ಮೊಣಕಾಲು ವರೆಗೆ ನಿಂತಿದ್ದ ನೀರಿನಲ್ಲಿ ಸಿಕ್ಕಿಹಾಕಿಕೊಂಡ ದ್ವಿಚಕ್ರ ವಾಹನ ಸವಾರರಲ್ಲಿ ಕೆಲವರು ಆಯತಪ್ಪಿ ಬಿದ್ದರು. ಮಧ್ಯಾಹ್ನ 3.55ಕ್ಕೆ ಶುರುವಾದ ವರ್ಷಧಾರೆ, ಗಾಳಿ, ಗುಡುಗು ಸಹಿತ 5.45ರವರೆಗೆ ಸುರಿಯಿತು. ಚರಂಡಿ, ರಸ್ತೆಯಲ್ಲಿ ಭಾರೀ ಪ್ರಮಾಣದಲ್ಲಿ ನೀರು ಹರಿಯಿತು. ಹಲವು ದಿನಗಳಿಂದ ಬಿಸಿಲಿನ ಝಳಕ್ಕೆ ಬಸವಳಿದಿದ್ದ ಜನರು ಕೊಂಚ ನಿರಾಳರಾದರು.

ಭಾರೀ ಮಳೆಯಿಂದಾಗಿ ಬಿ.ರಾಚಯ್ಯ ಜೋಡಿ ರಸ್ತೆ, ಭುವನೇಶ್ವರಿ ವೃತ್ತದ ಬಳಿಯ ತ್ಯಾಗರಾಜ ರಸ್ತೆ ಸೇರಿದಂತೆ ಹಲವು ಕಡೆಗಳಲ್ಲಿ ನೀರು ನಿಂತು ಜನರು ಕಿರಿಕಿರಿ ಅನುಭವಿಸಿದರು. ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿ ಜಿಲ್ಲಾಡಳಿತ ಭವನದ ಗೇಟಿನ ಮುಂಭಾಗ ಎಂದಿನ ಸಮಸ್ಯೆ ಮಂಗಳವಾರವೂ ಮರುಕಳಿಸಿತು. ರಸ್ತೆಯಲ್ಲಿ ಪೂರ್ಣ ಪ್ರಮಾಣದಲ್ಲಿ ಚರಂಡಿ ನಿರ್ಮಾಣವಾಗದಿರುವುದರಿಂದ ಭಾರೀ ಪ್ರಮಾಣದಲ್ಲಿ ಹರಿದ ನೀರು ರಸ್ತೆಗೆ ಉಕ್ಕಿತು. ಇದಲ್ಲದೇ ರಸ್ತೆಯ ಮೂಲಕ ಹಾದು ಹೋಗುವ ರಾಜ ಕಾಲುವೆಯ ಕೊಳಚೆ ನೀರು ಕೂಡ ರಸ್ತೆಗೆ ಉಕ್ಕಿ ಅವಾಂತರ ಸೃಷ್ಟಿಯಾಯಿತು.

ಬಸವೇಶ್ವರ ಚಿತ್ರಮಂದಿರ, ಇಂದಿರಾ ಕ್ಯಾಂಟೀನ್, ಜಿಲ್ಲಾಡಳಿತ ಭವನದ ಗೇಟ್ ಸೇರಿದಂತೆ ಚಾಮರಾಜ ಜೋಡಿರಸ್ತೆಯುದ್ದಕ್ಕೂ ಕೆರೆಯಂತೆ ನೀರು ನಿಂತಿತ್ತು. ಪಾದಚಾರಿಗಳು, ವಾಹನ ಸವಾರರು ತೀವ್ರ ತೊಂದರೆ ಅನುಭವಿಸಿದರು.



ಅಪಾಯಕ್ಕೆ ಆಹ್ವಾನ ನೀಡುತ್ತಿರುವ ವಿದ್ಯುತ್ ಕಂಬ

ಬೇಗೂರು(ಗುಂಡ್ಲುಪೇಟೆ), ಜೂ.20– ಗ್ರಾಮದ 3ನೇ ಬ್ಲಾಕ್‌ನಲ್ಲಿ ವಿದ್ಯುತ್ ಕಂಬವೊಂದು ಮುರಿದು ಬೀಳುವ ಸ್ಥಿತಿಯಲ್ಲಿದ್ದು, ಅಪಾಯವನ್ನು ಆಹ್ವಾನಿಸುತ್ತಿದೆ.



ಗ್ರಾಮದ ಹಳೇ ಆಸ್ಪತ್ರೆ ರಸ್ತೆ 3 ನೇ ಬ್ಲಾಕ್‌ನ ವೆಂಕಿ ಎಂಬುವರ ಮನೆಯ ಮುಂಭಾಗ ಇರುವ ವಿದ್ಯುತ್ ಕಂಬದ ಮೇಲ್ಭಾಗದ ಸಿಮೆಂಟ್ ಉದುರಿ ಕಬ್ಬಿಣದ ಸಲಾಕೆಗಳು ಕಾಣುತ್ತಿದ್ದು ಸೆಸ್ಕ್ ಅಧಿಕಾರಿಗಳಿಗೆ ತಿಳಿಸಿದರೂ ಸಹ ಇತ್ತ ಗಮನ ಹರಿಸಿಲ್ಲ. ಕಳೆದ ಮೂರು ತಿಂಗಳ ಹಿಂದೆ ಮಳೆ ಬಂದ ಸಂದರ್ಭ ವಿದ್ಯುತ್ ಕಂಬ ಬಾಗಿ ನಿಂತಿದ್ದು, ಯಾವ ಕ್ಷಣದಲ್ಲಾದರೂ ಮುರಿದು ಕೆಳಗೆ ಬಿದ್ದರೆ ಅಪಾರ ಪ್ರಮಾಣದ ಸಾವು ನೋವು ಸಂಭವಿಸಲಿದೆ. ಅಕ್ಕಪಕ್ಕದ ನಿವಾಸಿಗಳು ಆತಂಕದಲ್ಲೇ ಕಾಲ ಕಳೆಯುವಂತಾಗಿದ್ದು ಸೆಸ್ಕ್ ಕಚೇರಿಗೆ ತೆರಳಿ ಈ ರಸ್ತೆಯಲ್ಲಿ ವಾಸವಿರುವ ನಿವಾಸಿಗಳು ಲಿಖಿತವಾಗಿ ದೂರು ನೀಡಿದರೂ ಸಹ ಇತ್ತ ಗಮನ ಹರಿಸಿಲ್ಲ

ವಿದ್ಯುತ್ ಕಂಬ ನೆಲಕ್ಕೆ ಬಿದ್ದು ಮುಂದಾಗುವ ಅನಾಹುತಕ್ಕೆ ಸೆಸ್ಕ್ ಅಧಿಕಾರಿಗಳೇ ಹೊಣೆಯಾಗಬೇಕಾಗುತ್ತದೆ ಎಂದು ಈ ಭಾಗದ ನಿವಾಸಿಗಳು ತಿಳಿಸಿದ್ದು, ಮುಂದಿನ ದಿನದಲ್ಲಿ ಪ್ರತಿಭಟನೆ ಮಾಡುವುದಾಗಿ ತಿಳಿಸಿದ್ದಾರೆ.

ಗಡಿನಾಡು ಕರವೇಯಿಂದ ಗಡಿನಾಡು ಉತ್ಸವ

ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಸಮವಸ್ತ್ರ ವಿತರಣೆ



ಚಾಮರಾಜನಗರ, ಜೂ.20– ಗಡಿನಾಡು ಕನ್ನಡ ರಕ್ಷಣಾ ವೇದಿಕೆ ವತಿಯಿಂದ ಮಳೆ ನಡುವೆಯೂ ಗಡಿನಾಡು ಉತ್ಸವ ಯಶಸ್ವಿಯಾಗಿ ನಡೆಯಿತು.

ನಗರದ ಶ್ರೀಚಾಮರಾಜೇಶ್ವರ ದೇವಾಲಯದ ಮುಂಭಾಗ ನಡೆದ ಉತ್ಸವವನ್ನು ವಾಟಾಳ್ ಶ್ರೀ ಮದ್ವಾಟಾಳ್ ಸೂರ್ಯ ಸಿಂಹಾಸನ ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿ ಉದ್ಘಾಟಿಸಿ, ಶುಭ ಕೋರಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಡಿ.ಎಸ್.ರಮೇಶ್ ಮಾತನಾಡಿ, ಗಡಿನಾಡು ಉತ್ಸವ ಹಾಗೂ ಡಾ.ರಾಜ್ ಕುಮಾರ್ ಮತ್ತು ಪುನೀತ್‌ರಾಜ್‌ಕುಮಾರ್ ಜಯಂತೋತ್ಸವ ಅಂಗವಾಗಿ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಸಮವಸ್ತ್ರ ವಿತರಣೆ ಮಾಡುತ್ತಿರುವ ಕಾರ್ಯಕ್ರಮ ಅರ್ಥಪೂರ್ಣವಾಗಿದೆ. ವೇದಿಕೆಯು ಬಡ ಮಕ್ಕಳನ್ನು ಗುರುತಿಸಿ ಅವರಿಗೆ ಬೇಕಾದ ಸಮವಸ್ತ್ರ, ನೋಟ್ ಪುಸ್ತಕ, ಜಾಮಿಟ್ರಿ ಬಾಕ್ಸ್, ಲೇಖನ ಸಾಮಗ್ರಿಗಳ ವಿತರಣೆ ಮಾಡುತ್ತಿರುವುದು ಸಂತಸ ತಂದಿದೆ. ಪ್ರತಿವರ್ಷ ಇಂತಹ ಕಾರ್ಯಕ್ರಮವನ್ನು ನಡೆಸಿಕೊಂಡು ಬರಲಿ. ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ, ಉತ್ತೇಜನ ನೀಡುವಂತಾಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ವಾಣಿಜ್ಯ ಮತ್ತು ಗ್ರಾಮೀಣ ಕೈಗಾರಿಕೆ ಇಲಾಖೆಯ ಉಪನಿರ್ದೇಶಕ ಕೆ.ಎ.ರಾಜೇಂದ್ರ ಪ್ರಸಾದ್, ಜಿಪಂ ಕಾರ್ಯಪಾಲಕ ಅಭಿಯಂತರಾದ ಇಬ್ರಾಹಿಂ, ಸಹಾಯಕ ಅಭಿಯಂತರ ನಟರಾಜು, ಉದ್ಯಮಿ ಹನುಮಂತೇಗೌಡ, ಲಾರೆನ್ಸ್ ಜೇಮ್ಸ್, ಸಮಾಜ ಸೇವಕ ಎ.ಬಿ.ಕುಮಾರ್, ಸಮಾಜ ಸೋಮನಾಯಕ, ಗಡಿನಾಡು ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಚಾ.ರಾ. ಕುಮಾರ್ ನಿಜಧ್ವನಿ ಗೋವಿಂದರಾಜು, ಮುಖ್ಯ ಶಿಕ್ಷಕ ನಾಗೇಂದ್ರ, ಆಟೋ ಆಕಾಶ್, ಟಿವಿಎಸ್ ಕುಮಾರ್, ರಾಜಣ್ಣ, ಸುಧಾಕರ್, ಶಶಿ ಇತರರು ಹಾಜರಿದ್ದರು.

ಇಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಚಾಮರಾಜನಗರ, ಜೂ.20– ಆಯುಷ್ ಮಂತ್ರಾಲಯ, ಜಿಲ್ಲಾಡಳಿತ ಮತ್ತು ಜಿಪಂ, ಆಯುಷ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಪತಂಜಲಿ ಯೋಗ ಶಿಕ್ಷಾ ಸಮಿತಿ, ಯೋಗ ನಿರತ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ 'ಪ್ರತಿ ಮನೆ ಅಂಗಳದಲ್ಲೂ ಯೋಗ' ಎಂಬ ಘೋಷವಾಕ್ಯದಡಿ 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ಜೂ.21 ರಂದು ಬೆಳಗ್ಗೆ 6 ರಿಂದ 9 ಗಂಟೆಯವರೆಗೆ ನಗರದ ನಂದಿ ಭವನದಲ್ಲಿ ಆಯೋಜಿಸಲಾಗಿದೆ.

ಮೈಸೂರು ಮಿತ್ರ

ಒಂದನೇ ಪುಟದಿಂದ

ಕಾಂಗ್ರೆಸ್–ಬಿಜೆಪಿ ಕಚ್ಚಾಟ

ಬಡವರಿಗೆ ಅನ್ನ ನೀಡಲು ಇವರ ವಿರೋಧವಿದೆ ಎಂದು ಪ್ರತಿಭಟಿಸಿದರು. ಪ್ರತಿಭಟನಾ ನಿರತ ಡಿ.ಕೆ.ಶಿವಕುಮಾರ್ ಮಾತನಾಡಿ, ಕೇಂದ್ರ ಸರ್ಕಾರ ಎಷ್ಟೇ ಅಡ್ಡಗಾಲು ಹಾಕಿದರೂ ನಾವು ಜನರಿಗೆ ನೀಡಿದ ಭರವಸೆ ಈಡೇರಿಸುತ್ತೇವೆ.

ಪ್ರಸ್ತುತ ಪ್ರತಿ ಯುನಿಟ್‌ಗೆ 5 ಕೆ.ಜಿ.ಆಹಾರ ಧಾನ್ಯ ಪೂರೈಸುತ್ತಿದ್ದು, ಉಳಿದ 5 ಕೆ.ಜಿ.ಯನ್ನು ಎಲ್ಲಿಂದಲಾದರೂ ಖರೀದಿ ಮಾಡಿ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ವಿತರಿಸಿಯೇ ತೀರುತ್ತೇವೆ. ಕೇಂದ್ರದ ನೀತಿಯಿಂದ ಒಂದೆರಡು ದಿನ ವಿಳಂಬವಾಗಬಹುದು. ಆದರೆ, ನಾವು ನೀಡಿರುವ ಭರವಸೆ ಈಡೇರಿಸುತ್ತೇವೆ. ಉಚಿತವಾಗಿ ಅಕ್ಕಿ ಮಾತ್ರವಲ್ಲ, ಗೋಧಿ, ರಾಗಿ, ಜೋಳ ನೀಡಲು ಸರ್ಕಾರ ಚಿಂತನೆ ನಡೆಸಿದೆ. ಕೇಂದ್ರ ಸರ್ಕಾರ ಬಡವರಿಗೆ ಆಹಾರ ಧಾನ್ಯ ನೀಡದಿದ್ದರೂ ಸರಿ. ನಾವು ಭತ್ತ ಬೆಳೆಯುವ ರಾಜ್ಯಗಳಿಂದ ಅಕ್ಕಿ ಖರೀದಿ ಮಾಡಿಯಾದರೂ ನೀಡುತ್ತೇವೆ.

ಅನ್ನದಾನಕ್ಕಿಂತ ಶ್ರೇಷ್ಠ ದಾನ ಮತ್ತೊಂದಿಲ್ಲ. ಹಸಿವು ಮುಕ್ತ ರಾಜ್ಯ ಮಾಡುವುದೇ ನಮ್ಮ ಉದ್ದೇಶ. ಇದರಲ್ಲಿ ಯಾವುದೇ ರಾಜಕೀಯವಿಲ್ಲ. ಬಡವರ ಅನ್ನದಲ್ಲಿ ರಾಜಕೀಯ ಮಾಡುತ್ತಿರುವ ಬಿಜೆಪಿಗೆ ರಾಜ್ಯದ ಮುಂಬರುವ ಲೋಕಸಭೆ, ಪಂಚಾಯತ್ ಹಾಗೂ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಜನ ತಕ್ಕ ಪಾಠ ಕಲಿಸುತ್ತಾರೆ.

ನಾವು ಪಕ್ಷಕ್ಕೆ ಅಕ್ಕಿ ನೀಡಿ ಎಂದು ಕೇಳುತ್ತಿಲ್ಲ. ಆದರೂ, ನೀಡದೇ ಬಡವರಿಗೆ ಸಬೂಬು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ, ನಮ್ಮ ಮೇಲೆ ಜನರನ್ನು ಎತ್ತಿಕಟ್ಟುವ ಕೆಲಸ ನಡೆಯುತ್ತಿದೆ. ಬೆಳಗ್ಗೆ ಎದ್ದರೆ, ಯಡಿಯೂರಪ್ಪ, ಅಶೋಕ್, ಬೊಮ್ಮಾಯಿ ಅವರು ಅಕ್ಕಿ ವಿಚಾರ ಕೈಗೆತ್ತಿಕೊಂಡು ಇಲ್ಲಸಲ್ಲದ ಆರೋಪ ಮಾಡಿ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಬಡವರ ಹೊಟ್ಟೆ ತುಂಬುವ ವಿಚಾರದಲ್ಲಿ ಕೇಂದ್ರ ಸರ್ಕಾರದ ರಾಜಕೀಯ ಷಡ್ಯಂತರದ ವಿರುದ್ಧ ನಾವು ಬೀದಿಗಿಳಿದು ಹೋರಾಟ ಮಾಡುತ್ತಿದ್ದೇವೆ ಎಂದು ಶಿವಕುಮಾರ್ ತಿಳಿಸಿದರು. ಕಾಂಗ್ರೆಸ್‌ಗೆ ತದ್ವಿರುದ್ಧವಾಗಿ ಪ್ರತಿಭಟನೆ ನೇತೃತ್ವ ವಹಿಸಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ಸರ್ಕಾರಕ್ಕೆ ಧಮ್ಮು, ತಾಕತ್ತಿದ್ದರೆ, ಎಲ್ಲಾ ಕಡೆಯಿಂದ ಅಕ್ಕಿ ತರಿಸಿ ಪ್ರತಿಯೊಬ್ಬರಿಗೂ 15 ಕೆ.ಜಿ.ಆಹಾರ ಧಾನ್ಯ ನೀಡಿ ಎಂದು ಒತ್ತಾಯಿಸಿದರು. ಚುನಾವಣೆಯಲ್ಲಿ ಮತಗಳಿಸಲು ಭರವಸೆ ನೀಡಿ ಬಡವರಿಗೆ ಅಕ್ಕಿ ನೀಡಲಾಗದೇ, ಈಗ ಬೀದಿಗೆ ಬಂದು ಹೋರಾಟ ಮಾಡುತ್ತಿದ್ದೀರಾ ಎಂದು ಕಿಡಿ ಕಾರಿದರು. ಇದೊಂದು ಸುಳ್ಳಿನ ಸರ್ಕಾರ. ಮತಕ್ಕಾಗಿ ಭರವಸೆಗಳನ್ನು ನೀಡಿ ಅದನ್ನು ಜಾರಿಗೊಳಿಸಲಾಗದೇ, ಸಿದ್ದರಾಮಯ್ಯ ಸರ್ಕಾರ ವಚನ ಭ್ರಷ್ಟವಾಗುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಸಾಮೂಹಿಕ ಯೋಗ ಪ್ರದರ್ಶನ

10 ಕಡೆ ಯೋಗ ತರಬೇತುದಾರರಿಗೆ ಚಿಕ್ಕ ವೇದಿಕೆ ನಿರ್ಮಿಸಲಾಗಿದೆ. 9ನೇ ಅಂತಾರಾಷ್ಟ್ರೀಯ ಯೋಗ ಕಾರ್ಯಕ್ರಮದ ಯಶಸ್ವಿಗೆ ಎಲ್ಲ ಕ್ರಮಗಳನ್ನು ಆಯುಷ್ ಇಲಾಖೆ ಕೈಗೊಂಡಿದೆ.

ಆರೋಗ್ಯ, ಸ್ವಚ್ಛತೆಗೆ ಕ್ರಮ: ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಅರಮನೆ ಆವರಣದಲ್ಲಿ ನಡೆಯುವ 9ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಯೋಗ ಪ್ರದರ್ಶನಕ್ಕೆ 10 ರಿಂದ 12 ಸಾವಿರ ಯೋಗಪಟುಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಯೋಗಪಟುಗಳಿಗಾಗಿ ಉಪಹಾರದ ವ್ಯವಸ್ಥೆ ಮಾಡಲಾಗಿದೆ. ಕುಡಿಯುವ ನೀರಿನ ಪೂರೈಕೆ, ಶೌಚಾಲಯ ವ್ಯವಸ್ಥೆ, ಆರೋಗ್ಯ ಕಾರ್ಯಕರ್ತರ ತಂಡ, ಆಂಬುಲೆನ್ಸ್, ಉಪಹಾರ ಸೇವನೆ ಬಳಿಕ ಪೇಪರ್ ಪ್ಲೇಟ್ ಸಂಗ್ರಹಕ್ಕೆ ಡಸ್ಟ್‌ಬಿನ್ ಸೇರಿದಂತೆ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ ಎಂದರು.

ಎಲ್ಲಾ ಯೋಗಪಟುಗಳು ಬೆಳಗ್ಗೆ 5 ಗಂಟೆಯಿಂದಲೇ ಅರಮನೆ ಆವರಣ ಪ್ರವೇಶಿಸಲಿದ್ದಾರೆ. ಈಗಾಗಲೇ ನಡೆದ ತರಬೇತಿ ವೇಳೆ ಯೋಗ ಪ್ರದರ್ಶನದ ಬಗ್ಗೆ ಮಾಹಿತಿ ನೀಡಲಾಗಿದೆ. ವಿವಿಧ ವಾಹನಗಳಲ್ಲಿ ಬರುವ ಯೋಗಪಟುಗಳು ಅರಮನೆ ಹೊರಗೆ ಮೀಸಲಿಟ್ಟ ಸ್ಥಳದಲ್ಲಿ ವಾಹನ ನಿಲ್ಲಿಸಲು ಸೂಚಿಸಲಾಗಿದೆ. ಯೋಗ ಮಾಡುವ ವೇಳೆ ಅನಗತ್ಯ ಗೊಂದಲ ತಪ್ಪಿಸಲು ಆಯುಷ್ ಇಲಾಖೆ ಹಾಗೂ ಯೋಗ ಸಂಸ್ಥೆಗಳ ಸ್ವಯಂಸೇವಕರು ಯೋಗಪಟುಗಳಿಗೆ ನೆರವಾಗಲಿದ್ದಾರೆ. ಸರದಿ ಸಾಲಿನಲ್ಲಿ ಯೋಗ ಮ್ಯಾಟ್ ಹಾಸಿಕೊಳ್ಳಲು ಸೂಚನೆ ನೀಡಲಿದ್ದಾರೆ ಎಂದರು.

ಬೆಳಗ್ಗೆ 6.15ಕ್ಕೆ ಯೋಗ ಪ್ರದರ್ಶನ ಆರಂಭವಾಗಲಿದೆ. 7 ಗಂಟೆಗೆ ಸಭಾ ಕಾರ್ಯಕ್ರಮ ಮುಗಿಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ. ಜಿಲ್ಲೆಯ ಶಾಸಕರು ಹಾಗೂ ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಪೊಲೀಸ್ ಆಯುಕ್ತ ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ವಿವರಿಸಿದರು.

ದಂಪತಿ ಸೇರಿ ಮೂವರು ದುರ್ಮರಣ

ವಿಭಾಗದ ಹೆಚ್ಚುವರಿ ನಿರ್ದೇಶಕರಾಗಿದ್ದರು. ಬೆಳಗ್ಗೆ 7.30ಕ್ಕೆ ನೀರಜ್ ಕುಮಾರ್, ಪತ್ನಿ ಸೆಲ್ವಿ, ಪುತ್ರ ಶ್ರೀವಾತ್ಸವ್ ಬೆಂಗಳೂರಿನಿಂದ ಮಡಿಕೇರಿಗೆ ಸ್ವಿಫ್ಟ್ ಕಾರಿನಲ್ಲಿ ಪ್ರವಾಸ ಹೊರಟಿದ್ದರು. ಗೆಜ್ಜಲಗೆರೆ ಕಾಲೋನಿ ಬಳಿ ರಸ್ತೆಯಲ್ಲಿ ನಿಂತಿದ್ದ ಮಳೆ ನೀರಿನ ಮೇಲೆ ಸಾಗುವಾಗ ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು, ರಸ್ತೆ ವಿಭಜಕ್ಕೆ ಡಿಕ್ಕಿ ಹೊಡೆದು, ಬಳಿಕ ಪಲ್ಟಿಯಾಗಿ ಮುಂದೆ ಚಲಿಸುತ್ತಿದ್ದ ಟಾಟಾ ನೆಕ್ಸಾನ್ ಕಾರಿಗೆ ಅಪ್ಪಳಿಸಿದೆ. ಈ ವೇಳೆ ಸ್ವಿಫ್ಟ್ ಕಾರಿನಲ್ಲಿದ್ದ ನೀರಜ್ ಕುಮಾರ್ ಸ್ಥಳದಲ್ಲೇ ಮೃತಪಟ್ಟರೆ, ಪತ್ನಿ ಸೆಲ್ವಿ ಹಾಗೂ ಚಾಲಕ ನಿರಂಜನ್ ಚಿಕಿತ್ಸೆಗಾಗಿ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತ ಪಟ್ಟಿದ್ದಾರೆ. ಅವರ ಪುತ್ರ ಶ್ರೀವಾತ್ಸವಗೆ ಗಂಭೀರ ಗಾಯಗಳಾಗಿ ಮಂಡ್ಯದ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಟಾಟಾ ನೆಕ್ಸಾನ್ ಕಾರಿನಲ್ಲಿದ್ದ ನಾಲ್ಕು ಮಂದಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಈ ಸಂಬಂಧ ಮದ್ದೂರು ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹೆದ್ದಾರಿ ಸಂಚಾರ ಅಸ್ತವ್ಯಸ್ತ: ಘಟನೆ ಹಿನ್ನೆಲೆಯಲ್ಲಿ ಬೆಂಗಳೂರು–ಮೈಸೂರು ಹೆದ್ದಾರಿ ಸಂಚಾರ ಕೆಲಕಾಲ ಅಸ್ತವ್ಯಸ್ತಗೊಂಡಿತ್ತು. ಸ್ಥಳಕ್ಕೆ ಪೊಲೀಸರು ಮತ್ತು ಸ್ಥಳೀಯರು ಆಗಮಿಸಿ, ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ನಾಳೆ ಕರ್ನಾಟಕ ಬಂದ್

ಕೈಗಾರಿಕೋದ್ಯಮಿಗಳು ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಜೂ.22ರಂದು ಮೈಸೂರು ಜಿಲ್ಲೆಯಲ್ಲಿಯೂ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ಬಂದ್ ನಡೆಸಲು ನಿರ್ಧರಿಸಿದ್ದು, ಅಂದು ಜಿಲ್ಲೆ ಯಾದ್ಯಂತ ಯಾವುದೇ ವಹಿವಾಟು ನಡೆಸದೇ ಸಹಕರಿಸಬೇಕೆಂದು ಕೋರಿದರು. ಎಲ್ಲಾ ಅಂಗಡಿ–ಮುಂಗಟ್ಟು, ಕೈಗಾರಿಕೆಗಳು ಹಾಗೂ ಸಂಘ–ಸಂಸ್ಥೆಗಳಿಗೆ ಬಂದ್‌ಗೆ ಬೆಂಬಲ ನೀಡುವಂತೆ ಮನವಿ ಮಾಡಿದ್ದು, ಎಲ್ಲರಿಂದಲೂ ಸಹಕಾರ ದೊರೆಯುವ ವಿಶ್ವಾಸವಿದೆ. ಅಂದು ಮಧ್ಯಾಹ್ನ 12ಕ್ಕೆ ಜಿಲ್ಲಾಧಿಕಾರಿ ಕಚೇರಿ (ಹೊಸ ಕಟ್ಟಡ) ಎದುರು ಸಾಂಕೇತಿಕ ಪ್ರತಿಭಟನೆ ನಡೆಸಿ, ಜಿಲ್ಲಾಧಿ ಕಾರಿಗಳಿಗೆ ಮನವಿ ಸಲ್ಲಿಸಲಿದ್ದೇವೆ. ಈಗಾಗಲೇ ಹಲವು ಸಂಘ– ಸಂಸ್ಥೆಗಳ ಬೆಂಬಲ ನೀಡಿವೆ. ರಾಜ್ಯ ಸರ್ಕಾರಕ್ಕೆ ಈಗಾಗಲೇ ಮನವಿ ಮಾಡಿ ದ್ದರೂ ಸ್ಪಂದಿಸಿಲ್ಲ.

ಜೊತೆಗೆ ಸ್ಥಳೀಯ ವಾಗಿಯೂ ಸೆಸ್ಕ್ ವ್ಯವಸ್ಥಾಪಕ ನಿರ್ದೇ ಶಕರನ್ನೂ ಭೇಟಿ ಮಾಡಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಶೇ.25ರಷ್ಟು ಶುಲ್ಕ ಪಾವತಿಗೆ ಕಾಲಾವಕಾಶ ನೀಡುವ ಆಶ್ವಾಸನೆಯಷ್ಟೇ ಅವರಿಂದ ಸಿಕ್ಕಿತು ಎಂದು ತಿಳಿಸಿದರು.

ರಾಜ್ಯದ ಬಹುತೇಕ ಜಿಲ್ಲಾ ಮತ್ತು ತಾಲೂಕು ಮಟ್ಟದ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳು ಬಂದ್‌ಗೆ ಬೆಂಬಲ ನೀಡಿವೆ. ಗದಗ, ಬಿಜಾಪುರ, ರಾಣೆಬೆನ್ನೂರು, ರಾಯಚೂರು, ತಾಲಿಕೋಟೆ, ವಿಜಯನಗರ, ದಾವಣಗೆರೆ, ಕೊಪ್ಪಳ, ಬಾಗಲ ಕೋಟೆ, ಧಾರವಾಡ, ಶಿರಸಿ, ಕಾರವಾರ, ಬಿದರ್, ಶಿವಮೊಗ್ಗ, ಕೋಲಾರ, ಮಂಡ್ಯ, ಚಿಕ್ಕಮಗಳೂರು, ಯಾದಗಿರಿ, ಚಿತ್ರದುರ್ಗ, ಕಲ್ಯಾಣ ಕರ್ನಾಟಕ, ಹಾವೇರಿ, ಹಾಸನ, ಬಳ್ಳಾರಿ, ಬೆಳಗಾವಿ ಸೇರಿದಂತೆ ವಿವಿಧ ಕೈಗಾರಿಕಾ ಸಂಘ–ಸಂಸ್ಥೆಗಳು ಬೆಂಬಲ ನೀಡಿವೆ ಎಂದರು.

ಅಂದು ಜಿಲ್ಲೆಯ ಎಲ್ಲಾ ಕೈಗಾರಿಕಾ ಪ್ರದೇಶಗಳು ಬಂದ್ ಆಗಲಿವೆ. ಕಾರ್ಮಿಕರಿಗೆ ವೇತನ ಸಹಿತ ರಜೆ ನೀಡಲಾಗಿದೆ. ಮೈಸೂರು ನಗರದಲ್ಲಿ ದೇವರಾಜ ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ದೇವರಾಜ ಮಾರುಕಟ್ಟೆ, ಮಂಡಿ ಮಾರುಕಟ್ಟೆ ವ್ಯಾಪಾರಸ್ಥರು ಬೆಂಬಲ ನೀಡಿದ್ದಾರೆ. ಸ್ವಯಂ ಪ್ರೇರಿತವಾಗಿ ಬಂದ್‌ಗೆ ಬೆಂಬಲ ನೀಡು ವಂತೆ ಎಲ್ಲರಲ್ಲಿಯೂ ಮನವಿ ಮಾಡುತ್ತಿದ್ದೇವೆ. ಒತ್ತಾಯಪೂರ್ವಕವಾಗಿ ಯಾರನ್ನು ಬಂದ್ ಮಾಡಿಸುವುದಿಲ್ಲ ಎಂದು ಹೇಳಿದರು.

ಐದು ತಿಂಗಳ ಎಫ್‌ಎಸಿ ಶುಲ್ಕವನ್ನು ಒಟ್ಟಿಗೆ ನೀಡಿ ದ್ದಾರೆ. ಫೆಬ್ರವರಿಯಲ್ಲಿ ಜಾರಿಯಾದ ಈ ಹೆಚ್ಚಳ ಸಂಬಂಧ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಿದ್ದರು. ಬೇರೆ ಯಾವುದೇ ಮಾಧ್ಯಮಗಳ ಮೂಲಕ ಪ್ರಚಾರ ಮಾಡಿಲ್ಲ. ಚುನಾವಣೆ ಹಿನ್ನೆಲೆಯಲ್ಲಿ ಈ ಶುಲ್ಕವನ್ನು ತಾತ್ಕಾಲಿಕವಾಗಿ ತಡೆ ಹಿಡಿದಿದ್ದರು ಎನ್ನಲಾಗುತ್ತಿದೆ. ಎರಡು ತಿಂಗಳು ಬಿಟ್ಟು ಮತ್ತೆ ಎಫ್‌ಎಸಿ ಶುಲ್ಕ ವಿಧಿಸಲಾಗುತ್ತದೆ ಎನ್ನಲಾಗುತ್ತಿದೆ. ನಿಗದಿತ ಶುಲ್ಕ ಮತ್ತು ಇಂಧನ ಹೊಂದಾಣಿಕೆ ಶುಲ್ಕ ಅತಿಯಾಗಿ ಹೆಚ್ಚಳ ಮಾಡಿರುವು ದರಿಂದ ಸಮಸ್ಯೆ ಎದುರಾಗಿದೆ ಎಂದು ತಿಳಿಸಿದರು. ಎಂಸಿಸಿಐ ಕಾರ್ಯದರ್ಶಿ ಎ.ಕೆ.ಶಿವಾಜಿರಾವ್, ಮೈಸೂರು ಜಿಲ್ಲಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯಮಿದಾರರ ಸಂಘದ ಅಧ್ಯಕ್ಷ ಆರ್.ಮಂಜುನಾಥ, ಕಡಕೊಳ ಕೈಗಾರಿಕೆಗಳ ಸಂಘದ ಅಧ್ಯಕ್ಷ ರಾಮಕೃಷ್ಣೇಗೌಡ, ವಕೀಲ ಎಂ.ಎನ್.ಚಂದ್ರಶೇಖರ್ ಗೋಷ್ಠಿಯಲ್ಲಿದ್ದರು.

ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಕರೆ ಮೇರೆಗೆ ಮೈಸೂರು ಘಟಕ (ಎಂಸಿಸಿಐ) ಸೇರಿದಂತೆ 26 ಜಿಲ್ಲಾ ಘಟಕಗಳು ಬಂದ್‌ನಲ್ಲಿ ಭಾಗವಹಿಸ ಲಿವೆ. ಉಳಿದ ಕೆಲ ಜಿಲ್ಲಾ ಘಟಕಗಳು ಸೇರಿದಂತೆ ಎಫ್‌ಕೆಸಿಸಿಐ ಬಂದ್‌ನಿಂದ ದೂರು ಉಳಿದಿವೆ ಎಂದು ಪ್ರಶ್ನೆಯೊಂದಕ್ಕೆ ಕೆ.ಬಿ.ಲಿಂಗರಾಜು ಉತ್ತರಿಸಿದರು.

ಎಲ್ಲರೂ ನನ್ನಿಂದ ದೂರ ಹೋದರು; ಹಾಗಂತ ಒಂಟಿಯಾಗಿ ಬಿಡಬೇಡಿ ಪ್ಲೀಸ್...





ಜಿಲ್ಲಾಧಿಕಾರಿ ಹಳೇ ಕಚೇರಿ ಅಂತರ್ಯದ ಕೋರಿಕೆ!

ಮೈಸೂರು, ಜೂ.20(ಬಿಎಲ್‌ಯು)– ನನ್ನನ್ನು ಸುಂದರವಾಗಿ ನಿರ್ಮಿಸಿದ ಮೈಸೂರು ಮಹಾರಾಜರು, ಅಠಾರ ಕಚೇರಿ ಎಂದು ನಾಮಕರಣ ಮಾಡಿದ್ದರು. ಆದರೆ ಸ್ವಾತಂತ್ರ್ಯ ನಂತರ ಕಾಲಾನುಸಾರ ನನಗೆ 'ಜಿಲ್ಲಾಧಿಕಾರಿ ಕಚೇರಿ' ಎಂದು ಮರು ನಾಮಕರಣ ಮಾಡಲಾಯಿತು. ನನಗೀಗ 128 ವರ್ಷ ವಯಸ್ಸು, ಮಹಾರಾಜರ ಕಾಲದಿಂದ ಈವರೆಗೂ ಇಡೀ ಜಿಲ್ಲೆಯ ಆಡಳಿತ ನನ್ನ ಮಡಿಲಿನಲ್ಲೇ ನಡೆಯಿತು. ಈಗ ನಾನು ಅಶಕ್ತ ಎಂದು ನಿರ್ಧರಿಸಿ ದೂರದಲ್ಲಿ ಮತ್ತೊಂದು ಭವ್ಯ ಕಟ್ಟಡ ನಿರ್ಮಿಸಿದರೂ ಐದಾರು ವರ್ಷ ನನ್ನೊಡನಿದ್ದ ಎಲ್ಲರೂ ಕೆಲ ದಿನಗಳ ಹಿಂದಷ್ಟೇ ಹೊಸಮನೆ ಸೇರಿದ್ದಾರೆ. ಇತಿಹಾಸದ ನೆನಪುಗಳನ್ನೆಲ್ಲಾ ನನ್ನಲ್ಲಿಯೇ ಬಿಟ್ಟು ಹೋಗಿದ್ದಾರೆ. ನಾನೀಗ ಏಕಾಂಕಿ ಆಗಿದ್ದೇನೆ. ಯಾರು ಇರಲೀ, ಇಲ್ಲದಿರಲಿ ನಾನಂತೂ ಸ್ಥಿರವಾಗಿ ನಿಲ್ಲುವೆನೆಂಬ ಅಚಲ ವಿಶ್ವಾಸ ನನ್ನಲ್ಲಿ ಅಳಿದಿಲ್ಲ.


ಸಾಂಸ್ಕೃತಿಕ ನಗರಿ ಮೈಸೂರು ಜಿಲ್ಲಾಧಿಕಾರಿ ಕಚೇರಿ ಹಳೆಯ ಕಟ್ಟಡ ತನ್ನ ಕತೆಯನ್ನು ತಾನೆ ಹೇಳಿಕೊಳ್ಳುವ ಪರಿ ಇದು. ಈಗಿನ ಜಿಲ್ಲಾಧಿಕಾರಿ ಕಚೇರಿಯನ್ನು ಮೈಸೂರಿನ ಸಿದ್ಧಾರ್ಥನಗರದಲ್ಲಿ ಜಿಲ್ಲಾ ಕಚೇರಿಗಳ ಸಮುಚ್ಚಯಕ್ಕೆ ಸ್ಥಳಾಂತರ ಮಾಡಲಾಗಿದೆ. ಇದರಿಂದ ಹಳೆಯ ಕಚೇರಿ ಖಾಲಿ ಖಾಲಿಯಾಗಿದೆ. ಸದಾ ಜನ ಜಂಗುಳಿ ಇರುತ್ತಿದ್ದ ಐತಿಹಾಸಿಕ ಕಟ್ಟಡದಲ್ಲಿ ನೀರವ ಮೌನ ಆವರಿಸಿದೆ. ಮೆಟ್ಟಿಲು, ಕಂಬ, ಗೋಡೆ ಎಲ್ಲವೂ ಅನಾಥ ಭಾವನೆಯಲ್ಲಿ ಸ್ತಬ್ಧವಾಗಿರುವಂತೆ ಭಾಸವಾಗುತ್ತದೆ. 128 ವರ್ಷದಿಂದ ಜಿಲ್ಲಾಡಳಿತಕ್ಕೆ ಆಸರೆಯಾಗಿದ್ದ ತನ್ನೊಂದಿಗೆ ಈಗ ಯಾರೂ ಇಲ್ಲ. ವಯಸ್ಸಾದ ಮೇಲೆ ಈ ಪರಿಸ್ಥಿತಿ ನಿಶ್ಚಿತ ಎಂಬ ನಿರ್ಲಿಪ್ತ ಸಂದೇಶವನ್ನು ಸಾರಿ ಹೇಳಿದಂತಿದೆ. ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡಗಳ ದುಸ್ಥಿತಿ ನನಗೂ ಬರಬಹುದೆಂಬ ದುಗುಡವೂ ಮಾರ್ಧನಿಸುವಂತಿದೆ. ಈ ಭವ್ಯ ಕಟ್ಟಡ ಮನದ ಮಾತನ್ನು ತಾನೇ ಹೇಳುವಂತಿದೆ. ಕೇಳೋಣ ಬನ್ನಿ.

ಮಹಾರಾಜರು 1985ರಲ್ಲಿ ಇಂಡೋ ಸಾರ್ಸನಿಕ್ ಶೈಲಿಯಲ್ಲಿ ನನ್ನನ್ನು ನಿರ್ಮಾಣ ಮಾಡಿದ್ದಾರೆ. ಅಂದಿನ ರಾಜರ ಕಾಲದ ಆಡಳಿತದ 18 ಇಲಾಖೆಗಳು ಇಲ್ಲೆ ಕಾರ್ಯ ನಿರ್ವಹಿಸುತ್ತಿದ್ದ ಕಾರಣ ನನ್ನನ್ನು ಅಠಾರ ಕಚೇರಿ ಎಂಬ ಹೆಸರಿನಿಂದ ಕರೆಯಲಾಯಿತು. ಮಹಾರಾಜರ ದಿವಾನರೂ ಇಲ್ಲೆ ಕುಳಿತು ಆಡಳಿತ ನಡೆಸುತ್ತಿದ್ದರು. 29,588 ಚದರ ಅಡಿ ವಿಸ್ತೀರ್ಣ ವಿರುವ ನನ್ನಲ್ಲಿ ಒಟ್ಟು ಎರಡು ಭಾಗಗಳಿದ್ದು ವಿಶಾಲವಾದ 27 ಕೊಠಡಿಗಳಿವೆ. ಒಂದು ಖಜಾನೆ ಕೊಠಡಿ, ಅದರ ಸುತ್ತಲೂ ಅಂಗಳ, ಮುಂಭಾಗ ಸುಂದರ ಮುಖ ಮಂಟಪ ಇದೆ. ನನ್ನ ಮಧ್ಯಭಾಗ ಎತ್ತರವಾದ ಗೋಪುರ ಇದೆ. ಅದರ ಮೇಲೆ ಕಳಸದ ಶಂಖಾಕಾರವಿದೆ. ಇಡೀ ಮೈಸೂರಿಗೆ ನಾನು ಮುಕುಟ ಪ್ರಾಯ ಹಾಗೂ ಅತೀ ರಮ್ಯವಾಗಿದ್ದೇನೆ. ಅಂದು ನನ್ನ ನಿರ್ಮಾಣಕ್ಕೆ ಆಗಲೇ 1,75,506 ರೂಪಾಯಿ ಖರ್ಚಾಗಿತ್ತಂತೆ.

ನಾನಿರುವ ಈ ಸ್ಥಳದಲ್ಲೆ ಅಂದಿನ ಮೈಸೂರು ರಾಜ್ಯದ ಪ್ರಜಾ ಪ್ರತಿನಿಧಿ ಸಭೆ 1923ರ ತನಕ ನಡೆಯಿತು. ಘಟಾನುಘಟಿ ಅಧಿಕಾರಿಗಳು ಆಡಳಿತ ನಡೆಸಿ ಹೋಗಿದ್ದಾರೆ. ನನ್ನ ಮುಂದೆ ವಿಶಾಲವಾದ ಅಚ್ಚಸಿರಿನಿಂದ ಕಂಗೊಳಿಸುವ ಉದ್ಯಾನವಿದೆ. ಅಲ್ಲಿ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಗಾರ್ಡಿಯನ್ ಆಗಿದ್ದ ಜೇಮ್ಸ್ ಡೇವಿಡ್ ಸನ್ ಗಾರ್ಡನ್ ಅವರ ಕಂಚಿನ ಸುಂದರ ಪ್ರತಿಮೆ ಇದೆ. ಅಂದಿನ ಬ್ರಿಟಿಷ್ ಸರ್ಕಾರದಲ್ಲಿ ಬಹು ಪ್ರಭಾವವುಳ್ಳ ಅಧಿಕಾರಿಯಾಗಿದ್ದ ಜೇಮ್ಸ್ ಡೇವಿಡ್ ಸನ್ ಗಾರ್ಡನ್ ಅವರು ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಕೈ ಬಿಟ್ಟು ಹೋಗಿದ್ದ ಮೈಸೂರು ರಾಜ್ಯವನ್ನು ಮತ್ತೆ ಗಳಿಸಲು ಶ್ರಮಿಸಿದ್ದರು. ಹಾಗಾಗಿ ಅವರ ನೆನಪಾಗಿ ನನ್ನ ಮುಂದಿರುವ ಹೂ ತೋಟದಲ್ಲಿ ಅವರ ಕಂಚಿನ ಸುಂದರ ಪ್ರತಿಮೆಯನ್ನು ರಾಜರು ನಿರ್ಮಾಣ ಮಾಡಿದರು. ಅಠಾರ ಕಚೇರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ವೇಳೆ ನನ್ನ ಸುತ್ತ 92 ಎಕರೆ ವಿಶಾಲ ಪ್ರದೇಶವಿತ್ತು. ಆದರೆ ಭಾರತಕ್ಕೆ ಸ್ವಾತಂತ್ರ್ಯ ಬಂದು ಪ್ರಜಾಪ್ರಭುತ್ವ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ನನ್ನ ಹೆಸರನ್ನು ಜಿಲ್ಲಾಧಿಕಾರಿ ಕಚೇರಿ ಎಂದು ಬದಲಿಸಿದರು. ಹಲವು ದಿವಾನರು ಹಾಗೂ ಹತ್ತಾರು ಜಿಲ್ಲಾಧಿಕಾರಿಗಳು ನನ್ನಾಸರೆಯಲ್ಲಿ ವಿರಾಜಮಾನ ರಾಗಿ ಕಾರ್ಯ ನಿರ್ವಹಿಸಿ ಹೋಗಿದ್ದಾರೆ.

ಇಷ್ಟು ವರ್ಷವಾದರೂ ನೋಡಲು ನಾನು ಬಹಳ ಸುಂದರ, ಮನೋಹರ ಎಂದೆಲ್ಲಾ ಹೇಳುತ್ತಿದ್ದರು. ಅದೂ ನಿಜವೇ ನನಗೆ ವಯಸ್ಸಾಗಿರಬಹುದು, ಆದರೆ ಇನ್ನೂ ತುಂಬಾ ಗಟ್ಟಿಮುಟ್ಟಾಗಿದ್ದೇನೆ. ಮಳೆ, ಗಾಳಿ, ಬಿಸಿಲು, ಸಿಡಿಲು, ಗುಡುಗು ಏನೇ ಬಂದರೂ ಗಟ್ಟಿಯಾಗಿ ನಿಂತು ನನ್ನಾಸರೆಯಲ್ಲಿದ್ದವರನ್ನು ಕಾದಿದ್ದೇನೆ. ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಗಿಜಿಗಿಡುತ್ತಿದ್ದರು. ಮುಖ್ಯಮಂತ್ರಿಗಳು, ಹಲವು ಮಂತ್ರಿಗಳು ಇಲ್ಲಿಗೆ ಬಂದು ಪ್ರಗತಿ ಪರಿಶೀಲನೆ ನಡೆಸುತ್ತಿದ್ದರು. ಇಷ್ಟು ಮಹತ್ವದ್ದಾಗಿದ್ದ ನಾನು ಈಗ ಬೇಡವಾಗಿದ್ದೇನೆ. ಹೊಸ ನೀರು ಬಂದು, ಹಳೆ ನೀರು ಕೊಚ್ಚಿ ಹೋದಂತಾಗಿದೆ. ಎಲ್ಲರೂ ನನ್ನ ಬಿಟ್ಟು ಹೊಸ ಕಟ್ಟಡಕ್ಕೆ ಹೋಗಿದ್ದಾರೆ. ವಯಸ್ಸಾದ ಮೇಲೆ ಆರೋಗ್ಯ ಸಮಸ್ಯೆ ಸಹಜ. ಅದರಂತೆ ನನ್ನಲ್ಲೂ ಸ್ವಲ್ಪ ಸಮಸ್ಯೆಯಾಯಿತು. ರಿಪೇರಿ, ನವೀಕರಣ ಮಾಡಿಸಿ ಇನ್ನೂ ಕೆಲ ವರ್ಷ ನನ್ನಾಸರೆಯಲ್ಲೇ ಇರಬಹುದಿತ್ತು ಆದರೆ ಇಡೀ ಜಿಲ್ಲಾಡಳಿತವನ್ನು ಸಿದ್ಧಾರ್ಥ ನಗರದ ಹೊಸ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗಿದೆ. ನನ್ನ ಜಾಗದಲ್ಲಿ ನಿಂತು ಯೋಚಿಸಿ, ನನ್ನ ಅಂತರಂಗ ಅರಿವಾಗುತ್ತದೆ. ಎಲ್ಲರಿಗೂ ಒಳ್ಳೆಯದಾಗಲಿ. ಈಗ ನನ್ನನ್ನು ಹಾಳು ಕೊಂಪೆ ಮಾಡಬೇಡಿ ಪ್ಲೀಸ್....





ಶಾಲು–ಹಾರದ ಬದಲು ನೋಟ್ ಬುಕ್ ಕೊಡಿ

ಅಭಿನಂದಿಸುವವರಿಗೆ ಶಾಸಕ ಶ್ರೀವತ್ಸ ಸಲಹೆ



> ಹಾರ 30 ಸೆಕೆಂಡ್ ಕೂಡ ಕೊರಳಲ್ಲಿ ಇರುವುದಿಲ್ಲ. ಇನ್ನು ಅಷ್ಟೊಂದು ಶಾಲುಗಳ ಅವಶ್ಯಕತೆ ಯಾರಿಗೂ ಇಲ್ಲ. ಹಾಗಾಗಿ ಕಾಮಗಾರಿ ಗುದ್ದಲಿ ಪೂಜೆ ವೇಳೆ ಯಾರೂ ಹಾರ–ಶಾಲು ಹಾಕಬೇಡಿ. ಆ ಹಣದಲ್ಲಿ ಕನಿಷ್ಠ 10 ನೋಟ್ ಪುಸ್ತಕಗಳನ್ನು ಕೊಡಿ. ಅವುಗಳನ್ನು ಸರ್ಕಾರಿ ಶಾಲಾ–ಕಾಲೇಜಿನ ಮಕ್ಕಳಿಗೆ ಬೇಡಿಕೆಯನುಸಾರ ತಲುಪಿಸುತ್ತೇನೆ ಎಂದು ಗುತ್ತಿಗೆದಾರರಿಗೆ ತಿಳಿಸಿದ್ದೇನಷ್ಟೇ.
> –ಟಿ.ಎಸ್.ಶ್ರೀವತ್ಸ, ಶಾಸಕ

ಮೈಸೂರು, ಜೂ.20(ಎಸ್‌ಬಿಡಿ)– ಹಾರ–ಶಾಲು ಬೇಡ, ಆ ಹಣದಲ್ಲಿ ನೋಟ್ ಪುಸ್ತಕಗಳನ್ನು ಕೊಡಿ. ಹೀಗೆ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಗುತ್ತಿಗೆದಾರರಿಗೆ ಸೂಚಿಸುವ ಮೂಲಕ ಮೈಸೂರಲ್ಲಿ ನೂತನ ಸಂಪ್ರದಾಯಕ್ಕೆ ನಾಂದಿ ಹಾಡಿದ್ದಾರೆ.

ಯಾವುದೇ ಕಾಮಗಾರಿ ಆರಂಭಿಸುವ ಮುನ್ನ ಆಯಾ ಕ್ಷೇತ್ರದ ಶಾಸಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳಿಂದ ಗುದ್ದಲಿ ಪೂಜೆ ನೆರವೇರಿಸುವ ಸಂಪ್ರದಾಯ ರೂಢಿಗತ ವಾಗಿದೆ. ಈ ವೇಳೆ ಶಾಸಕರಿಗೆ ಶಾಲು ಹೊದಿಸಿ, ಹಾರ ಹಾಕಿ ಗೌರವಿಸುವ ಸಂಪ್ರದಾಯವಿದೆ. ಆದರೆ ಶಾಸಕ ಶ್ರೀವತ್ಸ ಅವರು ಕಾಮಗಾರಿಗೆ ಚಾಲನೆ ನೀಡಲು ತಮ್ಮನ್ನು ಆಹ್ವಾನಿಸುವ ಗುತ್ತಿಗೆದಾರರಿಗೆ ವಿಶೇಷ ರೀತಿಯ ತಾಕೀತು ಮಾಡಿದ್ದಾರೆ. ಗುದ್ದಲಿ ಪೂಜೆ ವೇಳೆ ಹಾರ–ಶಾಲು ಹಾಕಬೇಡಿ. ಬದಲಿಗೆ ಕನಿಷ್ಠ 10 ನೋಟ್ ಪುಸ್ತಕಗಳನ್ನು ಕೊಡಿ. ಅವುಗಳನ್ನು ಸಂಗ್ರಹ ಮಾಡಿಟ್ಟು ಸರ್ಕಾರಿ ಶಾಲಾ–ಕಾಲೇಜಿನಲ್ಲಿ ಅಗತ್ಯವಿರುವ ಮಕ್ಕಳಿಗೆ ವಿತರಿಸುತ್ತೇನೆ. ಇದರಿಂದ ನಿಮಗೂ ಪುಣ್ಯಪ್ರಾಪ್ತಿ ಯಾಗುತ್ತದೆ ಎಂದು ಗುತ್ತಿಗೆದಾರರಿಗೆ ತಿಳಿಸಿದ್ದಾರೆ.

ಹಾಗಾಗಿ ಅಗ್ರಹಾರದ ಉತ್ತರಾದಿಮಠದ ರಸ್ತೆ ಎಸ್.ಎನ್. ಪಂಡಿತ ಗಲ್ಲಿಯಲ್ಲಿ ಇಂಟರ್‌ಲಾಕ್ ಅಳವಡಿಸುವ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುವ ವೇಳೆ ಗುತ್ತಿಗೆದಾರು ಹಾರ–ಶಾಲು ಬದಲಾಗಿ ಶಾಸಕರಿಗೆ ನೋಟ್ ಪುಸ್ತಕಗಳನ್ನು ನೀಡಿ ಅಭಿನಂದಿಸಿದ್ದಾರೆ. ಶಾಸಕರ ಈ ನಡೆ ಪ್ರಶಂಸೆಗೆ ಪಾತ್ರವಾಗಿದೆ. ಹಾರ–ಶಾಲುಗೆ ನೂರಾರು ರೂ. ಹಣ ವ್ಯಯಿಸುವುದರ ಬದಲು ಆ ಹಣದಲ್ಲಿ ಕೆಲ ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗುವ ಉದ್ದೇಶದಿಂದ ಶಾಸಕರು ಮಾದರಿ ನಿರ್ಧಾರ ಕೈಗೊಂಡಿದ್ದಾರೆ ಎಂದು ಸಾರ್ವಜನಿಕರೂ ಬಣ್ಣಿಸಿದ್ದಾರೆ.

ಬಿ.ಎಸ್.ಯಡಿಯೂರಪ್ಪನವರು 2019ರಲ್ಲಿ ಮುಖ್ಯ ಮಂತ್ರಿಯಾಗಿದ್ದಾಗ ಅಭಿನಂದಿಸಲು ಬರುವವರು ಹೂಗುಚ್ಛ, ಹಾರ–ತುರಾಯಿ ತರದಂತೆ ಮನವಿ ಮಾಡಿದ್ದರು. 2020ರಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ಸಂದರ್ಭದಲ್ಲೂ ನಿಮ್ಮ ಹಾರೈಕೆಯೇ ಬಹುದೊಡ್ಡ ಉಡುಗೊರೆ, ದುಂದುವೆಚ್ಚ ಮಾಡಬೇಡಿ ಎಂದು ಕೋರಿದ್ದರು. ಸಿದ್ದರಾಮಯ್ಯನವರು ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಹಾರ–ತುರಾಯಿ ಬದಲು ಪುಸ್ತಕ ನೀಡುವಂತೆ ಮನವಿ ಮಾಡಿಕೊಂಡರು. ಅಂದಿನಿಂದ ಕಾರ್ಯಕ್ರಮಗಳಲ್ಲಿ ಹೂವಿನ ಬದಲು ಪುಸ್ತಕಗಳನ್ನೇ ನೀಡಲಾಗುತ್ತಿದೆ. ಸಿಎಂ ಮನವಿ ಬೆನ್ನಲ್ಲೇ ಸಚಿವರಾದ ಈಶ್ವರ್ ಖಂಡ್ರೆ ದಿನೇಶ್ ಗುಂಡೂರಾವ್, ಶಾಸಕರಾದ ಹಂಪನಗೌಡ, ಕೂಡ್ಲಿಗಿ ಶ್ರೀನಿವಾಸ್ ಸೇರಿದಂತೆ ಹಲವರು ಕಾರ್ಯಕ್ರಮಗಳಲ್ಲಿ ಹಾರ–ತುರಾಯಿ ಬೇಡ ಎಂದು ಕೇಳಿಕೊಂಡಿದ್ದಾರೆ. ಹೀಗೆ ಅನೇಕ ರಾಜಕಾರಣಿಗಳು ಹಾರ–ತುರಾಯಿಗೆ ಬ್ರೇಕ್ ಹಾಕಲು ಪ್ರಯತ್ನಿಸಿದ್ದಾರೆ.

ಸದ್ಯ ಮೈಸೂರಿನಲ್ಲಿ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿರುವ ಶಾಸಕ ಶ್ರೀವತ್ಸ ಅವರ ನಿರ್ಧಾರ ಸ್ತುತ್ಯಾರ್ಹ. ಹಾರ–ತುರಾಯಿ ಹಾಕಿಸಿಕೊಂಡು ಸಂಭ್ರಮಿಸುವುದಕ್ಕಿಂತ ವಿದ್ಯಾರ್ಥಿಗಳಿಗೆ ಬೇಕಾದ ನೋಟ್ ಪುಸ್ತಕಗಳನ್ನು ಪಡೆಯುತ್ತಿರುವುದು ಅನುಕರಣೀಯ.

ಅಮೇರಿಕಾ ಅಧ್ಯಕ್ಷ ಬೈಡನ್ ಪುತ್ರನ ವಿರುದ್ಧ ತೆರಿಗೆ, ಶಸ್ತ್ರಾಸ್ತ್ರ ಅಕ್ರಮ ಆರೋಪ

ವಾಷಿಂಗ್‌ಟನ್: ಅಮೇರಿಕಾ ಅಧ್ಯಕ್ಷ ಜೋ ಬೈಡನ್ ಪುತ್ರನ ವಿರುದ್ಧ ತೆರಿಗೆ ಶಸ್ತ್ರಾಸ್ತ್ರ ಅಕ್ರಮ ಆರೋಪ ಕೇಳಿಬಂದಿದೆ.

ಬೈಡನ್ ಎರಡನೇ ಪುತ್ರ ಹಂಟರ್ ವಿರುದ್ಧ ಫೆಡರಲ್ ಆದಾಯ ತೆರಿಗೆ ಪಾವತಿ ಸಲು ವಿಫಲವಾಗಿರುವ ಆರೋಪ ಹಾಗೂ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿ ರುವ ಆರೋಪವೂ ಕೇಳಿಬಂದಿರುವು ದನ್ನು ಸುದ್ದಿ ಸಂಸ್ಥೆಗಳು ವರದಿ ಮಾಡಿವೆ.

ಆದರೆ ಡೆಲವೇರ್‌ನಲ್ಲಿರುವ ಅಮೇರಿಕಾ ಜಿಲ್ಲಾ ಕೋರ್ಟ್‌ಗೆ ಸಲ್ಲಿಕೆ ಮಾಡಲಾ ಗಿರುವ ಪತ್ರದ ಪ್ರಕಾರ ಜ್ಯೂನಿಯರ್ ಬೈಡನ್ ನ್ಯಾಯಾಂಗ ಇಲಾಖೆ ಯೊಂದಿಗೆ ಒಪ್ಪಂದ ಮಾಡಿಕೊಂಡಿ ದ್ದಾರೆ ಎಂದು ತಿಳಿದುಬಂದಿದೆ.

ಹಂಟರ್ ಬೈಡನ್‌ನ್ನು ತೆರಿಗೆ ಅಪರಾಧ ಗಳ ದುಷ್ಕೃತ್ಯಗಳಿಗೆ ತಪ್ಪಿತಸ್ಥನೆಂದು ಒಪ್ಪಿಕೊಳ್ಳುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ. ವಾದಕವಸ್ತು ಬಳಕೆದಾರನಾಗಿ ಅಕ್ರಮವಾಗಿ ಬಂದೂಕು ಹೊಂದಿರುವ ಆರೋಪದ ಮೇಲೆ, ಅವರು ಇನ್ನೂ ತಪ್ಪು ಒಪ್ಪಿಕೊಂಡಿಲ್ಲ.

ಪ್ರಧಾನಿ ನರೇಂದ್ರ ಮೋದಿ ಪ್ರವಾಸ ಕ್ಕಾಗಿ ಯುಎಸ್‌ಗೆ ತೆರಳುತ್ತಿರುವುದರ ನಡುವೆ ಈ ಸುದ್ದಿ ಬಂದಿದೆ. ಪ್ರಧಾನಿ ಮೋದಿಗೆ ಬಿಡೆನ್ಸ್‌ನಿಂದ ಆತಿಥ್ಯ ನೀಡಲಿದ್ದಾರೆ

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಮೈಸೂರು,ಜೂ.20(ಎಂಟಿವೈ)– ಆರೋಗ್ಯ ಮತ್ತು ಪೌಷ್ಟಿಕ ಸಮೀಕ್ಷೆ (ಹೆಚ್‌ಎನ್‌ಎಸ್) ಮಾಡಲು ತಂಡ ರಚಿಸಬೇಕು. ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಆಶಾ ಕಾರ್ಯಕರ್ತೆ ಮೇಲೆ ಹಲ್ಲೆ ನಡೆಸಿದ ಆರೋಪಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಆಶಾ ಕಾರ್ಯಕರ್ತೆಯರು ಬೃಹತ್ ಪ್ರತಿಭಟನೆ ನಡೆಸಿದರು.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದ ಆಶಾ ಕಾರ್ಯಕರ್ತರು, ಆರೋಗ್ಯ ಮತ್ತು ಪೌಷ್ಟಿಕ ಸಮೀಕ್ಷೆ ನಡೆಸುತ್ತಿರುವ ಆಶಾ ಕಾರ್ಯಕರ್ತೆಯರು ಅಭದ್ರತೆಯಲ್ಲಿ ಕೆಲಸ ನಿರ್ವಹಿಸುವಂತಾಗಿದೆ. ಹೆಚ್.ಡಿ.ಕೋಟೆ ತಾಲೂಕಿನ ಅಣ್ಣೂರಿನಲ್ಲಿ ಸಮೀಕ್ಷೆಗಾಗಿ ತೆರಳಿದ್ದ ವೇಳೆ ಗ್ರಾಮದ ಯುವಕ ಹಲ್ಲೆ ನಡೆಸಿದ್ದಾನೆ. ಕೂಡಲೇ ಆರೋಪಿ ಯನ್ನು ಬಂಧಿಸಬೇಕು. ಹಲ್ಲೆ ನಡೆಸಿದ ವ್ಯಕ್ತಿ ಪ್ರಭಾವಿ ಕುಟುಂಬದವನಾಗಿದ್ದು, ಪ್ರಕರಣ ಮುಚ್ಚಿ ಹಾಕುವ ಸಂಚು ನಡೆಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ಹಲ್ಲೆ ಸಂಬಂಧ ಎಫ್‌ಐಆರ್ ದಾಖಲಿಸ ಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಇದೇ ವೇಳೆ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಸಮಿತಿಯ ಪಿ.ಎಸ್.ಸಂಧ್ಯಾ ಮಾತನಾಡಿ, ಹಲ್ಲೆಗೊಳಗಾದ ಆಶಾ ಕಾರ್ಯಕರ್ತೆಗೆ ಸೂಕ್ತ ವೈದ್ಯಕೀಯ ಸೌಲಭ್ಯ ಒದಗಿಸಬೇಕು. ಆಶಾಗಳಿಗೆ ಸೂಕ್ತ ಭದ್ರತೆ ರಕ್ಷಣೆ ನೀಡಬೇಕು. ಸರ್ಕಾರದ ನಿಯಮಾನುಸಾರ ಆರೋಗ್ಯ ಮತ್ತು ಪೌಷ್ಟಿಕ ಸಮೀಕ್ಷೆಗೆ ನಡೆಸಲು ಸಮುದಾಯ ಆರೋಗ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿ ಕಾರಿ, ಆರೋಗ್ಯ ನಿರೀಕ್ಷಣಾಧಿಕಾರಿ ಹಾಗೂ ಆಶಾ ಕಾರ್ಯಕರ್ತೆಯರು ಒಳಗೊಂಡಿರುವ ತಂಡ ರಚನೆ ಮಾಡುವಂತೆ ಸೂಚಿಸಲಾಗಿದೆ. ಆದರೆ, ಬಹುತೇಕ ಎಲ್ಲಾ ಕಡೆಯೂ ಆಶಾ ಕಾರ್ಯಕರ್ತೆಯರನ್ನು ಮಾತ್ರ ಸರ್ವೆ ಮಾಡಲು ಕಳುಹಿಸಲಾಗುತ್ತಿದೆ ಎಂದರು.



ಸಮೀಕ್ಷೆ ವೇಳೆ ಮನೆಯಲ್ಲಿ ವಾಹನಗಳಿವೆಯೇ ಎಂದು ಪ್ರಶ್ನಿಸಬೇಕಾಗುತ್ತದೆ. ಮೊಬೈಲ್ ಆ್ಯಪ್ ಮೂಲಕ ಸರ್ವೆ ಮಾಡಬೇಕಾಗಿದೆ. ಒಂದು ಮನೆಗೆ ಕನಿಷ್ಠ 45 ನಿಮಿಷ ಬೇಕಾಗುತ್ತದೆ. ಪ್ರತಿಯೊಂದು ಮನೆಯಲ್ಲೂ ಪ್ರತಿಯೊಬ್ಬರದ್ದು ಬಿಪಿಎಲ್ ಕಾರ್ಡ್, ಅವರ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿ, ವೈಯಕ್ತಿಕ ಮಾಹಿತಿಯನ್ನು ಮೊಬೈಲ್‌ನಲ್ಲಿ ಅಪ್ಲೋಡ್ ಮಾಡಬೇಕು. ಆಶಾ ಕಾರ್ಯಕರ್ತೆಗೆ ಆಂಡ್ರಾಯ್ಡ್ ಮೊಬೈಲ್ ನೀಡಿಲ್ಲ. ಮೊಬೈಲ್ ಡಾಟಾ ಹಾಕಿಸಿಲ್ಲ. ಸರ್ಕಾರಿ ನೌಕರರು ಸೇರಿದಂತೆ ಹಲವರು ಸರ್ವೆ ವೇಳೆ ಸರಿಯಾದ ಮಾಹಿತಿ ನೀಡಲು ಹಿಂದೇಟು ಹಾಕುತ್ತಾರೆ. ಅಧಿಕಾರಿಗಳು ಆಶಾ ಕಾರ್ಯಕರ್ತೆಯೊಬ್ಬರನ್ನೇ ಕಳುಹಿಸಿ ಸರ್ವೆ ಮಾಡಲು ಒತ್ತಾಯಿಸುತ್ತಿದ್ದಾರೆ. ಒತ್ತಡಕ್ಕೆ ಬಲಿಯಾಗಿ ಕೆಲಸ ಮಾಡಿದ ಆಶಾ ಕಾರ್ಯಕರ್ತೆಯರು ಹಲ್ಲೆಗೊಳಗಾಗುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಮನವಿ ಸ್ವೀಕರಿಸಿ ಮಾತನಾಡಿ, ಆಶಾ ಕಾರ್ಯಕರ್ತೆ ಮೇಲೆ ನಡೆದ ಹಲ್ಲೆ ಘಟನೆ ನೋವು ತರುವಂತದ್ದಾಗಿದೆ. ಮುಂದೆ ಇಂತಹ ಘಟನೆ ಮರುಕಳಿಸದಂತೆ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಅಪರಾಧಿಗೆ ಕಾನೂನು ರೀತಿಯ ಶಿಕ್ಷೆ ದೊರೆಯಲು ಕಠಿಣ ಕ್ರಮ ಕೈಗೊಳ್ಳಲಾಗುವುದು. ಹೆಚ್‌ಎನ್‌ಎಸ್ ಮಾಡುವಾಗ ತಂಡದ ಹೊರತಾಗಿ ಯಾರು ಮಾಡಬೇಕಾಗಿಲ್ಲ, ಇದರ ಬಗ್ಗೆ ಸುತ್ತೋಲೆ ಹೊರಡಿಸುವುದಾಗಿ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಮೈಸೂರು ನಗರ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾಧ್ಯಕ್ಷೆ ಸೀಮಾ, ಮುಖಂಡರಾದ ಭಾಗ್ಯ, ಮಣಿಲಾ, ಕೋಮಲ, ಸುನೀತಾ, ಹೇಮಾ ಸೇರಿದಂತೆ ಸುಮಾರು 500ಕ್ಕೂ ಹೆಚ್ಚು ಆಶಾ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

ನಾಳೆಯಿಂದ ಗಿರಿಜಾ ಕಲ್ಯಾಣ ಮಹೋತ್ಸವ

● ದೇವಾಲಯದಲ್ಲಿ ಭರದ ಸಿದ್ಧತೆ ● ಸಹಸ್ರಾರು ಭಕ್ತರು ಸಾಕ್ಷಿಯಾಗುವ ನಿರೀಕ್ಷೆ





ನಂಜನಗೂಡು, ಜೂ.20– ದಕ್ಷಿಣ ಕಾಶಿ ನಂಜನಗೂಡಿನ ಶ್ರೀಕಂಠೇಶ್ವರ, ಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವ ಜೂ. 22 ರಿಂದ 29 ರವರೆಗೆ ನಡೆಯಲಿದ್ದು, ಸಾವಿರಾರು ಭಕ್ತರು ಆಗಮಿಸುವ ನಿರೀಕ್ಷೆ ಇದೆ ಹೀಗಾಗಿ ದೇವಾಲಯದ ವತಿಯಿಂದ ಸಿದ್ಧತೆಗಳು ಭರದಿಂದ ಸಾಗಿದೆ.

ಗಿರಿಜಾ ಕಲ್ಯಾಣ ಅಂಗವಾಗಿ ದೇವಾಲಯದ ಆವರಣದಲ್ಲಿ ತಳಿರು ತೋರಣ ಕಟ್ಟಿ ಹಾಗೂ ಚಪ್ಪರ ಹಾಕಲಾಗಿದೆ. ದೇವಾಲಯದ ಶಾಸ್ತ್ರ ಮಂಟಪವನ್ನು ವಿವಿಧ ಬಗೆಯ ಹೂಗಳಿಂದ ಸಿಂಗರಿಸಿದ್ದು, ದೇವಾಲಯದ ಸುತ್ತಮುತ್ತ ವಿದ್ಯುತ್ ದೀಪದಿಂದ ಅಲಂಕೃತಗೊಳಿಸಲಾಗಿದೆ.

8 ದಿನಗಳ ಕಾಲ ಜರುಗುವ ಗಿರಿಜಾ ಕಲ್ಯಾಣ ಅಂಗವಾಗಿ ಪ್ರತಿದಿನ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆಯಲಿವೆ. ಜೂ.22ರಂದು ಸಂಜೆ 5ರಿಂದ ರಾತ್ರಿ 8 ರವರೆಗೆ ವರ ಪೂಜಾ ಮಹೋತ್ಸವ ನಡೆಯಲಿದೆ. ಜೂ.23ರಂದು ಪ್ರಾತಃಕಾಲ 9 ಗಂಟೆಗೆ ಅನುಜ್ಞಾಪೂರ್ವಕ ಕನ್ಯಾ, ಕಳಸ, ಅಂಕುರಾರ್ಪಣ ಪೂರ್ವಕ ಮಂಗಳಸ್ನಾನ, ಮಧ್ಯಾಹ್ನ 12 ಗಂಟೆಗೆ ನಾಂದಿ ಗ್ರಹಂತುಜ್ಞ, ಸಂಜೆ 5ಕ್ಕೆ ಕಾಶಿಯಾತ್ರಾ ಮಹೋತ್ಸವ, ರಾತ್ರಿ 6.30ರಿಂದ 7.30 ಗಂಟೆಯೊಳಗೆ ಸಲ್ಲುವ ಧನುರ್ ಲಗ್ನದಲ್ಲಿ ಗಿರಿಜಾ ಕಲ್ಯಾಣದ ಧಾರಾ ಮಹೋತ್ಸವ ಅಕ್ಷತಾರೋಹಣ ನಡೆಯಲಿದೆ.

ಜೂ.24ರಂದು ಔಪಾಸನಾ, ಉರುಟಣೆ, ಉಯ್ಯಾಲೋತ್ಸವ ನಡೆಯಲಿದೆ. ಜೂ.27 ರಂದು ಪ್ರಾತಃಕಾಲ 11 ಗಂಟೆಗೆ ದೇವತಾ ಉದ್ವಾಸನೆ, ವಿವಾಹ ದೀಕ್ಷಾ ವಿಸರ್ಜನೆ, ಸ್ಕಂಧ ಪೂಜೆ, ಅವಭೃತ ತೀರ್ಥಸ್ನಾನ, ಬಳಿಕ ರಾತ್ರಿ 7 ಗಂಟೆಗೆ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ಜರುಗಲಿದೆ. ಜೂ.28 ಮತ್ತು 29ರಂದು ಕ್ರಮವಾಗಿ ಕಪಿಲಾ ನದಿಯ ತೇಲುವ ದೇವಾಲಯದಲ್ಲಿ ತೆಪ್ಪೋತ್ಸವ ಜರುಗಲಿದೆ. ಜೂ.29 ರಂದು ತೆಪ್ಪೋತ್ಸವದ ನಂತರ ಶಯನೋತ್ಸವ ಕಾರ್ಯಕ್ರಮದ ಮೂಲಕ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ತೆರೆ ಬೀಳಲಿದೆ ಎಂದು ದೇವಾಲಯದ ಪ್ರಧಾನ ಆಗಮಿಕರಾದ ನಾಗಚಂದ್ರ ದೀಕ್ಷಿತ್ ತಿಳಿಸಿದ್ದಾರೆ.

ಆಷಾಢಕ್ಕೂ ಮುನ್ನ ಸಾಮಾನ್ಯ ಜನರ ಮದುವೆಗಳೆಲ್ಲಾ ಮುಗಿದ ನಂತರ ಆಷಾಢ ಮಾಸದಲ್ಲಿ ಜರುಗುವ ನಂಜುಂಡೇಶ್ವರ ಮತ್ತು ಪಾರ್ವತಿ ಅಮ್ಮನವರ ವಿವಾಹ ನೋಡುವುದೇ ಭಕ್ತರಿಗೆ ಆನಂದ.

8 ದಿನಗಳ ಕಾಲ ನಡೆಯುವ ನಂಜುಂಡೇಶ್ವರ ಮತ್ತು ಪಾರ್ವತಿ ಅಮ್ಮನವರ ಗಿರಿಜಾ ಕಲ್ಯಾಣ ಮಹೋತ್ಸವಕ್ಕೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ದೇವಾಲಯದ ಇಒ ಎಂ.ಜಗದೀಶ್‌ಕುಮಾರ್ ಮನವಿ ಮಾಡಿದ್ದಾರೆ

ಗಾಂಜಾ ಸಾಗಿಸುತ್ತಿದ್ದ ಆರೋಪಿ ಬಂಧನ

ಹುಣಸೂರು, ಜೂ.20– ಅಕ್ರಮವಾಗಿ ಗಾಂಜಾ ಸಾಗಿಸುತ್ತಿದ್ದ ಆರೋಪಿಯನ್ನು ಮಾಲು ಸಮೇತ ಹುಣಸೂರು ನಗರ ಠಾಣೆ ಪೋಲಿಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ನಗರದ ವಿ.ಪಿ.ಬೋರೆ ನಿವಾಸಿ ಸಯ್ಯದ್ ಇಬ್ರಾಹಿಂ ಅವರ ಪುತ್ರ ಸಯ್ಯದ್ ಕಲೀಂ ಬಂಧಿತ ಆರೋಪಿ. ಮಂಗಳವಾರ ಬೆಳಗ್ಗೆ ನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಧರ್ಮೇಂದ್ರ ತಮ್ಮ ಸಿಬ್ಬಂದಿಯೊಂದಿಗೆ ರತ್ನಪುರಿ ರಸ್ತೆಯ ಸಲೀಂ ಪ್ಯಾಲೇಸ್ ಬಳಿ ವಾಹನ ತಪಾಸಣೆ ಮಾಡುತ್ತಿದ್ದ ವೇಳೆ ರತ್ನಪುರಿ ಕಡೆಯಿಂದ (ಕೆಎ.45, ಇಸಿ.2573) ಬೈಕ್‌ನಲ್ಲಿ ಆಗಮಿಸಿದ ಸಯ್ಯದ್ ಕಲೀಂನನ್ನು ತಡೆದಿದ್ದಾರೆ. ಆದರೂ ಬೈಕ್ ನಿಲ್ಲಿಸದೇ ಹೋದ ಸಯ್ಯದ್ ಕಲೀಂನನ್ನು ಬೆನ್ನತ್ತಿದ ಪೊಲೀಸರು ಆತನನ್ನು ಹಿಡಿದು ತಪಾಸಣೆಗೊಳಪಡಿಸಿದಾಗ 9 ಸಾವಿರ ರೂ. ಮೌಲ್ಯದ ಗಾಂಜಾ ಪತ್ತೆಯಾಗಿದೆ. ತಕ್ಷಣ ಆರೋಪಿಯನ್ನು ಮಾಲು ಸಮೇತ ವಶಕ್ಕೆ ಪಡೆದ ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಎಸ್‌ಐ ನಾಗಯ್ಯ, ಸಿಬ್ಬಂದಿಗಳಾದ ಅನಿಲ್, ಮಂಜುನಾಥ್, ಚಾಲಕ ಅಲಿಂ ಭಾಗವಹಿಸಿದರು.

ಜೂ.24ರಂದು ಕಾಂಗ್ರೆಸ್‌ನಿಂದ ಕೃತಜ್ಞತಾ ಸಮಾರಂಭ: ದರ್ಶನ್



ನಂಜನಗೂಡು, ಜೂ.20– ಸುಮಾರು 47 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ನನ್ನನ್ನು ಗೆಲ್ಲಿಸಿರುವ ಕ್ಷೇತ್ರದ ಮತದಾರರಿಗೆ ಕೃತಜ್ಞತೆ ಸಲ್ಲಿಸುವ ಸಲುವಾಗಿ ಜೂ.24 ರಂದು ನಗರದ ವಿದ್ಯಾವರ್ಧಕ ಕಾಲೇಜು ಮೈದಾನದಲ್ಲಿ ಬೆಳಗ್ಗೆ 11 ಗಂಟೆಗೆ ಮತದಾರರಿಗೆ ಕೃತಜ್ಞತೆ ಸಮಾರಂಭ ಆಯೋಜಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರ ಕುಂದುಕೊರತೆ ಆಲಿಸಿದ ನಂತರ ಮಾತನಾಡಿದ ಅವರು, ಕೃತಜ್ಞತಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಂಸದ ಡಿ.ಕೆ.ಸುರೇಶ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ವಿಧಾನಸಭಾ ಉಪಾಧ್ಯಕ್ಷ ಪುಟ್ಟರಂಗಶೆಟ್ಟಿ, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಅನಿಲ್ ಚಿಕ್ಕಮಾದು, ಗಣೇಶ್‌ಪ್ರಸಾದ್, ಕೆಪಿಸಿಸಿ ಕಾರ್ಯದರ್ಶಿ ಶ್ರೀಕಂಠು, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಸೇರಿದಂತೆ ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ ಎಂದರು. ಈ ವೇಳೆ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಅಧ್ಯಕ್ಷ ಕುರಟ್ಟಿ ಮಹೇಶ್, ಶ್ರೀಕಂಠನಾಯಕ, ದೊರೆಸ್ವಾಮಿ ನಾಯಕ, ಸೌಭಾಗ್ಯ, ವಕೀಲ ನಾಗರಾಜಯ್ಯ, ತಗಡೂರು ನಾಯಕ, ಸ್ವಾಮಿ, ಕಳಲೆ ಮಹೇಶ್, ರಾಚನಾಯಕ, ಮಹೇಂದ್ರ, ಕಳಲೆ ರಮೇಶ ಸೇರಿದಂತೆ ಹಲವರಿದ್ದರು.



ಮೂಗೂರು ಗ್ರಾಪಂ ಆವರಣದಲ್ಲಿ ಮೂಗೂರು ಸಮುದಾಯ ಆರೋಗ್ಯ ಕೇಂದ್ರ ಹಾಗೂ ಗ್ರಾಪಂ ಆರೋಗ್ಯ ಅಮೃತ ಅಭಿಯಾನ ಕಾರ್ಯಕ್ರಮದಡಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಈ ಸಂದರ್ಭ ಡಾ.ರಾಘವೇಂದ್ರ, ಆಪ್ತ ಸಮಾಲೋಚಕ ರಘುರಾಂ, ಸಮುದಾಯ ಆರೋಗ್ಯಾಧಿಕಾರಿ ಸಂಗೀತ, ಐಸಿಟಿಸಿ ಸುಬ್ರಹ್ಮಣ್ಯ, ಶಾಂತಮ್ಮ, ಪುಟ್ಟರಾಜು, ಹರ್ಷಿತ್, ಗ್ರಾಮಸ್ಥರಿದ್ದರು.

ರಾಜಕೀಯ ಸ್ಥಾನಮಾನಕ್ಕಾಗಿ ಸವಿತಾ ಸಮಾಜ ಒಗ್ಗೂಡಬೇಕು



ತಿ.ನರಸೀಪುರ, ಜೂ.20– ರಾಜ್ಯದಲ್ಲಿ ಹಿಂದುಳಿದ ವರ್ಗಗಳು, ರೈತರು ಹಾಗೂ ಬಡವರ ಪರವಾದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುವುದರಿಂದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಲು ಹಾಗೂ ರಾಜಕೀಯ ಸ್ಥಾನಮಾನ ಪಡೆಯಲು ಸವಿತಾ ಸಮಾಜ ಸಂಘಟಿತವಾಗಬೇಕು ಎಂದು ಹೋಬಳಿ ಶಾಖೆ ಸಂಘಗಳ ಒಕ್ಕೂಟದ ಅಧ್ಯಕ್ಷ ಸಿದ್ದೇಶ್ ಕರೆ ನೀಡಿದರು.

ಪಟ್ಟಣದ ಶ್ರೀಮೂಲ ಸ್ಥಾನೇಶ್ವರ ದೇವಾಲಯದ ಆವರಣದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಜನಪರ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು ಎಂದು ನಾಡಿನ ಸವಿತಾ ಸಮುದಾಯ ಕಾಂಗ್ರೆಸ್ ಬೆಂಬಲಿಸಿತು. ತಾಲೂಕಿನ 5 ಹೋಬಳಿಗಳಲ್ಲಿ ಸವಿತಾ ಸಮಾಜದವರು ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರ ಕೈ ಹಿಡಿದಿದ್ದರಿಂದ ಉಭಯ ನಾಯಕರು ಅತ್ಯಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಿದರು ಎಂದರು.

ರಾಜ್ಯ ಸರ್ಕಾರ ವಿವಿಧ ನಿಗಮಗಳ ಮೂಲಕ ಸವಿತಾ ಸಮಾಜಕ್ಕೆ ಸಾಲ ಸೌಲಭ್ಯ ಸೇರಿದಂತೆ ಹಲವು ಸವಲತ್ತು ನೀಡುತ್ತಿದ್ದರೂ, ಅವುಗಳು ನಮಗೆ ಸಿಗುತ್ತಿಲ್ಲ. ಹೀಗಾಗಿ ಈ ಬಗ್ಗೆ ಸಚಿವ ಮಹದೇವಪ್ಪ ಅವರು ಗಮನ ಹರಿಸಬೇಕು. ಅಲ್ಲದೇ ತಾಲೂಕಿನ ಸವಿತಾ ಸಮಾಜದವರಿಗೆ ಸರ್ಕಾರಿ ಸೌಲಭ್ಯ ದೊರೆಯಲು ಕ್ರಮ ಕೈಗೊಳ್ಳಬೇಕು. ಅಲ್ಲದೇ ಸಮುದಾಯ ಭವನ ಸೇರಿದಂತೆ ಸಮಾಜದ ಅಭಿವೃದ್ಧಿಗೆ ಅಗತ್ಯ ಅನುದಾನ ನೀಡುವಂತೆ ಮನವಿ ಮಾಡಿದರು.

ನೂತನ ಪದಾಧಿಕಾರಿಗಳು: ಸವಿತಾ ಸಮಾಜ ಹೋಬಳಿ ಶಾಖೆ ಸಂಘಗಳ ಒಕ್ಕೂಟದ ನೂತನ ಗೌರವಾಧ್ಯಕ್ಷರಾಗಿ ಡಿ.ಎಂ. ಸೋಮಣ್ಣ, ಉಪಾಧ್ಯಕ್ಷರಾಗಿ ಚೆಲುವರಾಜು, ಕಾರ್ಯದರ್ಶಿಯಾಗಿ ಅವಿನಾಶ್, ಖಜಾಂಚಿಯಾಗಿ ನಿಂಗರಾಜು, ಕಾರ್ಯಕಾರಿಣಿ ನಿರ್ದೇಶಕರಾಗಿ ದೇವರಾಜು ಸೋಸಲೆ, ಶಂಕರ್ ಯಡದೊರೆ, ಮಾದೇವ ಜಾಲಹಳ್ಳಿ, ಸಿದ್ದರಾಜು ಕೊತ್ತೇಗಾಲ ಹಾಗೂ ಮಹೇಶ್ ಅತ್ತಹಳ್ಳಿ ಅವರನ್ನು ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಈ ವೇಳೆ ಚೆಲುವರಾಜು, ನಿಂಗರಾಜು, ಮಹೇಶ್, ನಾಗೇಂದ್ರ ಮಾದೇಶ್, ಗಿರೀಶ್, ಶಂಕರ್, ರವಿ, ಗೋಪಿ, ಸಿದ್ದರಾಜು, ಮಹದೇವಪ್ಪ, ದೇವರಾಜು, ಸಿಡಿ ಸಿದ್ದಪ್ಪ, ನಿಂಗಯ್ಯ, ಸುರೇಶ್, ಶಂಕರ್ ಹಾಗೂ ಇನ್ನಿತರರಿದ್ದರು

ಕುಡಿಯುವ ನೀರು, ಮೂಲ ಸೌಕರ್ಯಕ್ಕೆ ಒತ್ತಾಯಿಸಿ ಪ್ರತಿಭಟನೆ



ಹೆಚ್.ಡಿ.ಕೋಟೆ, ಜೂ.20– ಕುಡಿಯುವ ನೀರು ಸೇರಿದಂತೆ ವಿವಿಧ ಮೂಲ ಸೌಕರ್ಯಕ್ಕೆ ಒತ್ತಾಯಿಸಿ ಪುರಸಭಾ ವ್ಯಾಪ್ತಿಯ ಹ್ಯಾಂಡ್‌ಪೋಸ್ಟ್ ಯರಳ್ಳಿ ಗ್ರಾಮದ ಮಹಿಳೆಯರು ಮಂಗಳವಾರ ಪ್ರತಿಭಟನೆ ನಡೆಸಿದರು.

ಪುರಸಭಾ ವ್ಯಾಪ್ತಿಗೊಳಪಡುವ ಹ್ಯಾಂಡ್ ಪೋಸ್ಟ್ ಯರಳ್ಳಿ ಗ್ರಾಮದ 18 ಮತ್ತು 20ನೇ ವಾರ್ಡ್‌ಗಳಿಗೆ ಕುಡಿಯುವ ನೀರು ಹಾಗೂ ವಿವಿಧ ಮೂಲ ಸೌಕರ್ಯಗಳನ್ನು ಕಲ್ಪಿಸುವಂತೆ ಮಹಿಳೆಯರು ಪಟ್ಟಣದ ಬಸ್ ನಿಲ್ದಾಣದಿಂದ ಬಿಂದಿಗೆ ಹೊತ್ತು ಮೆರವಣಿಗೆ ಮೂಲಕ ಪುರಸಭೆ ಕಚೇರಿಗೆ ತಲುಪಿ ಪ್ರತಿಭಟನೆ ನಡೆಸಿದರು.

ಆರ್‌ಪಿಐ ಜಿಲ್ಲಾಧ್ಯಕ್ಷೆ ಅನುಷಾ ಮಾತನಾಡಿ, ಪುರಸಭಾ ವ್ಯಾಪ್ತಿಯ ಹ್ಯಾಂಡ್‌ಪೋಸ್ಟ್ ಯರಳ್ಳಿ ಗ್ರಾಮದ 18 ಮತ್ತು 20ನೇ ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. ಈ ಸಂಬಂಧ ಪುರಸಭಾ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದರೂ, ವಾರ್ಡ್ ಸದಸ್ಯರು, ಅಧಿಕಾರಿಗಳು ಯಾವುದೇ ಕ್ರಮ ವಹಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಕೂಡಲೇ ಕುಡಿಯುವ ನೀರಿನ ಸಮಸ್ಯೆ ನಿವಾರಿಸಿ, ವಾರ್ಡ್‌ಗಳಿಗೆ ಮೂಲ ಸೌಕರ್ಯ ಒದಗಿಸಲು ಪುರಸಭೆ ಮುಂದಾಗಬೇಕು ಎಂದು ಆಗ್ರಹಿಸಿ ಮುಖ್ಯಾಧಿಕಾರಿ ಸುರೇಶ್ ಅವರಿಗೆ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಮುಖ್ಯಾಧಿಕಾರಿ ಸುರೇಶ್, ಕುಡಿಯುವ ನೀರು, ಮೂಲ ಸೌಕರ್ಯ ಕಲ್ಪಿಸುವಂತೆ ಮನವಿ ಸಲ್ಲಿಸಿದ್ದೀರಾ, ಇನ್ನೊಂದು ವಾರದೊಳಗೆ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲಾಗುವುದು. ಅಲ್ಲದೇ ವಾರ್ಡ್‌ಗಳಿಗೆ ಮೂಲ ಸೌಕರ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ತಾಲೂಕು ಮಹಿಳಾ ಒಕ್ಕೂಟದ ಅಧ್ಯಕ್ಷೆ ಶೈಲಾ, ಮುಖಂಡರಾದ ಸುಧಾಮಣಿ, ಜ್ಯೋತಿ, ಸರೋಜಾ, ರೂಪ, ಸುಕನ್ಯಾ, ಕವಿತಾ, ಭಾಗ್ಯ, ಪ್ರೇಮ, ಸವಿತಾ, ಕಮಲ, ಜಯಮ್ಮ, ಗೀತಾ, ಚಾಮುಂಡಮ್ಮ, ಪುಟ್ಟುತಾಯಮ್ಮ, ಕರ್ನಾಟಕ ರೈತ ಪರ್ವ ರಾಜ್ಯ ಉಪಾಧ್ಯಕ್ಷ ನವೀನ್ ಗೌಡ, ಗಣೇಶ್, ಸ್ವಾಮಿ, ಸೋಮೇಗೌಡ, ರೇವಮಣಿ, ಸುಶೀಲ, ಗೀತಾ, ಜಮುನಾ ಇನ್ನಿತರರಿದ್ದರು.



ಸರಗೂರು ಪಟ್ಟಣದಲ್ಲಿ ಗಾಣಿಗ ಸಮಾಜದಿಂದ ಶ್ರೀಸತ್ಯಪ್ಪನವರ ಕೊಂಡೋತ್ಸವ ವಿಜೃಂಭಣೆಯಿಂದ ಜರುಗಿತು. ಈ ವೇಳೆ ವೀರಶೈವ ಸಮಾಜದ ಅಧ್ಯಕ್ಷ ಎಸ್.ಎನ್.ಮೋಹನ್ ಕುಮಾರ್, ಶ್ರೀಕಂಠಸ್ವಾಮಿ, ಗಣೇಶ್, ಪಪಂ ಸದಸ್ಯ ವಿರೇಶ್, ಶಿವಾರ್ಚಕರಾದ ವಿರೂಪಾಕ್ಷ ಭಾಗಿಯಾಗಿದ್ದರು.

ಹೆಚ್.ಡಿ.ಕೋಟೆ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಮೀಸಲಾತಿ ನಿಗದಿ

ಹೆಚ್.ಡಿ.ಕೋಟೆ, ಜೂ.20– ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಮಂಗಳವಾರ ಹೆಚ್.ಡಿ.ಕೋಟೆ ತಾಲೂಕಿನ 26 ಹಾಗೂ ಸರಗೂರು ತಾಲೂಕಿನ 13 ಗ್ರಾಪಂಗಳ 2ನೇ ಅವಧಿಯ ಬಾಕಿ 30 ತಿಂಗಳ ಅಧಿಕಾರಾವಧಿಗಾಗಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಅಧ್ಯಕ್ಷತೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳ ಮೀಸಲು ಪ್ರಕ್ರಿಯೆ ಯಶಸ್ವಿಯಾಗಿ ನಡೆಯಿತು.

ತಾಲೂಕಿನ ಎಲ್ಲಾ ಗ್ರಾಪಂಗಳ ಸದಸ್ಯರು ಮೀಸಲು ನಿಗದಿತ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜಿಲ್ಲಾಧಿಕಾರಿಗಳು ಯಾವುದೇ ಗೊಂದಲಕ್ಕೆ ಅವಕಾಶ ನೀಡದೇ ಮೀಸಲಾತಿ ಪ್ರಕ್ರಿಯೆ ನಡೆಸಿಕೊಟ್ಟರು.

ನಂತರ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಯಾವುದೇ ಒತ್ತಡಕ್ಕೆ ಮಣಿದು ಮೀಸಲಾತಿ ಪ್ರಕಟಿಸಲು ಸಾಧ್ಯವಿಲ್ಲ. 1993 ರಿಂದ ಇಲ್ಲಿವರೆಗೆ ಪರಿಶಿಷ್ಟ ಜಾತಿ, ವರ್ಗ ಹಾಗೂ ಸಾಮಾನ್ಯ ವರ್ಗಕ್ಕೆ ಅನ್ಯಾಯವಾಗದಂತೆ ಮೀಸಲಾತಿ ಪ್ರಕಟಿಸಲಾಗಿದೆ. ಮಹಿಳೆಯರಿಗೆ ಶೇ.50 ಮೀಸಲಾತಿ ನೀಡಲಾಗಿದೆ ಎಂದರು.

ಗ್ರಾಪಂ ಸದಸ್ಯರಾಗುವುದು ಕಷ್ಟ, ಅದರಲ್ಲೂ ನಮ್ಮವರೇ ಅಧ್ಯಕ್ಷರಾಗಬೇಕು ಎಂಬುದು ಎಲ್ಲರಲ್ಲೂ ಇದ್ದೇ ಇರುತ್ತದೆ. ಪಾರದರ್ಶಕವಾಗಿ ಮೀಸಲಾತಿ ಮಾಡದಿದ್ದರೆ ನಮಗೆ ತೊಂದರೆ. ಸ್ವಯಂ ನಾವು ಏನನ್ನೂ ಮಾಡಲು ಸಾಧ್ಯವಿಲ್ಲ. ಎಲ್ಲವೂ ಸಿಸ್ಟಂ ಪ್ರಕಾರ ಮಾಡಬೇಕಾಗಿದೆ ಎಂದು ತಿಳಿಸಿದರು.

ಈ ವೇಳೆ ಮೈಸೂರು ಮುಡಾ ಹೆಚ್ಚುವರಿ ಆಯುಕ್ತೆ ರೂಪ, ಹುಣಸೂರು ಉಪವಿಭಾಗಾಧಿಕಾರಿ ರುಚಿ ಬಿಂದಾಲ್, ತಹಸೀಲ್ದಾರ್ ಪಿ.ಎಸ್.ಮಹೇಶ್, ಸರಗೂರು ತಹಸೀಲ್ದಾರ್ ಶಂಷಾಆಲಂ, ಸರಗೂರು ಇಓ ಸುಷ್ಮಾ ಇದ್ದರು.



ಕೋಟೆ ಗ್ರಾಪಂಗಳ ಮೀಸಲಾತಿ ವಿವರ: ಆಲನಹಳ್ಳಿ ಅಧ್ಯಕ್ಷ (ಪ.ಪಂಗಡ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಜಿ.ಬಿ.ಸರಗೂರು ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಪ.ಜಾತಿ ಮಹಿಳೆ), ಕ್ಯಾತನಹಳ್ಳಿ ಅಧ್ಯಕ್ಷ (ಪ.ಪಂಗಡ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಬಾಚಗೌಡನಹಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಪ.ಜಾತಿ ಮಹಿಳೆ), ಚಿಕ್ಕೆರೆಯೂರು ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಪ.ಜಾತಿ ಮಹಿಳೆ), ಕಂಚಮಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಪ.ವರ್ಗ ಮಹಿಳೆ), ಹೊಮ್ಮರಗಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಪ.ಜಾತಿ), ಹಂಪಾಪುರ ಅಧ್ಯಕ್ಷ (ಪ.ಜಾತಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಮಾದಾಪುರ ಅಧ್ಯಕ್ಷ (ಪ.ವರ್ಗ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಹೈರಿಗೆ ಅಧ್ಯಕ್ಷ (ಪ.ವರ್ಗ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಹಬ್ಬಲಗುಪ್ಪೆ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಪ.ವರ್ಗ), ತುಂಬಸೋಗೆ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಪವರ್ಗ ಮಹಿಳೆ), ನಾಗನಹಳ್ಳಿ ಅಧ್ಯಕ್ಷ (ಪಜಾತಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಹಿರೇಹಳ್ಳಿ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಪ.ವರ್ಗ ಮಹಿಳೆ), ಚಕ್ಕೋಡನಹಳ್ಳಿ ಅಧ್ಯಕ್ಷ (ಪ.ಜಾತಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಅಣ್ಣೂರು ಅಧ್ಯಕ್ಷ (ಪ.ಜಾತಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಭೀಮನಹಳ್ಳಿ ಅಧ್ಯಕ್ಷ (ಪ.ವರ್ಗ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಪಡುಕೋಟೆಕಾವಲ್ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಪ.ಜಾತಿ), ಸವ್ವೆ ಅಧ್ಯಕ್ಷ (ಪ.ಜಾತಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಬೀಚನಹಳ್ಳಿ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಪವರ್ಗ), ಅಂತರಸಂತೆ ಅಧ್ಯಕ್ಷ (ಪ.ಜಾತಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಹೊಸಹೊಳಲು ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಪ.ಜಾತಿ), ನೂರಲಕುಪ್ಪೆ ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಪ.ವರ್ಗ), ಎನ್.ಬೆಳ್ತೂರು ಅಧ್ಯಕ್ಷ (ಪ.ಜಾತಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಎನ್.ಬೇಗೂರು ಅಧ್ಯಕ್ಷ (ಪ.ವರ್ಗ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ದೊಡ್ಡ ಭೈರನಕುಪ್ಪೆ ಅಧ್ಯಕ್ಷ (ಸಾಮಾನ್ಯ ವರ್ಗ), ಉಪಾಧ್ಯಕ್ಷ (ಪ.ಜಾತಿ ಮಹಿಳೆ) ವರ್ಗಗಳಿಗೆ ಮೀಸಲಾತಿ ನಿಗದಿಯಾಗಿದೆ.

ಸರಗೂರು ಗ್ರಾಪಂಗಳ ಮೀಸಲಾತಿ ವಿವರ

ಇಟ್ನಾ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಸಿ ಮಹಿಳೆ), ಕೆ.ಬೆಳತೂರು ಅಧ್ಯಕ್ಷ (ಎಸ್ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಮನುಗನಹಳ್ಳಿ ಅಧ್ಯಕ್ಷ (ಎಸ್ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಕಲ್ಲಂಬಾಳು ಅಧ್ಯಕ್ಷ (ಎಸ್‌ಟಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಮುಳ್ಳೂರು ಅಧ್ಯಕ್ಷ (ಎಸ್‌ಟಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ), ಹಂಚೀಪುರ ಅಧ್ಯಕ್ಷ (ಎಸ್ಸಿ ಮಹಿಳೆ), ಉಪಾಧ್ಯಕ್ಷ (ಸಾಮಾನ್ಯ) ಕೊತ್ತೇಗಾಲ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್ಸಿ ಮಹಿಳೆ), ಸಾಗರೆ ಅಧ್ಯಕ್ಷ (ಸಾಮಾನ್ಯ ಮಹಿಳೆ) ಉಪಾಧ್ಯಕ್ಷ (ಎಸ್‌ಟಿ ಮಹಿಳೆ) ಎಂ.ಸಿ.ತಳಲು ಅಧ್ಯಕ್ಷ (ಎಸ್‌ಸಿ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಹಾದನೂರು ಅಧ್ಯಕ್ಷ (ಸಾಮಾನ್ಯ ಮಹಿಳೆ), ಉಪಾಧ್ಯಕ್ಷ (ಎಸ್‌ಸಿ), ಹೆಗ್ಗನೂರು ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಎಸ್‌ಟಿ ಮಹಿಳೆ), ಬಿ.ಮಟಕೆರೆ ಅಧ್ಯಕ್ಷ (ಸಾಮಾನ್ಯ), ಉಪಾಧ್ಯಕ್ಷ (ಸಾಮಾನ್ಯ ಮಹಿಳೆ), ಬಿದರಹಳ್ಳಿ ಅಧ್ಯಕ್ಷ (ಸಾಮಾನ್ಯ ಮಹಿಳೆ) ಉಪಾಧ್ಯಕ್ಷ (ಎಸ್‌ಟಿ) ವರ್ಗಗಳಿಗೆ ಮೀಸಲಾತಿ ನಿಗದಿಯಾಗಿದೆ.

ಬೈಕ್‌ಗೆ ಟಿಪ್ಪರ್ ಡಿಕ್ಕಿ: ಸವಾರ ಸಾವು, ಮತ್ತೋರ್ವ ಗಂಭೀರ

ನಂಜನಗೂಡು, ಜೂ.20– ಬೈಕ್‌ಗೆ ಎಂ.ಸ್ಯಾಂಡ್ ತುಂಬಿದ್ದ ಟಿಪ್ಪರ್ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿ, ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ತಾಲೂಕಿನ ಬಂಚಳ್ಳಿಹುಂಡಿ ಗ್ರಾಮದ ಬಳಿ ಜರುಗಿದೆ.

ಗುಂಡ್ಲುಪೇಟೆ ತಾಲೂಕಿನ ಅರೇಪುರ ಗ್ರಾಮದ ನಿವಾಸಿ ಶಿವಸ್ವಾಮಿ(30), ಸಾವನ್ನಪ್ಪಿದವರು. ಹಿಂಬದಿ ಸವಾರ ಅದೇ ಗ್ರಾಮದ ಮಹೇಶ್(24) ಗಂಭೀರವಾಗಿ ಗಾಯಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇಮ್ಮಾವು ಕೈಗಾರಿಕಾ ಪ್ರದೇಶದ ಏಷಿಯನ್ ಪೈಂಟ್ಸ್ ಕಾರ್ಖಾನೆ ಕಾರ್ಮಿಕರಾಗಿದ್ದ ಶಿವಸ್ವಾಮಿ ಮತ್ತು ಮಹೇಶ್ ಮಂಗಳವಾರ 2ನೇ ಪಾಳಿ ಕೆಲಸಕ್ಕೆ ಬೈಕ್‌ನಲ್ಲಿ ಅರೇಪುರದಿಂದ ಹೋಗುತ್ತಿದ್ದ ವೇಳೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ತಾಲೂಕಿನ ಬಂಚಳ್ಳಿಹುಂಡಿ ಗ್ರಾಮದ ಬಳಿ ಬಲಗಡೆಗೆ ತಿರುವು ಪಡೆಯಲೆಂದು ರಸ್ತೆಯಲ್ಲಿ ನಿಂತಿದ್ದ ವೇಳೆ ಚಾಲಕನ ಅಜಾಗರೂಕತೆ ಮತ್ತು ಅತೀ ವೇಗದಿಂದ ಬಂದ ಎಂ.ಸ್ಯಾಂಡ್ ತುಂಬಿದ್ದ ಟಿಪ್ಪರ್ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕೆಳಗೆ ಬಿದ್ದ ಶಿವಸ್ವಾಮಿ ಮೇಲೆ ಟಿಪ್ಪರ್ ಚಕ್ರ ಹರಿದು ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಹಿಂಬದಿ ಸವಾರನ ಕಾಲಿನ ಮೇಲೆ ಹರಿದು ಗಂಭೀರವಾಗಿ ಗಾಯಗೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಎಂ.ಸ್ಯಾಂಡ್ ತುಂಬಿದ ಟಿಪ್ಪರ್‌ಗಳು ಅತಿಯಾದ ಲೋಡ್ ತುಂಬಿಕೊಂಡು ಬರುವುದರಿಂದ ಬೈಕ್ ಸವಾರರ ಕಣ್ಣಿಗೆ ಧೂಳಿನ ಕಣಗಳು ಬೀಳುತ್ತವೆ. ಜೊತೆಗೆ ಪೊಲೀಸರು ವಾಹನ ಹಿಡಿಯುತ್ತಾರೆ ಎಂಬ ಭಯದಿಂದ ಅತೀ ವೇಗವಾಗಿ ವಾಹನ ಚಾಲನೆ ಮಾಡಿಕೊಂಡು ಬರುವುದರಿಂದ ಪ್ರತಿ ದಿನ ಇಂತಹ ಘಟನೆಗಳು ಜರುಗುತ್ತಿವೆ. ಇದರಿಂದ ಅಮಾಯಕರು ಜೀವ ಕಳೆದುಕೊಳ್ಳುತ್ತಿದ್ದಾರೆ. ಓವರ್ ಲೋಡ್ ಆಗಿರುವ ಟಿಪ್ಪರ್‌ಗಳ ಮೇಲೆ ಅಧಿಕಾರಿಗಳು ಕ್ರಮ ಜರುಗಿಸಿ ಅಪಘಾತ ತಪ್ಪಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಯಾಸ್ಮೀನ್ ತಾಜ್ ಭೇಟಿ ನೀಡಿ ಪರಿಶೀಲಿಸಿ ವಾಹನವನ್ನು ವಶಕ್ಕೆ ಪಡೆದು ಶವವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದರು. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಿಂಗರಾಜಪ್ಪ ನಿಧನ



ಬೆಟ್ಟದಪುರ, ಜೂ.20– ಪಿರಿಯಾಪಟ್ಟಣ ತಾಲೂಕಿನ ಪಂಚವಳ್ಳಿ ಗ್ರಾಮದ ನಿವಾಸಿ ಪಿ.ಸಿ.ನಿಂಗರಾಜಪ್ಪ(67) ಮಂಗಳವಾರ ಸಂಜೆ ನಿಧನರಾದರು. ಮೃತರು ಪತ್ನಿ ರೇಣುಕಮ್ಮ, ಪಂಚವಳ್ಳಿ ಪಿಎಸಿಎಸ್ ಮಾಜಿ ಅಧ್ಯಕ್ಷ ಸಂತೋಷ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಿರೀಶ್ ಮಧುಸೂದನ್



ಸರಗೂರು, ಜೂ.20– ಶಿವಮೊಗ್ಗ ಮೂಲದ ನಿವಾಸಿ ಗಿರೀಶ್ ಮಧುಸೂದನ್(48) ಮಂಗಳವಾರ ನಿಧನರಾದರು. ಇವರು ಸರಗೂರಿನ 11ನೇ ವಾರ್ಡ್ ಬಿಡಗಲು ಬಳಿ ಫಾರಂಹೌಸ್ ಖರೀದಿಸಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು. ಮಂಗಳವಾರ ಬೆಳಗ್ಗೆ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮೃತರ ಫಾರಂ ಹೌಸ್‌ನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ.





ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



2ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ ಎರಡು ವರುಷ ಕಳೆದರೂ ನಿಮ್ಮ ನೆನಪಿನಲ್ಲೇ ಇರುವ

ಇಂತಿ ದುಃಖತಪ್ತರು

ಪತ್ನಿ ಕೆಂಪಮ್ಮ, ಮಕ್ಕಳು ಹಾಗೂ ಮೊಮ್ಮಕ್ಕಳು ಜಯನಗರ, ಮೈಸೂರು

ಶ್ರೀ ಬಿ.ಶಂಭಣ್ಣ

1959–2021

ಎಸ್.ಎಂ.ಟೆಂಟ್‌ಹೌಸ್, ಮಾಲೀಕರು

13ನೇ ವರ್ಷದ ಸವಿನೆನಪು




ನೀವು ನಮ್ಮನ್ನಗಲಿ 13 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ.

ದುಃಖತಪ್ತರು: ಪತ್ನಿ, ಮಕ್ಕಳು, ಅಳಿಯ, ಸೊಸೆ ಮತ್ತು ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಶ್ರೀ ಚೆಲುವೇಗೌಡರು

ಬೆಳವಾಡಿ

SAD DEMISE



SENTI VINCENT

DOD: 20.06.2023

Funeral will be held on 21.06.2023 at 11am at CSI Cemetery, Mahadevapura Road, Gandhinagar, Mysore

